ಕರ್ನಾಟಕ ಸರ್ಕಾರ

# ಸಿರಿ ಕನ್ನಡ - ೬

ಕನ್ನಡ ದ್ವಿತೀಯ / ತೃತೀಯ ಭಾಷಾ ಪಠ್ಯಪುಸ್ತಕ



ಹತ್ತನೆಯ ೧೦ ತರಗತಿ

ಪಠ್ಯಪುಸ್ತಕ ನಿರ್ದೇಶನಾಲಯ
ಬನಶಂಕರಿ ೩ನೇ ಹಂತ,
ಬೆಂಗಳೂರು-೮೫

# ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯ ಹೇ |
ಭಾರತ ಭಾಗ್ಯ ವಿಧಾತಾ |
ಪಂಜಾಬ ಸಿಂಧು ಗುಜರಾತ ಮರಾಠಾ |
ದ್ರಾವಿಡ ಉತ್ಕಲ ವಂಗಾ ||
ವಿಂಧ್ಯ ಹಿಮಾಚಲ ಯಮುನಾ ಗಂಗಾ |
ಉಚ್ಛಲ ಜಲಧಿ ತರಂಗಾ ||
ತವ ಶುಭ ನಾಮೇ ಜಾಗೇ |
ತವ ಶುಭ ಆಶಿಷ ಮಾಗೇ |
ಗಾಹೇ ತವ ಜಯಗಾಥಾ |
ಜನಗಣ ಮಂಗಳದಾಯಕ ಜಯ ಹೇ ||
ಭಾರತ ಭಾಗ್ಯ ವಿಧಾತಾ |
ಜಯ ಹೇ ಜಯ ಹೇ ಜಯ ಹೇ ||
ಜಯ ಜಯ ಜಯ ಜಯ ಹೇ ||

— ರವೀಂದ್ರನಾಥ ಠಾಕೂರ್

# ತಿಳಿ ಕನ್ನಡ - ೬

ಕನ್ನಡ ದ್ವಿತೀಯ / ತೃತೀಯ ಭಾಷೆ ಪಠ್ಯಪುಸ್ತಕ

## ಹತ್ತನೆಯ ತರಗತಿ

ಪಠ್ಯಪುಸ್ತಕ ನಿರ್ದೇಶನಾಲಯ
ಬನಶಂಕರಿ ೩ನೇ ಹಂತ, ಬೆಂಗಳೂರು - ೮೫

೧. ಪಠ್ಯಪುಸ್ತಕದ ಶಿರೋನಾಮೆ : ತಿಳಿ ಕನ್ನಡ – ೬
ಕನ್ನಡ ದ್ವಿತೀಯ/ತೃತೀಯ ಭಾಷೆ
೧೦ನೇ ತರಗತಿ

೨. ಪ್ರಕಟಣೆಯ ಹಕ್ಕುಗಳು : ನಿರ್ದೇಶಕರು
ಪಠ್ಯಪುಸ್ತಕ ನಿರ್ದೇಶನಾಲಯ
೧೦೦ ಅಡಿ ವರ್ತುಲ ರಸ್ತೆ
ಬನಶಂಕರಿ ೩ನೇ ಹಂತ
ಬೆಂಗಳೂರು – ೫೬೦ ೦೮೫

೩. ಪರಿಷ್ಕೃತ ಮುದ್ರಣ : ೨೦೦೪

೪. ಮುದ್ರಕರು /ಪ್ರಕಾಶಕರು : ಲಾವಣ್ಯ ಮುದ್ರಣ
ನಂ.೧೯, ೧೫ನೇ ಕ್ರಾಸ್,
ಬಿ.ಎಸ್.ಕೆ. ೧ನೇ ಹಂತ,
ಬೆಂಗಳೂರು –೫೦
☎ : ೨೬೬೧೦೫೬೩
೨೬೫೨೭೨೯

೫. ಮುದ್ರಣ ಕಾಗದ ಬಳಕೆ : ೬೦ ಜಿ.ಎಸ್.ಎಂ.
(ಎಂ.ಪಿ.ಎಂ. ಪೇಪರ್)

೬. ಮುದ್ರಿಸಲು ಆದೇಶಿಸಿದ ಪ್ರತಿಗಳ ಸಂಖ್ಯೆ : ೪೦,೦೦೦

೭. ಬೆಲೆ : ರೂ. ೬-೫೦

# ಪಠ್ಯಪುಸ್ತಕ ರಚನಾ ಸಮಿತಿ

ಅಧ್ಯಕ್ಷರು

**ಡಾ. ನಾ. ದಾಮೋದರ ಶೆಟ್ಟಿ**
ಮುಖ್ಯಸ್ಥರು, ಕನ್ನಡ ವಿಭಾಗ
ಸಂತ ಎಲೋಶಿಯಸ್ ಕಾಲೇಜು
ಮಂಗಳೂರು - ೩.

ಸಂಯೋಜಕರು

**ಪಾಂಡುರಂಗ**
ಹಿರಿಯ ಸಹಾಯಕ ನಿರ್ದೇಶಕರು,
ಪಠ್ಯಪುಸ್ತಕ ನಿರ್ದೇಶನಾಲಯ,
ಬೆಂಗಳೂರು - ೮೫.

ಸದಸ್ಯರು

**ಡಾ. ಮುಳುಕುಂಟೆ ರಮೇಶ್**
ಕನ್ನಡ ಅಧ್ಯಾಪಕರು
ರಾಗೀಗುಡ್ಡ ಪ್ರೌಢಶಾಲೆ, ೯ನೇ ಬಡಾವಣೆ,
ಜಯನಗರ, ಬೆಂಗಳೂರು - ೬೯.

**ನಾ. ನಾಗಚಂದ್ರ**
ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ
ನಗುವನಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು,
ಮಂಡ್ಯಜಿಲ್ಲೆ.

**ಎಸ್.ಎಮ್. ಚಂದ್ರಹಾಸ**
ಮುಖ್ಯೋಪಾಧ್ಯಾಯರು,
ಧರ್ಮಸಾಗರ ಪ್ರೌಢಶಾಲೆ, ದೊಮ್ಮಸಂದ್ರ
ಬೆಂಗಳೂರು, ದಕ್ಷಿಣ ಜಿಲ್ಲೆ.

**ಡಾ. ಕೆ.ವಿ. ಚಂದ್ರಣ್ಣಗೌಡ,**
ಉಪಪ್ರಾಚಾರ್ಯರು,
ವಿ.ವಿ.ಪುರಂ ಸಂಜೆ ಕಾಲೇಜು,
ಬೆಂಗಳೂರು - ೪.

**ಲೀಲಾ ಹಿರೇಮಠ**
ಕನ್ನಡ ಉಪನ್ಯಾಸಕರು,
ಸರ್ಕಾರಿ ಪದವಿಪೂರ್ವ ಕಾಲೇಜು,
ರಾಯಚೂರು - ೧.

**ಜೈನಹಳ್ಳಿ ಸತ್ಯನಾರಾಯಣ ಗೌಡ,**
ಕನ್ನಡ ಅಧ್ಯಾಪಕರು,
ಸರ್ಕಾರಿ ಮಹಾರಾಣಿ ಪ್ರಶಿಕ್ಷಣ ತರಬೇತಿ ಸಂಸ್ಥೆ,
ಮೈಸೂರು - ೨೪.

ಪರಿಶೀಲನಾ ಸಮಿತಿ

**ಡಾ. ಚಂದ್ರಶೇಖರ ಕಂಬಾರ**
ನಿವೃತ್ತ ಕುಲಪತಿಗಳು,
ಕನ್ನಡ ವಿಶ್ವವಿದ್ಯಾಲಯ,
ವಿದ್ಯಾರಣ್ಯ, ಹಂಪಿ.

**ಡಾ. ಕೆ. ವಿ. ನಾರಾಯಣ**
ಕುಲಸಚಿವರು,
ಕನ್ನಡ ವಿಶ್ವವಿದ್ಯಾಲಯ,
ವಿದ್ಯಾರಣ್ಯ, ಹಂಪಿ.

**ಡಾ. ಹೇಮಾ ಪಟ್ಟಣಶೆಟ್ಟಿ**
ಹೂಮನೆ, ವಿದ್ಯಾಗಿರಿ,
ಧಾರವಾಡ - ೪.

**ಎಲ್. ನರಸಿಂಹಯ್ಯ**
ನಿವೃತ್ತ ಮುಖ್ಯ ಶಿಕ್ಷಕರು,
ಗ್ರಾಮಾಂತರ ಪ್ರೌಢ ಶಾಲೆ,
ಹಾರೋಹಳ್ಳಿ, ಬೆಂಗಳೂರು.

# ಮುನ್ನುಡಿ

ತಿಳಿ ಕನ್ನಡ ಮಾಲಿಕೆಯಲ್ಲಿ ಇದು ಆರನೆಯ ಪುಸ್ತಕ. ಕನ್ನಡವನ್ನು ತಿಳಿಯುವ ಹಾಗೂ ತಿಳಿಯಾದ ಕನ್ನಡವನ್ನು ಕಲಿಯುವ ವಿದ್ಯಾರ್ಥಿಗಳಿಗೆ ಇಲ್ಲಿ ಕೊಟ್ಟಿರುವ ಪಾಠಗಳಷ್ಟೂ ಹಿತಕಾರಿಯಾಗಬೇಕೆಂಬ ಅರ್ಥವನ್ನು ಶೀರ್ಷಿಕೆ ಒಳಗೊಂಡಿದೆ ಎಂಬುದು ನಮ್ಮ ಅಭಿಪ್ರಾಯ.

ದ್ವಿತೀಯ/ತೃತೀಯ ಭಾಷೆಯನ್ನು ಕಲಿಯುವ ಹತ್ತನೆಯ ತರಗತಿಯ ವಿದ್ಯಾರ್ಥಿಗಳು ಇದನ್ನು ಓದಬೇಕಾಗಿದೆ. ಹಾಗಾಗಿ ಹಳಗನ್ನಡದ ಜಟಿಲತೆಯನ್ನು ಅವರಿಂದ ದೂರ ಇರಿಸಲಾಗಿದೆ.

ಸಮಿತಿಯ ಪ್ರತಿಭಾನ್ವಿತ ಸದಸ್ಯರು ವೈವಿಧ್ಯಮಯವಾದ ಪಾಠಗಳನ್ನು ಆಯ್ದು ಈ ಹೊತ್ತಗೆಯನ್ನು ಸಿದ್ಧಪಡಿಸಿದ್ದಾರೆ. ಅವರಿಗೆ ಇಲಾಖೆಯು ತನ್ನ ಆಭಾರವನ್ನು ಸಲ್ಲಿಸುತ್ತದೆ. ಈ ಪಠ್ಯಪುಸ್ತಕ ರಚನೆಗೊಂಡ ಬಳಿಕ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಇದು ಪರಿಷ್ಕರಣೆಗೊಂಡಿದೆ ಹಾಗೂ ಡಾ. ಚಂದ್ರಶೇಖರ ಕಂಬಾರರ ಅಧ್ಯಕ್ಷತೆಯ ಪರಿಶೀಲನ ಸಮಿತಿಯು ಕೊಟ್ಟ ಸಲಹೆ-ಸೂಚನೆಗಳನ್ನೂ ಅಳವಡಿಸಿಕೊಳ್ಳಲಾಗಿದೆ. ಇವರಿಗೆ ಪಠ್ಯಪುಸ್ತಕ ನಿರ್ದೇಶನಾಲಯದ ವತಿಯಿಂದ ಧನ್ಯವಾದಗಳು.

ಕಲಿಯುವ ವಿದ್ಯಾರ್ಥಿಗಳು, ಕಲಿಸುವ ಅಧ್ಯಾಪಕರು ಇದರ ಲಾಭವನ್ನು ಪಡೆಯಬೇಕಾಗಿ ವಿನಂತಿ. ಪಠ್ಯಪುಸ್ತಕವನ್ನು ಪ್ರಾಮಾಣಿಕ ವಿಮರ್ಶೆಗೆ ಒಳಪಡಿಸಿ ಅದರ ಒಳಿತು ಕೆಡುಕುಗಳನ್ನು ಎತ್ತಿ ತೋರಿಸಿದರೆ, ನಾವದನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇವೆ.

೨೮-೨-೨೦೦೪

ನಿರ್ದೇಶಕರು,
ಪಠ್ಯಪುಸ್ತಕ ನಿರ್ದೇಶನಾಲಯ
ಬೆಂಗಳೂರು.

## ತಿಳಿ ಕನ್ನಡ ತಿಳಿಯುವ ಮುನ್ನ...

ಹತ್ತನೆಯ ತರಗತಿ ದ್ವಿತೀಯ ಅಥವಾ ತೃತೀಯ ಭಾಷೆ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಮಟ್ಟವನ್ನು ಗಮನದಲ್ಲಿಟ್ಟುಕೊಂಡು ಹಾಗೂ ಪಠ್ಯಕ್ರಮದ ರೂಪುರೇಷೆಯನ್ನು ಮುಂದಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ಸಿದ್ಧಗೊಳಿಸಲಾಗಿದೆ. ಇದರ ಜೊತೆಗೇನೆ ತುಸು ಭಿನ್ನತೆಯನ್ನೂ ವೈಶಿಷ್ಟ್ಯವನ್ನೂ ಮೈಗೂಡಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಸಾಮಾನ್ಯವಾಗಿ ಬಳಸುವ ನಾಡಗೀತೆ ಈ ಬಾರಿ ನಾಡಸಿರಿಯನ್ನಷ್ಟೇ ಹೇಳುವ ಗೀತೆಯಾಗಿ ನಿಲ್ಲದೆ ಸಮಸ್ತ ಕನ್ನಡಿಗರನ್ನು ಜಾಗತಿಕ ಮಟ್ಟದಲ್ಲಿ ಪ್ರತಿನಿಧಿಸಬಲ್ಲ ಕವಿಗಳ ಕುರಿತಾದ ಭಾವನಾತ್ಮಕ ವಿಶ್ಲೇಷಣೆಯನ್ನೊಳಗೊಂಡಿದೆ. ಗಾಂಧೀಜಿಯವರನ್ನು ಮಕ್ಕಳಿಗೆ ಮತ್ತೆ ಮತ್ತೆ ನೆನಪಿಸಿಕೊಡಬೇಕಾದ ಅಗತ್ಯವನ್ನು ನಾವು ಮನಗಂಡಿದ್ದೇವೆ. ಕವಿ ಬೇಂದ್ರೆಯವರನ್ನು ಕತೆಗಾರರನ್ನಾಗಿಯೂ ಕಂಡುಕೊಳ್ಳುವುದು ಸಾಧ್ಯವಾಗುವುದು ಅವರ ಮನಮಿಡಿಯುವ 'ಮಗುವಿನ ಕರೆ'ಯ ಮೂಲಕ. ವಚನಗಳಿಗಾಗಿ ಹನ್ನೆರಡನೆಯ ಶತಮಾನಕ್ಕೇ ಹೋಗಬೇಕೆಂದಿಲ್ಲ; ಆಧುನಿಕರೂ ಸಮರ್ಥವಾಗಿ ಬರೆಯಬಹುದಲ್ಲ? ಅಂಥವರನ್ನು ಈ ಪಠ್ಯದೊಳಕ್ಕೆ ಆವಾಹಿಸಿಕೊಂಡಿದ್ದೇವೆ. ನವೋದಯ, ನವ್ಯ, ಬಂಡಾಯ, ಸಾಂಗತ್ಯ, ಕೀರ್ತನೆ, ವಚನ, ಜಾನಪದ, ಕಥನಕವನ, ಭಾವಗೀತೆ - ಹೀಗೆ ಒಂಬತ್ತು ಕವನಗಳನ್ನು ಒಂಬತ್ತು ಪ್ರಕಾರಗಳಿಂದ ಆಯಲಾಗಿದೆ.

ಗದ್ಯದಲ್ಲೂ ಸಾಕಷ್ಟು ವೈವಿಧ್ಯವನ್ನು ಕಾಯ್ದುಕೊಳ್ಳಲಾಗಿದೆ. ಹಾಸ್ಯ, ನಾಟಕ, ಪ್ರವಾಸ, ಕಲಾವಿದ, ಸ್ವಾತಂತ್ರ್ಯ ಹೋರಾಟಗಾರ, ಪ್ರಕೃತಿ, ಜಲ, ದೇಶಪ್ರೇಮ, ಮಾತೃವಾತ್ಸಲ್ಯ - ಹೀಗೆ ಒಂದಕ್ಕಿಂತ ಒಂದು ಭಿನ್ನವಾಗಿರುವಂತೆ ನೋಡಿಕೊಳ್ಳಲಾಗಿದೆ.

ವ್ಯಾಕರಣವನ್ನು ಪ್ರತ್ಯೇಕವಾಗಿ ಕಲಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ನಿರುತ್ಸಾಹ ಮೂಡದೇ ಇರಲಿ ಎಂಬ ಕಾರಣದಿಂದ ಪಾಠಕ್ಕೆ ಹೊಂದಿಕೊಂಡೇ ಕ್ರಿಯಾತ್ಮಕವಾಗಿ ಅವುಗಳನ್ನು ಬಳಸಿಕೊಳ್ಳಲಾಗಿದೆ. ಗಾದೆ, ಒಗಟು, ಪ್ರಬಂಧ ವಿಷಯಗಳು - ಇವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅನುಬಂಧ ರೂಪದಲ್ಲಿ ಕೊಡಲಾಗಿದೆ. ಅಧ್ಯಾಪಕರು ಪ್ರಶ್ನೆ ಕೇಳುವ ಸಂದರ್ಭದಲ್ಲಿ ಇವುಗಳ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಕೆಲವು ಪಾಠಗಳ ಜೊತೆಗೆ ಪೂರಕ ವ್ಯಾಸಂಗವನ್ನೂ ಕೊಡಲಾಗಿದೆ. ವಿದ್ಯಾರ್ಥಿಗಳ ಕುತೂಹಲವನ್ನು ಕೆರಳಿಸುವ ಉದ್ದೇಶವಷ್ಟೇ ಅದಕ್ಕಿದೆ. ಅದರಲ್ಲಿ ಪ್ರಶ್ನೆಗಳನ್ನು ಕೇಳುವಂತಿಲ್ಲ. ವಾರಕ್ಕೆ ಐದು ಅವಧಿಯಂತೆ ಪಾಠ ಮಾಡುವುದಕ್ಕೆ ಬೇಕಾದಷ್ಟು ಪಠ್ಯವಸ್ತುವನ್ನು ಇಲ್ಲಿ ನೀಡಲಾಗಿದೆ ಎಂಬುದನ್ನು ಅಧ್ಯಾಪಕರು ಗಮನಿಸಬೇಕು.

ತೃತೀಯ/ದ್ವಿತೀಯ ಭಾಷೆಯಾಗಿ ಕನ್ನಡ ಕಲಿಯುವ ವಿದ್ಯಾರ್ಥಿಗಳ 'ಸ್ವೀಕರಣ ಶಕ್ತಿ'ಯನ್ನು ಗಮನದಲ್ಲಿರಿಸಿಕೊಂಡು 'ತಿಳಿ ಕನ್ನಡ - ೬'ನ್ನು ರಚಿಸಲಾಗಿದೆ ಎಂಬುದಾಗಿ ಪ್ರತ್ಯೇಕ ಹೇಳಬೇಕಾಗಿಲ್ಲ ತಾನೆ?

ಪಠ್ಯಪುಸ್ತಕ ರಚನೆಯ ಸುದೀರ್ಘ ಪಯಣದಲ್ಲಿ ಸಮಿತಿಯ ಸದಸ್ಯರ ಪ್ರಾಮಾಣಿಕ ಕೊಡುಗೆಯನ್ನು ಅಭಿಮಾನಪೂರ್ವಕ ಸ್ಮರಿಸಿಕೊಳ್ಳುವೆ. ಇಲಾಖೆಯ ಅಧಿಕಾರಿಗಳು ಸಕಲ ಸೌಕರ್ಯಗಳೊಂದಿಗೆ ಪೂರಕ ವಾತಾವರಣವನ್ನು ಕಲ್ಪಿಸಿಕೊಟ್ಟಿದ್ದಾರೆ.

ಹೊಸ ಆಶೋತ್ತರಗಳನ್ನು ಹೊತ್ತ ಈ ಪಠ್ಯಪುಸ್ತಕ ಇದೀಗ ನಿಮ್ಮ ಕೈಯಲ್ಲಿದೆ. ನೀವಿದ್ದೀರಿ, ವಿದ್ಯಾರ್ಥಿಗಳಿದ್ದಾರೆ. ವಂದನೆಗಳು.

ನಾ. ದಾಮೋದರ ಶೆಟ್ಟಿ
ಅಧ್ಯಕ್ಷ.

# ಪರಿವಿಡಿ

## ಗದ್ಯ ಭಾಗ


| | | |
|---|---|---|
| ೧. ಆ ದೇಶವೇ ಅವರ ತಾಯಿ | ಹೊಯಿಸಳ | ೧ |
| ೨. ಮತ್ತೆ ಬದುಕಿರಿ | ಎಚ್. ಕೆ. ರಾಮನಾಥ್ | ೮ |
| ೩. ಲಕ್ಷ್ಮಣಿಗೆ ಪುರಾಣ | ಯಮುನಾ ಮೂರ್ತಿ | ೧೯ |
| ೪. ಏರುವ ಬಾರ ಕೇದಾರ | ಲೀಲಾವತಿ ಎಸ್. ರಾವ್ | ೨೬ |
| ೫. ಬಹುಮುಖ ರಂಗಪ್ರತಿಭೆಯ ಬಿ.ವಿ. ಕಾರಂತ | ಹಾ.ಸಾ.ಕೃ. | ೩೨ |
| ೬. ಕರ್ಮಯೋಗಿ | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ೩೯ |
| ೭. ಉದ್ಯಾನರಾಣಿ - ಲಾಲ್‌ಬಾಗ್ | ದೇ. ಜವರೇಗೌಡ | ೪೮ |
| ೮. ಮಳೆಕೊಯ್ಲು | ಶ್ರೀಪಡ್ರೆ | ೫೫ |
| ೯. ಮಗುವಿನ ಕರೆ | ದತ್ತಾತ್ರೇಯ ರಾಮಚಂದ್ರ ಬೇಂದ್ರೆ | ೬೨ |


## ಪದ್ಯ ಭಾಗ


| | | |
|---|---|---|
| ೧೦. ಕನ್ನಡ ಎನ್ನುವುದು ಜೀವನದಿ | ಎಚ್. ಎಸ್. ವೆಂಕಟೇಶಮೂರ್ತಿ | ೭೨ |
| ೧೧. ಗಾಂಧಿ | ತೀ. ನಂ. ಶ್ರೀಕಂಠಯ್ಯ | ೭೭ |
| ೧೨. ಭಾಗ್ಯದ ಬಳೆಗಾರ | ಜನಪದ ಗೀತೆ | ೮೧ |
| ೧೩. ಯುಗಾದಿ ಬರುವುದು ನಮಗೆಂದೆ? | ಹೊರೆಯಾಲ ದೊರೆಸ್ವಾಮಿ | ೮೫ |
| ೧೪. ಆಧುನಿಕ ವಚನಗಳು | ಪ್ರೊ. ಈರಣ್ಣ ಇಟಗಿ<br>ಶಾಂತಾದೇವಿ ಕೆ. ಸಾಬಾದಿ | ೮೮ |
| ೧೫. ಹಡಗದ ಚಂದ | ವಿ.ಕೃ. ಗೋಕಾಕ | ೯೩ |
| ೧೬. ದರ್ಶನ | ನಾ. ಮೊಗಸಾಲೆ | ೯೭ |
| ೧೭. ಮಾನವ ಜನ್ಮ ದೊಡ್ಡದು | ಪುರಂದರದಾಸರು | ೧೦೨ |
| ೧೮. ಕಲಿಗಳ ದೇವನೊಪ್ಪಿದನು | ರತ್ನಾಕರವರ್ಣಿ | ೧೦೫ |
| ಅನುಬಂಧ | | ೧೦೯ |
| ಅರ್ಥಸಹಿತ ಪದಕೋಶ | | ೧೧೫ |

# ೧. ಆ ದೇಶವೇ ಅವರ ತಾಯಿ

ಹೊಯಿಸಳ

**ಪ್ರವೇಶ** ೨೦ನೇ ಶತಮಾನದ ಆರಂಭದಲ್ಲಿ ಸಾಂಪ್ರದಾಯಿಕ ಪುರಾಣ, ಕಾಲ್ಪನಿಕ ಕಥೆಗಳಿಗಿಂತ ಭಿನ್ನವಾದ ಸಾಮಾಜಿಕ ವಸ್ತು ಹಾಗೂ ನೀತಿಯನ್ನಾಧರಿಸಿದ ಕಥೆಗಳು ರಚನೆಯಾದವು. ಮಕ್ಕಳ ಕಥೆಗಳಲ್ಲಿ ನ್ಯಾಯ, ನೀತಿ, ದೇಶಭಕ್ತಿ ಮೊದಲಾದ ಮೌಲ್ಯಗಳನ್ನು ತರಲಾಯಿತು. ಕಲ್ಪನೆ ಹಾಗೂ ಸಾಹಸ ಇಲ್ಲಿನ ಕಥೆಗಳ ಮುಖ್ಯ ಆಕರ್ಷಣೆಯಾಗಿದ್ದುವು. ಪ್ರಸ್ತುತ ಕಥೆಯಲ್ಲಿ ಸರಳತೆಯ ಜೊತೆ ಸಂಕೀರ್ಣತೆಯು ಹದವಾಗಿ ಮಿಳಿತವಾಗಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಕಥೆ ಹೇಳುವ ಕಲೆಗಾರಿಕೆ ಇದೆ. ಈ ಕಥೆಯು ಮಕ್ಕಳಿಗೆ ಮುಂದೆ, ಸಣ್ಣ ಕಥಾ ಪ್ರಕಾರವನ್ನು ಗ್ರಹಿಸಲು ನೆರವಾಗುತ್ತದೆ.

"ನನ್ನ ತಾಯೀ, ಓ ನನ್ನ ತಾಯೀ" ಎಂದು ಕೂಗಿದ, ಕೂಗಿದಾ, ಬಹಳವಾಗಿ ಕೂಗಿದ, ಆ ರಾಜಕುಮಾರ. ಇವನ ಕೂಗು ಕೇಳಿ ಗಾಳಿ ಬೀಸುವುದನ್ನೇ ಬಿಟ್ಟು "ಏನಯ್ಯಾ ರಾಜ?" ಎಂದಿತು. ನೀರು ಹರಿಯುವುದನ್ನೇ ಬಿಟ್ಟು "ಬರಲಿಲ್ಲವೇ ನಿನ್ನ ತಾಯಿ?" ಎಂದು ಕೇಳಿತು. ಬೆಂಕಿ ಉರಿಯುವುದನ್ನೇ ಬಿಟ್ಟು "ನನ್ನ ಹೊಗೆಯನ್ನು ಕಳಿಸಿ ಹುಡುಕಿಸಿಬಿಡುತ್ತೇನಯ್ಯ ರಾಜಕುಮಾರ, ಅಳಬೇಡಪ್ಪ" ಎಂದಿತು. ಪ್ರಾಣಿಗಳೂ ಪಕ್ಷಿಗಳೂ ಸುತ್ತ ನಿಂತು ಕಣ್ಣೀರನ್ನು ಸುರಿಸಿ ಸುರಿಸಿ ಬಿಟ್ಟವು.

"ಓ ನನ್ನ ತಾಯೀ" ಎಂದು ಕೂಗುತ್ತ ಇದ್ದವರಾರು? ಹೀಗೆ ಕೇಳಬಹುದಲ್ಲವೆ? ಕೇಳಬಹುದು. ಕೇಳಪ್ಪಾ ಕೇಳು. 'ಭಾರತ, ಭಾರತ' ಎಂದು ಒಂದು ದೇಶ. ಅಲ್ಲಿ ಭಾರತೀಯರು ಇದ್ದರು. ಅವರು ಒಂದು ಬಗೆಯ ಜನ. ಅವರು ಜೇನುತುಪ್ಪದ ಬಣ್ಣದವರು. ಆ ದೇಶದಲ್ಲಿ ಗಡ್ಡದ ಸಿಂಹ, ಪಟ್ಟೆಹುಲಿ, ಕಾಮಧೇನು, ಆಕಾಶಕ್ಕೆ ಮುತ್ತಿಡುವ ಮರ, ಬಾಲದಲ್ಲಿ ಕಣ್ಣಿರುವ ಹಕ್ಕಿ, ಸಂಜೀವಿನೀ ನದಿ, ನಗು ನಗುವ ನೀರಬೀಳು - ಮೊದಲಾದುವೆಲ್ಲ ಇದ್ದುವು. ಅಲ್ಲೊಬ್ಬ ರಾಜಕುಮಾರ ಇದ್ದ - ಅವನ ಹೆಸರು ಭರತ. ಆ ದೇಶದ ಹೆಸರು ಭಾರತ.

ಆ ಭರತನ ತಾಯಿಯನ್ನು ಭರತನ ತಂದೆ ಬೈದುಬಿಟ್ಟ. ತಾಯಿ ಸಹಿಸಲಿಲ್ಲ ಬೈಗುಳನ್ನು. ತುಂಬಾ ಅತ್ತುಬಿಟ್ಟಳು. ಕಣ್ಣೀರು ಸುರಿಸೀ ಸುರಿಸೀ ಇಟ್ಟಳು. ಭರತಕುಮಾರ ತಂದೆಯನ್ನಾದರೂ ಕರೆದು ತರೋಣ ಎಂದು ಹೊರಟು ತಿರುಗಿದ. ಎಷ್ಟು ತಿರುಗಿದರೂ ಸಿಕ್ಕಲಿಲ್ಲ ತಂದೆ. ಮತ್ತೆ ಹಿಂದಿರುಗಿ ಬಂದ, ಆ ಭರತಕುಮಾರ.

ತಂದೆ ಸಿಗಲಿಲ್ಲ. ಬಂದು ನೋಡಿದರೆ ಇಲ್ಲಿ ಆ ತಾಯಿ ಇರಲೇ ಇಲ್ಲ. ಅವಳ ಕಣ್ಣೀರು ಹರಿದು ಹೋಗಿ ಪಕ್ಷಿ ಪ್ರಾಣಿಗಳು ಅತ್ತು ಸುರಿಸಿದ್ದವಲ್ಲ ಆ ಕಣ್ಣೀರಿಗೆ ಸೇರಿ ಹೋಗಿತ್ತು. ಅದೊಂದು ದೊಡ್ಡ ಹೊಳೆಯಾಗಿತ್ತು. ಭರತ ಕುಮಾರ ಆ ಕಣ್ಣೀರ ಹೊಳೆಯ ಬಳಿ ನಿಂತು ಹಾಗೇ ನೋಡಿದ. ತಾನೂ ಕಣ್ಣೀರು ಸುರಿಸಿದ. ಸುರಿಸಿ ಸುರಿಸಿ ಸಣ್ಣಗಾಗಿ ಹೋದ. ಆ ನೀರನ್ನೇ ನೋಡಿ ತನ್ನ ತಾಯಿಯನ್ನು ನೆನೆಯುತ್ತಿದ್ದಾಗ ಒಂದು ದೇವತೆ ಬಂತು. ಅದು ಅವನಿಗೆ ಒಂದು ಚಿನ್ನದ ಕೋಲು ಕೊಟ್ಟಿತು. "ಅಳಬೇಡ, ಭರತಕುಮಾರ, ಈ ಕೋಲು ಹಿಡಿದುಕೊಂಡು ನೀನು ಏನು ಬೇಕಾದರೂ ಆಗಬಹುದು. ಎಲ್ಲಿ ಬೇಕಾದರೂ ಹೋಗಬಹುದು. ಹುಡುಕು ನಿನ್ನ ತಾಯಿಯನ್ನು" ಎಂದಿತು. ಕೂಡಲೇ ಆ ರಾಜಕುಮಾರ ಆ ಚಿನ್ನದ ಕೋಲಿನ ಬಲದಿಂದ ಹಾವಾಗಿ ನೆಲ ಹೊಕ್ಕು ಹುಡುಕಿದ. ಹೊಳೆಯಾಗಿ ಕಾಡೆಲ್ಲ ನೋಡಿದ. ಹಕ್ಕಿಯಾಗಿ ಆಕಾಶದಲ್ಲಿ ಅಲೆದ. ಬಸವನಾಗಿ ಊರೆಲ್ಲ ತಿರುಗಿದ. ಹಾಗೇ ಸಿಂಹವಾಗಿ ಆರ್ಭಟಿಸಿದ. ಮೀನಾಗಿ ಮೌನದಿಂದ ಎಲ್ಲೆಲ್ಲೂ ಹುಡುಕಿದ. ಆ ತಾಯಿ ಸಿಗಲಿಲ್ಲ. ಆಕೆಗೆ ಕರೆ ಕೇಳಲಿಲ್ಲ.

ಮತ್ತೊಮ್ಮೆ ಅಳುತ್ತ ಕುಳಿತುಬಿಟ್ಟ. ಅವನ ದುಃಖವೆಲ್ಲ ಅವನ ತಾಯಿಯ ದುಃಖವಿತ್ತಲ್ಲ ಅದರ ಸಂಗಡ ಸೇರಿ ಕಣ್ಣೀರೆಲ್ಲ ಮೋಡವಾಗಿ ಬಾನೆಲ್ಲ ಮುಸುಕಿ ಕತ್ತಲಾಗಿ ಹೋಗಿತ್ತು. ಆಗ ಅವನು "ಎಲೆ ಸೂರ್ಯ, ಎಲ್ಲಿದ್ದೀಯೆ, ಬೆಳಕು ಬೇಕು ನನಗೆ" ಎಂದು ಧೈರ್ಯದಿಂದ ಕೂಗಿದ. ಆಗ ಸೂರ್ಯ ಬಂದು ಹೇಳಿದ: "ಭರತಕುಮಾರ, ನಿನಗಾಗಿ ನನ್ನ ಕೈಲಾದ ಸಹಾಯ ಮಾಡುತ್ತೇನಯ್ಯ. ಹೀಗೆಂದವನು ಆ ಮೋಡಗಳನ್ನೆಲ್ಲ ಕರಗಿಸಿ, ಕತ್ತಲೆಯನ್ನೆಲ್ಲ ಸುಟ್ಟು ಬೂದಿ ಮಾಡಿಬಿಟ್ಟು, "ಅಯ್ಯಾ ಭರತಕುಮಾರ, ಅರ್ಧ ದಿನ ನಿನಗಾಗಿ ಕೆಲಸ ಮಾಡಿದ್ದೇನೆ ನೋಡು" ಹೀಗೆಂದು ಹೇಳಿ ಹೊರಟು ಹೋಗಿಬಿಟ್ಟ. ಅಷ್ಟು ಕೆಲಸ ಮಾಡಿ ಸೂರ್ಯ ಸೋತು ಸಣ್ಣಗಾಗಿ ಹೋಗಿದ್ದ.

ಅಂದಿನಿಂದ ಹಗಲು ಹನ್ನೆರಡು ಗಂಟೆಗಳಾಗಿ ಹೋದವು.

ರಾತ್ರಿ ಕತ್ತಲಾಯಿತು. ಕತ್ತಲಲ್ಲಿ ಹಾಗೇ ಕುಳಿತಿದ್ದ. ಬೆಳಕಾದಾಗ ಭರತಕುಮಾರ ಹತ್ತಿರವಿದ್ದ ನೀರನ್ನು ಬೊಗಸೆಯಲ್ಲಿ ತುಂಬಿ ಕುಡಿದ. ಆ ನೀರಿಗೆ ಆತನ ತಾಯಿಯ ಹಾಲಿನ ರುಚಿಯಿತ್ತು. ಹೂವು ಬಿಡಿಸಿ ಕಂಪು ಮೂಸಿದ. ಅದರಲ್ಲಿ ಆ ತಾಯಿಯ ಪರಿಮಳವಿತ್ತು. ಹಕ್ಕಿಯೊಂದನ್ನು ಹಿಡಿದು ಮಾತನಾಡಿಸಿದ. ಅದರ ದನಿಯಲ್ಲಿ ತಾಯಿಯ ಪ್ರೀತಿಯ ಸ್ವರವೇ ಕೇಳಿಸಿತು. ನೆಲವನ್ನು ದಿಟ್ಟಿಸಿ ನೋಡಿದರೆ ಆ ತಾಯಿಯ ಛಾಯೆಯೇ

ಕಾಣುತ್ತಿತ್ತು. ಹೀಗೆ ಆ ರಾಜಕುಮಾರ ತನ್ನ ಸುತ್ತಮುತ್ತ ತನ್ನ ತಾಯಿಯ ರುಚಿ, ಕಂಪು, ನುಡಿ, ಆಟ, ಕೂಟ, ಪಾಟಗಳನ್ನೇ ಕಂಡುಕೊಂಡ. ಆ ವೇಳೆಗೆ ಮತ್ತೆ ಕತ್ತಲಾಯಿತು. ಮಲಗಿಬಿಟ್ಟನು. ಕನಸಿನಲ್ಲಿ ತಾಯಿ ಬಂದು ಹೀಗೆಂದಳು: "ಭರತಕುಮಾರ, ನಾನು ಈ ನೆಲದಲ್ಲಿ ಅಡಗಿಹೋಗಿದ್ದೇನೆ, ನೀರಿನಲ್ಲಿ ಕರಗಿಹೋಗಿದ್ದೇನೆ. ನಿನ್ನ ರೋದನವನ್ನು ಕೇಳಿ ಕೇಳಿ, ಕೊರಗಿ ಕೊರಗಿ, ಇಲ್ಲೇ ಇದ್ದುಬಿಟ್ಟಿದ್ದೇನೆ. ಈ ನೆಲವೇ ನಾನೆಂದು ಭಾವಿಸಿಕೊ".... ಬೆಳಗಾಗಿ ಎದ್ದು ರಾಜಕುಮಾರ ಆ ತನ್ನ ನೆಲವನ್ನೇ ತಾಯಿಯೆಂದು ಭಾವಿಸಿಕೊಂಡ. ಆ ನಾಡನ್ನೇ ಭಾರತ ಮಾತೆಯೆಂದೂ, ತಾಯಿ ಭಾರತಿಯೆಂದೂ ಕರೆಯಲಾರಂಭಿಸಿದ. ಅವನ ಜನವೆಲ್ಲ ಹಾಗೆ ಕರೆದರು, ಆ ಹಿಂದಿನ ಕಾಲದವರು.

ಈಗಲೂ, ಬೆಳಗ್ಗೆ ಎದ್ದು ಕಾಲಿಡುವುದಕ್ಕೆ ಮುಂಚೆ ಆ ಜನರು 'ಪಾದಸ್ಪರ್ಶಂ ಕ್ಷಮಸ್ವ ಮೇ' ಕಾಲು ಮುಟ್ಟಿಸುತ್ತೇನೆ. ಕ್ಷಮಿಸು ತಾಯಿ, ಎಂದು, ಎದ್ದು ನಿಲ್ಲುತ್ತಾರೆ. ರಾತ್ರಿ ಮಲಗುವಾಗ ನಿನ್ನ ಮಡಿಲಲ್ಲಿರುತ್ತೇನೆ ತಾಯಿ - ಎನ್ನುತ್ತಾರೆ. ಅಂದಿನಿಂದಲೂ ಅವರ ದೇಶವೇ ಅವರಿಗೆ ತಾಯಿಯಾಗಿದೆ. ಭಾರತಮಾತೆಯಾಗಿದೆ. ತಾಯಿ ಭಾರತಿಯಾಗಿದ್ದಾಳೆ. ಯೋಚಿಸಿ ನೋಡಿ, ಆ ದೇಶವಾವುದು? ಆ ಜನರಾರು? ಆ ರಾಜನಾರು? ನೀವು ಬಲ್ಲಿರಾ?

**ಲೇಖಕರ ಪರಿಚಯ**

'ಹೊಯಿಸಳ' ಕಾವ್ಯನಾಮದಿಂದ ಖ್ಯಾತರಾಗಿದ್ದ ದಿವಂಗತ ಲಕ್ಷ್ಮಣರಾಯರ ಸ್ಥಳ ತೀರ್ಥಹಳ್ಳಿ ತಾಲ್ಲೂಕಿನ 'ಆರಗಂ' ಗ್ರಾಮ. ಕಾಲ ೧೯೦೩. ಕೆಲಕಾಲ ರವೀಂದ್ರನಾಥ ಠಾಕೂರರ ಶಾಂತಿನಿಕೇತನದಲ್ಲಿ ಅಧ್ಯಾಪಕರಾಗಿದ್ದರು. ಅನಂತರ ವಿದ್ಯಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದರು. ಆಕಾಶವಾಣಿ ಮತ್ತು ಪತ್ರಿಕಾವಲಯದಲ್ಲೂ ಇವರು ಸೇವೆ ಸಲ್ಲಿಸಿದ್ದರು. ಶ್ರೀಯುತರು ಒಳ್ಳೆಯ ಹಾಡುಗಾರರೂ, ಚಿತ್ರಕಾರರೂ ಆಗಿದ್ದರು. ಇವರು ಮಕ್ಕಳ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಗಮನಾರ್ಹವಾದುದು.

ಕಥೆ, ಕವನ, ನಾಟಕ ಹಾಗೂ ಸ್ಕ್ಯಾಟ್ ಗೀತೆಗಳನ್ನು ಬರೆದು ಮಕ್ಕಳ ಮನ ಗೆದ್ದಿದ್ದಾರೆ. ಕೋಗಿಲೆ, ಅಂಜೂರ, ಚಂದಮಾಮ, ಕೋಲುಕುದುರೆ, ಮರಿಗಳ ಕೂಗು - ಇವರ ಕವನ ಸಂಗ್ರಹಗಳು. ಪೋರಿ, ವೀರಕುಮಾರ, ರಾಜನ ಬುದ್ಧಿವಂತಿಕೆ, ಖೈದಿಗಳ ಕಷ್ಟ, ಆನೆ ಇರುವೆ, ಶುಭಾಂಗ, ಬದುಕುವ ಮಂತ್ರ, ಗಂಟೆಗೋಪುರ, ಪಠಾಕ್ಷಿ, ಸಕ್ಕರೆ ಬೊಂಬೆ, ಹೂವಿನ ಹಾಸಿಗೆ ಇವು ಮಕ್ಕಳ ಕಥೆಗಳು. ವಾತಾಪಿ, ಕಳ್ಳ ಮಳ್ಳ ಸುಳ್ಳ, ಚಂದ್ರಹಾಸ, ಅಗಲಿದ ಮಗಳು - ಇವು ಮಕ್ಕಳಿಗಾಗಿ ಇವರು ಬರೆದ ನಾಟಕಗಳು. ೧೯೫೯ರಲ್ಲಿ ನಿಧನರಾದರು.

ಪ್ರಸ್ತುತ ಕತೆಯನ್ನು ಶ್ರೀಯುತರ ಬಂದ ಬಂದ ಸಂತಮ್ಮಣ್ಣ ಕೃತಿಯಿಂದ ಆರಿಸಲಾಗಿದೆ.

**ಆಶಯ**

ಭಾರತವು ಪುರಾಣ ಹಾಗೂ ಸಂಸ್ಕೃತಿಗಳ ನಾಡು; ಪ್ರಾಕೃತಿಕ ಸಂಪತ್ತಿನ ಬೀಡು. ಇಲ್ಲಿ ಭಾರತ ದೇಶದ ಸಾಂಸ್ಕೃತಿಕ ಹಾಗೂ ನೈಸರ್ಗಿಕ ಹಿರಿಮೆ ಗರಿಮೆಗಳನ್ನು ಎತ್ತಿ ಹಿಡಿಯಲಾಗಿದೆ. ಭರತಭೂಮಿಯೇ ಭಾರತೀಯರಿಗೆ ಮೊದಲ ತಾಯಿ, ದೈವ, ಗುರು ಎಂಬುದನ್ನು ತಿಳಿಸಲಾಗಿದೆ. ಭರತಕುಮಾರನು ತನ್ನ ತಾಯಿಯನ್ನು ಪಂಚೇಂದ್ರಿಯಗಳ ಹಾಗೂ ಪಂಚಭೂತಗಳ ಮೂಲಕ ಕಂಡುಕೊಳ್ಳುವ ಬಗೆಯನ್ನು ಅದ್ಭುತವಾಗಿ ಚಿತ್ರಿಸಲಾಗಿದೆ. ಮಕ್ಕಳ ಕಥೆಯನ್ನು ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಕೊಂಡೊಯ್ದಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಎಳೆಯರಲ್ಲಿ ದೇಶಾಭಿಮಾನ ಮೂಡಿಸುವುದೇ ಈ ಕಥೆಯ ಆಶಯವಾಗಿದೆ. ಇದೊಂದು ಕಾಲ್ಪನಿಕ ಕಥೆ.

**ಶಬ್ದಾರ್ಥ :**

ಮುಸುಕು - ಆವರಿಸು; ಕಂಪು - ಪರಿಮಳ, ಸುವಾಸನೆ; ಛಾಯೆ - ನೆರಳು; ಕೂಟ - ಸಂಗ, ಜೊತೆ.

**ಟಿಪ್ಪಣಿ :**

ಕಾಮಧೇನು: ಕೇಳಿದ್ದನ್ನು ಕೊಡುವ ದೇವಲೋಕದ ಹಸು. ಅಮೃತಮಥನ ಕಾಲದಲ್ಲಿ ಕಲ್ಪವೃಕ್ಷ, ಐರಾವತ ಮೊದಲಾದವುಗಳೊಡನೆ ಇದೂ ಜನಿಸಿತೆಂಬುದು ಒಂದು ಪೌರಾಣಿಕ ಕಲ್ಪನೆ.

ಸಂಜೀವಿನಿ: ಇದು ಸತ್ತವರನ್ನು ಬದುಕಿಸುವ ಒಂದು ಮೂಲಿಕೆ. ಗರುಡನು ತನ್ನ ತಾಯಿಗಾಗಿ ಅಮೃತವನ್ನು ತರುವಾಗ ಅದರಲ್ಲಿಯ ಒಂದು ಹನಿಯು ದ್ರೋಣ ಪರ್ವತದ ಮೇಲೆ ಬಿದ್ದು ಮುದ್ಗಲ ಋಷಿಯ ತಪಃಶಕ್ತಿಯಿಂದ ಲತೆಯಾಗಿ ಬೆಳೆಯಿತು ಎಂಬ ಕತೆಯಿದೆ.

## ಅಭ್ಯಾಸ

**ಪ್ರಶ್ನೆಗಳು :**

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ರಾಜಕುಮಾರನ ಕೂಗನ್ನು ಕೇಳಿ ಬೆಂಕಿ ಏನೆಂದು ಹೇಳಿತು?

೨. ಭಾರತೀಯರು ಯಾವ ಬಣ್ಣದವರು?

೩. ಭರತನ ತಾಯಿಯು ಏಕೆ ಅತ್ತಳು?

೪. ತಾಯಿಯ ಕಣ್ಣೀರು ಹರಿದು ಹೋಗಿ ಏನಾಯಿತು?

೫. ಭಾರತೀಯರು ಬೆಳಗ್ಗೆ ಎದ್ದು ಭೂಮಿಯ ಮೇಲೆ ಕಾಲಿಡುವ ಮುಂಚೆ ಏನು ಹೇಳುತ್ತಾರೆ?

೬. ಮಲಗುವಾಗ ಭಾರತೀಯರು ಭೂಮಿಗೆ ಏನೆಂದು ಹೇಳುತ್ತಾರೆ?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಗಾಳಿ, ನೀರು, ಬೆಂಕಿಗಳು ರಾಜಕುಮಾರನಿಗೆ ಏನು ಹೇಳಿದವು?

೨. ಚಿನ್ನದ ಕೋಲಿನ ಮಹಿಮೆ ಏನು?

೩. ಭರತಕುಮಾರನಿಗೆ ಸೂರ್ಯ ಮಾಡಿದ ಸಹಾಯವೇನು?

೪. ಭರತಕುಮಾರನ ಕನಸಿನಲ್ಲಿ ತಾಯಿ ಬಂದು ಏನೆಂದು ಹೇಳಿದಳು?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಚಿನ್ನದ ಕೋಲನ್ನು ಬಳಸಿ ರಾಜಕುಮಾರನು ತನ್ನ ತಾಯಿಯನ್ನು ಎಲ್ಲೆಲ್ಲಿ ಹುಡುಕಿದನು?

೨. ಭರತಕುಮಾರ ತನ್ನ ತಾಯಿಯನ್ನು ಭೂಮಿಯ ಮೇಲೆ ಕಂಡುಕೊಂಡ ಬಗೆ ಹೇಗೆ?

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.

೧. ಬರಲಿಲ್ಲವೇ ನಿನ್ನ ತಾಯಿ?

೨. ಎಲೆ ಸೂರ್ಯ ಎಲ್ಲಿದ್ದೀಯೆ. ಬೆಳಕು ಬೇಕು ನನಗೆ.

೩. ಈ ನೆಲವೇ ನಾನೆಂದು ಭಾವಿಸಿಕೊ

೪. ಪಾದಸ್ಪರ್ಶಂ ಕ್ಷಮಸ್ವ ಮೇ

ಉ. ಬಿಟ್ಟ ಸ್ಥಳಗಳನ್ನು ಸೂಕ್ತಪದಗಳಿಂದ ತುಂಬಿರಿ.

೧. ದೇವತೆ ಭರತಕುಮಾರನಿಗೆ .......... ಕೊಟ್ಟಿತು.

೨. ಸೂರ್ಯ ............ ಸಣ್ಣಾಗಾಗಿ ಹೋಗಿದ್ದ.

೩. ರಾಜಕುಮಾರ ತನ್ನ ............. ತಾಯಿಯೆಂದು ಭಾವಿಸಿಕೊಂಡ.

೪. ನೀರಿಗೆ ಆತನ ......... ಹಾಲಿನ ರುಚಿಯಿತ್ತು.

ಊ. 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ | ಬ |
|---|---|
| ೧. ಗಡ್ಡದ | ಜಲಪಾತ |
| ೨. ಸಂಜೀವಿನಿ | ನವಿಲು |
| ೩. ಪಟ್ಟೆ | ಹಾವು |
| ೪. ನೀರ ಬೀಳು | ನದಿ |
| ೫. ಬಾಲದಲ್ಲಿ ಕಣ್ಣಿರುವ ಹಕ್ಕಿ | ಸಿಂಹ |
| | ಹುಲಿ |

## ಭಾಷಾಭ್ಯಾಸ

ಅ. ಇವುಗಳಿಗೆ ತದ್ಭವ ಪದಗಳನ್ನು ಬರೆಯಿರಿ.

ರಾಜ, ಕುಮಾರ, ಪಕ್ಷಿ, ಸಿಂಹ, ಆಕಾಶ, ಧ್ವನಿ, ಸ್ವರ, ದೃಷ್ಟಿ

ಆ. ಕೆಳಗಿನ ಪದಗಳ ನಾನಾರ್ಥ ಬರೆದು, ಮಾದರಿಯಂತೆ ವಾಕ್ಯಗಳಲ್ಲಿ ಬಳಸಿರಿ.

| ಮಾದರಿ : ಕಾಡು |
|---|

೧. ನಮ್ಮ ಊರಿನ ಆಚೆಗೆ ದಟ್ಟವಾದ ಕಾಡು ಇದೆ.

೨. ಶ್ರೀಕೃಷ್ಣನು ಗೋಪಿಕೆಯರ ವಸ್ತ್ರಗಳನ್ನು ಬಚ್ಚಿಟ್ಟು ಕಾಡುತ್ತಿದ್ದನು.

೧. ಹರಿ ೨. ತಂದೆ ೩. ಹೊಳೆ ೪. ಕರೆ

ಇ. ದ್ವಿರುಕ್ತಿ

ಕೂಗಿದಾ ಕೂಗಿದಾ, ಭಾರತ ಭಾರತ, ನಗುನಗುತ, ಕೊರಗಿ ಕೊರಗಿ, ಕೇಳಿಕೇಳಿ - 'ಉಕ್ತಿ' ಎಂದರೆ 'ಮಾತು'. ದ್ವಿರುಕ್ತಿ ಎಂದರೆ ಒಂದೇ ಮಾತನ್ನು ಎರಡು ಬಾರಿ ಬಳಸುವುದು.

ಸೂಚನೆ: ಇದೇ ರೀತಿಯ ಬೇರೆ ಐದು ದ್ವಿರುಕ್ತಿಗಳನ್ನು ಬರೆಯಿರಿ.

ಈ. ಲೇಖನ ಚಿಹ್ನೆಗಳು

ಲೇಖನ ಚಿಹ್ನೆಗಳು ಬರವಣಿಗೆಗೆ ಸ್ಪಷ್ಟಾರ್ಥವನ್ನು ಕೊಡುತ್ತವೆ. ಹೀಗಾಗಿ ಬರವಣಿಗೆಯಲ್ಲಿ ಲೇಖನ ಚಿಹ್ನೆಗಳಿಗೆ ಮಹತ್ವದ ಸ್ಥಾನವಿದೆ. ಈ ಪಾಠದಲ್ಲಿ ಬಳಕೆಯಾಗಿರುವ ಕೆಲವು ಲೇಖನ ಚಿಹ್ನೆಗಳ ಬಗ್ಗೆ ತಿಳಿಸಲಾಗಿದೆ.

೧. ಪೂರ್ಣವಿರಾಮ : ಬಿಂದು (.)

ಅ. ಅವರು ಜೇನುತುಪ್ಪದ ಬಣ್ಣದವರು.

ಆ. ಅದರಲ್ಲಿ ತಾಯಿಯ ಪರಿಮಳವಿತ್ತು.

ಒಂದು ವಾಕ್ಯದ ಕೊನೆಯಲ್ಲಿ ಪೂರ್ಣವಿರಾಮ ಚಿಹ್ನೆಯನ್ನು ಬಳಸಬೇಕು. ಈ ಚಿಹ್ನೆ ಬಳಸಿದಾಗ ಒಂದು ವಾಕ್ಯ ಪೂರ್ಣವಾಯಿತೆಂದು ಅರ್ಥ.

೨. ಅಲ್ಪವಿರಾಮ (,)

ವಾಕ್ಯದಲ್ಲಿ ಅನೇಕ ನಾಮಪದಗಳು, ಒಂದೇ ಕ್ರಿಯೆಗೆ ಅನೇಕ ಕರ್ತೃಗಳು, ಒಂದೇ ಕ್ರಿಯೆಗೆ ಅನೇಕ ಕರ್ಮ ಪದಗಳೂ ಇದ್ದಾಗ ಹಾಗೂ ಸಂಬೋಧನೆಯ ಮುಂದೆ ಅಲ್ಪವಿರಾಮ ಚಿಹ್ನೆ ಬಳಸಬೇಕು.

ಅ) ತನ್ನ ತಾಯಿಯ ರುಚಿ, ಕಂಪು, ನುಡಿ, ಆಟ, ಕೂಟ, ಪಾಟಗಳನ್ನೇ ಕಂಡುಕೊಂಡ.

ಆ) ಆ ದೇಶದಲ್ಲಿ ಗಡ್ಡದ ಸಿಂಹ, ಪಟ್ಟೆಹುಲಿ, ಕಾಮಧೇನು ಮೊದಲಾದುವೆಲ್ಲ ಇದ್ದುವು.

ಇ) ಕ್ಷಮಿಸು ತಾಯಿ, ಎಂದು ಎದ್ದು ನಿಲ್ಲುತ್ತಾರೆ.

ಈ) ಭರತ ಕುಮಾರ, ನಾನು ಈ ನೆಲದಲ್ಲಿ ಅಡಗಿಹೋಗಿದ್ದೇನೆ.

**೩) ಪ್ರಶ್ನಾರ್ಥಕ ಚಿಹ್ನೆ (?)**

ಪ್ರಶ್ನಾರ್ಥಕ ಪದ ಮತ್ತು ವಾಕ್ಯದ ಮುಂದೆ ಈ ಚಿಹ್ನೆಯನ್ನು ಬಳಸಬೇಕು.

ಅ) ಬಲ್ಲಿರಾ?

ಆ) ಬರಲಿಲ್ಲವೇ ನಿನ್ನ ತಾಯಿ?

ಇ) ಆ ದೇಶವಾವುದು?

**೪) ಉದ್ಧರಣ ಚಿಹ್ನೆ (" ") (' ')**

ಇತರರು ಹೇಳಿದ ಮಾತನ್ನು ಎತ್ತಿ ಹೇಳುವಾಗ ಜೋಡಿ ಉದ್ಧರಣ ಚಿಹ್ನೆ ಬಳಸಬೇಕು. ವಾಕ್ಯದ ನಡುವೆ ಪಾರಿಭಾಷಿಕ ಪದಗಳು ಬಂದಾಗ ಒಂಟಿ ಉದ್ಧರಣ ಚಿಹ್ನೆ ಬಳಸಬೇಕು.

ಉದಾ: ಅ) "ಎಲೆ ಸೂರ್ಯ, ಎಲ್ಲಿದ್ದೀಯೆ. ಬೆಳಕು ಬೇಕು ನನಗೆ"

ಆ) 'ಭಾರತ ಭಾರತ' ಎಂದು ಒಂದು ದೇಶ.

**೫) ವಿವರಣಾತ್ಮಕ ಚಿಹ್ನೆ (:)**

'ಇದರ ವಿವರಣೆ ಮುಂದಿನಂತಿದೆ' ಎಂದು ಸೂಚಿಸುವಾಗ ವಿವರಣಾತ್ಮಕ ಲೇಖನ ಚಿಹ್ನೆ ಬಳಸಬೇಕು.

ಉದಾ: ಉದಾಹರಣೆ: ಸೂಚನೆ: ಇಂತಿದೆ: ಇತ್ಯಾದಿ.

## ಚಟುವಟಿಕೆ

೧. ದುಷ್ಯಂತ ಶಕುಂತಲೆಯರ ಪುತ್ರ ಭರತನ ಕಥೆ ಕೇಳಿರಿ.

೨. ಭರತ - ಬಾಹುಬಲಿ ಕಥೆಯನ್ನು ಗುರುಗಳಿಂದ ಕೇಳಿ ತಿಳಿಯಿರಿ.

೩. ದಶರಥಪುತ್ರ ಭರತನ ಬಗ್ಗೆ ಓದಿ ತಿಳಿಯಿರಿ.

# ೨. ಮತ್ತೆ ಬದುಕಿರಿ

ಎಚ್. ಕೆ. ರಾಮನಾಥ್

**ಪೀಠಿಕೆ**

ಕಥೆ, ಕವನ, ಕಾದಂಬರಿ, ಲಲಿತ ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ 'ನಾಟಕ'ವೂ ಒಂದು. ನಾಟಕವನ್ನು ದೃಶ್ಯಕಾವ್ಯವೆಂದು ಕರೆಯಲಾಗಿದೆ. ನಾನಾ ಬಗೆಯ ಅಭಿರುಚಿಗಳನ್ನು ಪ್ರೇಕ್ಷಕರಿಗೆ ರಸಾಸ್ವಾದನೆ ಮಾಡಿಸುವುದೇ 'ನಾಟಕ'ದ ಮುಖ್ಯ ಉದ್ದೇಶ. ಅದರೊಂದಿಗೆ ಪ್ರೇಕ್ಷಕರ ಚಿಂತನೆಗೆ ಆಹಾರ ಒದಗಿಸುವ ಜವಾಬ್ದಾರಿಯೂ ನಾಟಕಕ್ಕಿದೆ. ಭಾರತೀಯ ಸಂಸ್ಕೃತ ನಾಟಕ ಪರಂಪರೆಗೆ ವಿಶ್ವಸಾಹಿತ್ಯದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಕಾಳಿದಾಸ, ಭಾಸ, ಶೂದ್ರಕ ಮುಂತಾದವರನ್ನು ಈ ನಿಟ್ಟಿನಲ್ಲಿ ನೆನೆಯಬಹುದು.

ಇಪ್ಪತ್ತನೆಯ ಶತಮಾನದಲ್ಲಿ ಹೊಸಬಗೆಯ ನಾಟಕ ಸೃಷ್ಟಿ ಕನ್ನಡದಲ್ಲಿ ಆಗತೊಡಗಿತು. ಇಂದು ಕನ್ನಡ ನಾಟಕಗಳು ಭಾರತೀಯ ನಾಟಕ ಸಾಹಿತ್ಯದಲ್ಲಿ ತನ್ನ ಹೆಜ್ಜೆಗುರುತುಗಳನ್ನು ಮೂಡಿಸಿವೆ.

## ದೃಶ್ಯ - ೧

[ತೆನಾಲಿ ರಾಮಕೃಷ್ಣನ ಮನೆ. ಅವನ ಹೆಂಡತಿ ಗೌರಿ ಹಸಿವನ್ನು ತಾಳಲಾರದೆ ಒಂದು ತಂಬಿಗೆ ನೀರು ಖಾಲಿ ಮಾಡಿ ಕುಳಿತುಕೊಳ್ಳುವ ಹೊತ್ತಿಗೆ ರಾಮಕೃಷ್ಣನ ಪ್ರವೇಶ.]

ರಾಮಕೃಷ್ಣ : ಲೇ ಗೌರಿ, ತುಂಬಾ ಹಸಿವು ಕಣೆ, ಬೇಗ ಊಟ ಹಾಕು, ಕ್ಷಾಮಕಾಲದ ಹಸಿವು ಕಣೆ.

ಗೌರಿ : ಕ್ಷಾಮಕಾಲ ಅಲ್ದೆ ಕ್ಷೇಮ ಕಾಲ ಎಲ್ಲಿ ಬಂತು ಈ ಮನೆಗೆ? ಏನಿದೆ ಊಟ ಬಡಿಸೋಕೆ? ಮನೇಲಿ ಬೇಳೆ ಇಲ್ಲ, ಅಕ್ಕಿ ಇಲ್ಲ, ಅಕ್ಕಿ ಏನು ಅವಲಕ್ಕೀನೂ ಇಲ್ಲ, ನಾನು ಕೂಡ ಹಸಿವು ತಾಳಲಾರ್ದೆ ತಂಬಿಗೆ ನೀರು ಕುಡ್ದು ಸುಸ್ತಾಗಿ ಕೂತಿದೀನಿ. ವಿಜಯನಗರದ ಸಾಮ್ರಾಟ ಕೃಷ್ಣದೇವರಾಯನ ವಿದೂಷಕ ಅಂತೀರಿ. ಅರಮನೇಲೂ ನಿಮಗೆ ಒಂದು ಹೊತ್ತು ಕವಳ ಇಲ್ದೆ ಹೋಯ್ತೆ!

ರಾಮಕೃಷ್ಣ : ಅಲ್ವೆ, ಒಬ್ಬ ಪ್ರಸಿದ್ಧ ವಿದೂಷಕ 'ನನಗೆ ಹಸಿವಾಗುತ್ತೆ ಮಹಾಸ್ವಾಮಿ, ಅನ್ನ ಹಾಕಿ' ಅನ್ನೋಕೆ ಆಗುತ್ಯೇನೆ? ಮರ್‍ಯಾದೆ ಪ್ರಶ್ನೆ ಕಣೆ.

ಗೌರಿ : ಹಾಗಾದ್ರೆ ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕ್ಕೊಂಡು ಕೂತಿರೋದು ಅನ್ನಿ. ಮನೇಲಂತೂ ಒಂದು ಕಾಳು ಅಕ್ಕೀನೂ ಇಲ್ಲ.

ರಾಮಕೃಷ್ಣ : (ಹೊಟ್ಟೆ ಹಿಡಿದು) ಹಸಿವೂ! ಹಸಿವೂ! (ರಾಗದಿಂದ) "ತಾಳಲಾರೆ ವಿಧಿಯ ಶಾಪ! ತಾಳಲಾರೆನ್ನೆ!"

ಗೌರಿ : ರಾಜರ ಮುಂದೆ ಹಾಸ್ಯ ಮಾಡೋಕೆ ಬುದ್ಧಿ ಇದೆ. ಈ ಹಸಿವನ್ನು ನಿವಾರಿಸೋಕೆ ನಿಮಗೆ ಬುದ್ಧಿ ಇಲ್ಲ ಅಲ್ವೆ!

ರಾಮಕೃಷ್ಣ : (ಯೋಚಿಸಿ ಒಂದು ಉಪಾಯ ಹೊಳೆದಂತಾಗಲು) ಏನಂದೆ? ಬುದ್ಧಿ ಇಲ್ಲಾ ಅಂತೀಯಾ? ಬೇಕಾದಷ್ಟು ಬುದ್ಧಿ ಇದೆ ಕಣೆ! ಒಂದು ಒಳ್ಳೆ ಉಪಾಯ ಹೊಳೆದಿದೆ!

ಗೌರಿ : (ಕುತೂಹಲದಿಂದ) ಏನು ಉಪಾಯ, ಹೇಳೀಂದ್ರೆ.

ರಾಮಕೃಷ್ಣ : ಅದರಲ್ಲಿ ನಾವಿಬ್ರೂ ಭಾಗವಹಿಸಬೇಕು ನೋಡು!

ಗೌರಿ : ಹೇಗೆ! ಬೇಗ ಹೇಳೀಂದ್ರೆ; ಇಲ್ಲದಿದ್ರೆ ನೀವೊಬ್ರೆ ಭಾಗವಹಿಸಬೇಕಾಗುತ್ತೆ.

ರಾಮಕೃಷ್ಣ : ಕೇಳೇ ಇಲ್ಲಿ. ನೀನೀಗ ಮಹಾರಾಣಿ ಹತ್ತಿರ ಹೋಗಿ (ಅವಳ ಕಿವಿಯಲ್ಲಿ ಗುಟ್ಟಾಗಿ ಮಾತನಾಡುತ್ತ ಸನ್ನೆ ಮಾಡುತ್ತಾನೆ) ನನ್ನ ಗಂಡ ಹೊರಟು ಹೋದ ಅಂತ ಹೊಡ್ಕೊ, ನಾನು ಮಹಾರಾಜರ ಹತ್ತಿರ ಹೋಗಿ ನನ್ನ ಹೆಂಡತಿ ಹೊರಟು ಹೋದಳು ಅಂತ ಅಳ್ತೀನಿ.

ಗೌರಿ : (ಹಾಗೆಯೇ ಹೊರಡುತ್ತಾಳೆ) ಹೂಂ.... ನನ್ನ ಕರ್ಮ.

ರಾಮಕೃಷ್ಣ : ಇದೇನೇ! ಗಂಡನ್ನ ಕಳಕೊಂಡೋರು ಹೀಗೆ ಇರ್ತಾರ್ಯೇನೆ? ಬಡ್ಕೊಬೇಕು ನಿನಗೆ. ತಲೆ ಕೆದರಿಕೊ.

ಗೌರಿ : ಹೂಂ.... ಇನ್ನೂ.... ನಿಮ್ಮ ಕೈ ಹಿಡಿದ ಮೇಲೆ ಇನ್ನೂ ಏನೇನು ಮಾಡಬೇಕೊ? (ಹೊರಡುತ್ತಾಳೆ)

## ದೃಶ್ಯ - ೨

(ಕೃಷ್ಣದೇವರಾಯನ ಅರಮನೆ, ಇಬ್ಬರು ಸೇವಕರು ರಂಗದ ಇಬ್ಬದಿಯಲ್ಲಿ ನಿಂತಿದ್ದಾರೆ. ಕೃಷ್ಣದೇವರಾಯ, ಪ್ರಧಾನಿ ಸಾಳುವ ತಿಮ್ಮರಸನೊಡನೆ ಪಗಡೆಯಾಟ ಆಡುತ್ತಿದ್ದಾನೆ. ನೇಪಥ್ಯದಿಂದ ರೋದನ ಕೇಳಿಬರುತ್ತದೆ)

ದೊರೆ : ತಿಮ್ಮರಸರೆ, ಸ್ವಾರಸ್ಯವಾದ ಆಟದ ನಡುವೆ ಯಾವುದೋ ಅಪಸ್ವರ ಕೇಳಿಸುತ್ತಿದೆ.

ಮಂತ್ರಿ : ಹೌದು ಮಹಾಪ್ರಭು, (ಕೂಗುತ್ತಾ) ಯಾರಲ್ಲಿ?

ಸೇವಕ : (ಮುಂದೆ ಬಂದು) ಏನಪ್ಪಣೆ ಮಹಾಪ್ರಭು?

ಮಂತ್ರಿ : ಹೊರಗೆ ಅಳುತ್ತಿರುವವರನ್ನು ಒಳಗೆ ಬರಮಾಡು.

ಸೇವಕ : ಅಪ್ಪಣೆ. (ಹೊರಗೆ ಹೋಗಿ ಅಳುತ್ತಿರುವ ರಾಮಕೃಷ್ಣನೊಡನೆ ಬರುತ್ತಾನೆ).

ದೊರೆ : (ಗಾಬರಿಯಿಂದ) ಏನಾಯಿತು ರಾಮಕೃಷ್ಣ? ಏನಾಯಿತು?

ರಾಮಕೃಷ್ಣ : (ಮತ್ತೂ ಗಟ್ಟಿಯಾಗಿ ಅಳುತ್ತಾ) ಇನ್ನೇನಾಗಬೇಕು ಪ್ರಭು! ಹೋದಳು..... ಹೊರಟೇ ಹೋದಳು!

ದೊರೆ : ಯಾರು ಹೇಳಬಾರದೆ?

ರಾಮಕೃಷ್ಣ : ಹೊರಟು ಹೋದಳು ಸ್ವಾಮಿ, ಕೈಲಾಸಕ್ಕೆ.

ದೊರೆ : ಕೈಲಾಸಕ್ಕೆ! ಅಂದ್ರೆ ಸತ್ತು ಹೋದಳೆ? (ಕನಿಕರದಿಂದ) ಸಮಾಧಾನ ಮಾಡಿಕೊ ರಾಮಕೃಷ್ಣ.

ರಾಮಕೃಷ್ಣ : ಇನ್ನೆಲ್ಲಿಯ ಸಮಾಧಾನ ಪ್ರಭುಗಳೇ, ಆಹಾ...! ಎಷ್ಟು ಚೆನ್ನಾಗಿ ಅಡಿಗೆ ಮಾಡ್ತಿದ್ಲು, ಎಷ್ಟು ಚೆನ್ನಾಗಿ ಮಾತಾಡ್ತಿದ್ಲು. ಇಂಥವಳಿಗೆ ಮಣ್ಣು ಮಾಡೋಕ್ಕೂ ನನಗೆ ಯೋಗ್ಯತೆ ಇಲ್ಲದೆ ಹೋಯ್ತೆ?

ದೊರೆ : ಅಳಬೇಡ ರಾಮಕೃಷ್ಣ, ಸಮಾಧಾನ ಮಾಡಿಕೋ, ಅಮಾತ್ಯ ತಿಮ್ಮರಸರೆ, ಇವನಿಗೆ ನೂರು ವರಹಗಳನ್ನು ಕೊಟ್ಟು ಕಳುಹಿಸಿ, ಇವನ ಹೆಂಡತಿಯ ಸ್ಮಶಾನ ಯಾತ್ರೆ ಈಗಲೇ ಆಗಲಿ.

ಮಂತ್ರಿ : ಆಗಬಹುದು ಮಹಾಪ್ರಭು, (ರಾಮಕೃಷ್ಣನಿಗೆ ಹಣದ ಚೀಲ ತಂದುಕೊಡುತ್ತಾನೆ).

ರಾಮಕೃಷ್ಣ : (ಹಣದ ಗಂಟು ಪಡೆದು) ಬಹಳ ಸಹಾಯವಾಯ್ತು ಮಹಾಪ್ರಭು. ಈಗಲೇ ಮುಂದಿನ ಕೆಲಸವನ್ನು ಯೋಚಿಸ್ತೀನಿ, ಹಾ ಪ್ರಿಯೇ.... (ಎಂದು ಅಳುತ್ತಾ ಹೊರಡುತ್ತಾನೆ).

## ದೃಶ್ಯ - ೩

(ರಾಣಿ ತಿರುಮಲಾದೇವಿಯ ರಾಣೀವಾಸ. ಅವಳ ಮುಂದೆ ಸಖಿ ಮಂದಾರವಲ್ಲಿ. ಇಬ್ಬರೂ ನೃತ್ಯವನ್ನು ವೀಕ್ಷಿಸುತ್ತಿದ್ದಾರೆ. ಸ್ವಲ್ಪ ಹೊತ್ತಾದ ನಂತರ ಸ್ತ್ರೀರೋದನ ಕೇಳಿಸುತ್ತದೆ.)

ರಾಣಿ : (ಆಲಿಸಿ) ಸಖಿ, ನಮ್ಮ ಸಂತೋಷ ಸಮಯದಲ್ಲಿ ಯಾವುದೋ ಅಪಸ್ವರ ಕೇಳಿಸುತ್ತಿದೆ. (ಗೌರಿ ಅಳುತ್ತ ಪ್ರವೇಶಿಸುತ್ತಾಳೆ.)

ರಾಣಿ : (ಗೌರಿಯನ್ನು ನೋಡಿ ಆಶ್ಚರ್ಯಚಕಿತಳಾಗಿ) ಏನಾಯಿತೆ ಗೌರಿ?

ಗೌರಿ : ಅಮ್ಮಾಜಿ (ಅಳುವುದನ್ನು ಹೆಚ್ಚು ಮಾಡುತ್ತಾಳೆ.) ಅವರು, ನನ್ನ ಗಂಡ, ವಿದೂಷಕ ರಾಮಕೃಷ್ಣ..... ಹೋದರು ತಾಯಿ.... ಹೊರಟೇ ಹೋದರು!

ರಾಣಿ : ಹೊರಟು ಹೋದದ್ದು ಎಲ್ಲಿಗೆ?

ಗೌರಿ : ವೈಕುಂಠಕ್ಕೆ! ಸ್ವಾಮಿ, ನನ್ನೊಬ್ಬಳನ್ನೇ ಬಿಟ್ಟು ಹೊರಟು ಹೋದಿರಾ? (ಜೋರಾಗಿ ಅಳುವಳು).... ಎಷ್ಟು ಚೆನ್ನಾಗಿ ಹೊಗಳ್ತಾ ಇದ್ದರು - ನಾನು ಅಡಿಗೆ ಮಾಡೋದನ್ನ, ಎಷ್ಟು ಚೆನ್ನಾಗಿ ತಿನ್ನುತ್ತಿದ್ರು. ಹೂಂ... ಇನ್ನೆಲ್ಲಿ ಅಡಿಗೆ? ಇನ್ನೆಲ್ಲಿ ತಿನ್ನೋದು? ಇಂಥವರ ಸಂಸ್ಕಾರಕ್ಕೆ ಒಂದು ಕಾಸೂ ಇಲ್ಲದೆ ಹೋಯ್ತೆ? (ದುಃಖಿಸುತ್ತಾಳೆ)

ರಾಣಿ : ಸಮಾಧಾನ ಮಾಡಿಕೋ ಗೌರಿ. ಸಖೀ ಮಂದಾರವಲ್ಲಿ, ಇವಳಿಗೆ ಒಂದು ನೂರು ವರಹ ಕೊಟ್ಟು ಕಳುಹಿಸು.

ಸಖಿ : ಅಪ್ಪಣೆ ಅಮ್ಮಾಜಿ. (ಹಣದ ಚೀಲವನ್ನು ತಂದು ಗೌರಿಗೆ ಕೊಡುತ್ತಾಳೆ)

ಗೌರಿ : (ಹಣದ ಚೀಲ ಪಡೆದು, ಅಳುತ್ತಲೇ) ಬಹಳ ಉಪಕಾರವಾಯ್ತು ತಾಯಿ. ಈಗಲೇ ಹೋಗಿ ಮುಂದಿನ ಕೆಲಸವನ್ನು ಮಾಡ್ತೀನಿ. ಹೋಗ್ತೀನಿ ತಾಯಿ... (ನಿಷ್ಕ್ರಮಣ) (ರಾಜನ ಪ್ರವೇಶ, ಜತೆಗೆ ಮಂತ್ರಿ, ಇಬ್ಬರು ಸೇವಕರು)

ದೊರೆ : (ರಾಣಿಯನ್ನು ನೋಡಿ) ಪ್ರಿಯೆ, ತಿರುಮಲಾ, ಸಂತೋಷವಷ್ಟೆ?

ರಾಣಿ : ಸಂತೋಷ ಎಲ್ಲಿಂದ ಬರಬೇಕು. ಈಗ ತಾನೇ ತನ್ನ ಗಂಡ....ಅದೇ ನಮ್ಮ ವಿದೂಷಕ ಸತ್ತು ಹೋದ ಅಂತ ಗೌರಿ ಅಳ್ತಾ ಬಂದಿದ್ದಳು. ವಿದೂಷಕ ಹೋದ ಮೇಲೆ ಆಸ್ಥಾನದಲ್ಲಿ ಹಾಸ್ಯ ಮಾಡೋದು ಯಾರು? ನಮಗೆ ಸಂತೋಷವೆಲ್ಲಿ?

ದೊರೆ : ಏನಂದಿ? ರಾಮಕೃಷ್ಣ ಸತ್ತುಹೋದನೆ? ಇಲ್ಲ, ಶುದ್ಧ ಸುಳ್ಳು, ಸತ್ತುಹೋಗಿರೋದು ಗೌರಿ.

ರಾಣಿ : ಖಂಡಿತ ಸುಳ್ಳು. ರಾಮಕೃಷ್ಣನೇ ಸತ್ತುಹೋಗಿರೋದು. ಗೌರಿ ಅಲ್ಲ.

ದೊರೆ : ಅಲ್ಲ.... ಗೌರಿ ಸತ್ತುಹೋಗಿರೋದು, ರಾಮಕೃಷ್ಣನೇ ಬಂದು ಹೇಳಿ ಹೋದ.

ರಾಣಿ : ಸುಳ್ಳಾಡಬೇಡಿ, ರಾಮಕೃಷ್ಣಾನೇ ಸತ್ತಿರೋದು, ಆವನ ಶವಸಂಸ್ಕಾರಕ್ಕೆ ನಾನೇ ಅವಳಿಗೆ ನೂರು ವರಹ ಕೊಟ್ಟು ಕಳುಹಿಸಿದ್ದೇನೆ.

ದೊರೆ : ಗೌರಿ ಸಂಸ್ಕಾರಕ್ಕೆ ನೂರು ವರಹ ರಾಮಕೃಷ್ಣನಿಗೆ ನಾನೇ ಕೊಟ್ಟು ಕಳುಹಿಸಿದ್ದೇನೆ.

ರಾಣಿ : ಇಲ್ಲ, ರಾಮಕೃಷ್ಣ ..... ಸತ್ತಿರೋದು!

ದೊರೆ : ಇಲ್ಲ, ಗೌರಿ.... ಸತ್ತಿರೋದು!

ರಾಣಿ : ಇಲ್ಲ, ರಾಮಕೃಷ್ಣ!

ದೊರೆ : ಇಲ್ಲ, ಗೌರಿ!

ಮಂತ್ರಿ : ಮಹಾಸ್ವಾಮಿ, ಮಹಾರಾಣಿಯವರೊಡನೆ ಜಗಳ ಬೇಡ. ನಾವೇ ರಾಮಕೃಷ್ಣನ ಮನೆಗೆ ಹೋಗಿ ನೋಡೋಣ. ಯಾರು ಸತ್ತಿರೋದು ಗೊತ್ತಾಗುತ್ತೆ.

ದೊರೆ : ಹಾಗೆಯೆ ಆಗಲಿ, ನಡೆಯಿರಿ. (ನಿರ್ಗಮಿಸುವರು)

## ದೃಶ್ಯ - ೪

(ರಾಮಕೃಷ್ಣನ ಮನೆ. ರಾಮಕೃಷ್ಣ ಮತ್ತು ಗೌರಿ ತಿಂಡಿತಿನಿಸುಗಳನ್ನು ಮುಂದಿಟ್ಟುಕೊಂಡು ಹಸಿವನ್ನು ತಾಳದವರಂತೆ ಬಕಬಕ ತಿನ್ನುತ್ತಿದ್ದಾರೆ. ದೊಡ್ಡ ದೊಡ್ಡ ತುತ್ತುಗಳಲ್ಲಿ ಆಹಾರವನ್ನು ಬಾಯಿಗೆ ತುರುಕಿಕೊಳ್ಳುತ್ತಾರೆ)

ರಾಮಕೃಷ್ಣ : ಉಪಾಯವಿಲ್ದೆ ಇದ್ರೆ ಅಪಾಯವೇ ಕಣೆ ಗೌರಿ! ನಾನು ಮಾಡಿದ ಉಪಾಯ ಹೇಗಿದೆ? ತಿನ್ನು, ಬೇಕಾದಷ್ಟು ತಿನ್ನು. ಈಗ ಹಸಿವಿನ ಸಮಸ್ಯೆ ಬಗೆಹರಿಯಿತು.

ಮಂತ್ರಿ : (ಕೂಗುತ್ತ) ರಾಮಕೃಷ್ಣ, ರಾಮಕೃಷ್ಣಾ.... ಮಹಾರಾಜರು ಬಂದಿದ್ದಾರೆ, ಬಾಗಿಲು ತೆಗೆ.

ರಾಮಕೃಷ್ಣ : (ಗಾಬರಿಯಿಂದ) ಅಯ್ಯೋ ಮಹಾರಾಜರು! ಇನ್ನೇನು ಗತಿ! ಎಲ್ಲಾದನ್ನೂ ಒಳಗಿಡೇ. (ಗೌರಿ ಬೇಗ ಬೇಗ ಒಳಗಿಡುತ್ತಾಳೆ)

(ಹೊರಗಡೆ ಬಾಗಿಲು ತಟ್ಟುವ ಶಬ್ದ. ರಾಮಕೃಷ್ಣ ಮೆಲ್ಲಗೆ ಚಿಲಕ ಜಾರಿಸಿ, ಗೌರಿಗೆ ಸಂಜ್ಞೆಯ ಮೂಲಕ ಉಪಾಯವನ್ನು ತಿಳಿಸುತ್ತಾನೆ. ರಾಮಕೃಷ್ಣ ಮತ್ತು ಗೌರಿ ಇಬ್ಬರೂ ಸತ್ತವರಂತೆ ಮಲಗುತ್ತಾರೆ. ಬಾಗಿಲನ್ನು ನೂಕುತ್ತಾ ರಾಜ, ರಾಣಿ, ಮಂತ್ರಿ ಮೊದಲಾದವರು ಒಳಕ್ಕೆ ಬರುತ್ತಾರೆ).

ದೊರೆ : (ಮಲಗಿರುವ ರಾಮಕೃಷ್ಣ, ಗೌರಿಯನ್ನು ನೋಡಿ) ಆಶ್ಚರ್ಯ! ಇಬ್ಬರೂ ಸತ್ತಿದ್ದಾರೆ!

ರಾಣಿ : ಪರಮಾಶ್ಚರ್ಯ, ಇಬ್ಬರೂ ಸತ್ತಿದ್ದಾರೆ! ಗಂಡ ಸತ್ತದ್ದನ್ನು ತಾಳಲಾರದೆ ಗೌರಿ ಆಮೇಲೆ ಸತ್ತಿರಬೇಕು.

ದೊರೆ : ಇಲ್ಲ, ಹೆಂಡತಿ ಸತ್ತದ್ದನ್ನು ತಾಳಲಾರದೆ ಅವಳು ಸತ್ತಮೇಲೆ ರಾಮಕೃಷ್ಣ ಸತ್ತಿದ್ದಾನೆ.

ರಾಣಿ : ಇಲ್ಲ, ರಾಮಕೃಷ್ಣನೇ ಮೊದಲು ಸತ್ತಿದ್ದು. ಗೌರಿಯೇ ಬಂದು ಹೇಳಿದ್ದಾಳೆ.

ದೊರೆ : ಇಲ್ಲ, ಗೌರೀನೇ ಮೊದಲು ಸತ್ತದ್ದು. ರಾಮಕೃಷ್ಣನೇ ಬಂದು ಹೇಳಿದ್ದಾನೆ. ಹೌದೋ ಅಲ್ಲವೋ ತಿಮ್ಮರಸರೆ, ನೀವೇ ಹೇಳಿ.

ರಾಣಿ : ಸುಳ್ಳು, ರಾಮಕೃಷ್ಣನೇ ಮೊದಲು ಸತ್ತದ್ದು. ನನಗೆ ಚೆನ್ನಾಗಿ ಗೊತ್ತು. ಹೌದಲ್ವೇನೆ ಮಂದಾರವಲ್ಲಿ?

ಮಂತ್ರಿ : ಪ್ರಭು! ಈ ವಿಷಯದಲ್ಲಿ ನಿಮಗೂ ಮಹಾರಾಣಿಯವರಿಗೂ ಮನಸ್ತಾಪ ಏಕೆ? ಒಂದು ಕೆಲಸ ಮಾಡೋಣ. ಯಾರು ಮೊದಲು ಸತ್ತರು ಅಂತ ತಿಳಿಸುವವರಿಗೆ ಒಂದು ಸಹಸ್ರ ವರಹ ಬಹುಮಾನ ಅಂತ ಡಂಗುರ ಹೊಡೆಸಲು ಅಪ್ಪಣೆಯಾಗಬೇಕು.

ದೊರೆ : ಹಾಗೆಯೇ ಆಗಲಿ, ಅಮಾತ್ಯರೆ, ಮೊದಲು ಸತ್ತವರು ಯಾರೂಂತ ತಿಳಿಸುವವರಿಗೆ ಸಹಸ್ರ ವರಹವನ್ನು ಈಗಲೇ ಕೊಡುತ್ತೇನೆ. ಅಲ್ಲದೆ, ಇಗೋ! ನನ್ನ ಮುತ್ತಿನಹಾರವೂ ಅದರೊಂದಿಗೆ. (ಕೊರಳಿನಿಂದ ಮುತ್ತಿನ ಸರವನ್ನು ತೆಗೆದು ಕೈಯಲ್ಲಿ ಇಟ್ಟುಕೊಳ್ಳುತ್ತಾನೆ) ಯಾರು ಮೊದಲು ಸತ್ತದ್ದು ಎಂಬುದು ತೀರ್ಮಾನವಾಗಲಿ. ಎಲ್ಲ ಕಡೆ ಪ್ರಚುರಪಡಿಸಿ. (ರಾಜನ ಮಾತನ್ನು ಕೇಳಿ ರಾಮಕೃಷ್ಣ ಮತ್ತು ಗೌರಿ ಇಬ್ಬರೂ ಹಠಾತ್ತನೆ ಎದ್ದು-)

ಗೌರಿ, ರಾಮಕೃಷ್ಣ } (ಒಟ್ಟಿಗೆ) ಇವಳೇ/ಇವರೇ ಮೊದಲು ಸತ್ತದ್ದು ಮಹಾಪ್ರಭು!

ಗೌರಿ : (ರಾಣಿಯ ಬಳಿ ಹೋಗಿ) ಅಮ್ಮಾಜಿ ಮೊದಲು ಸತ್ತವರು ಇವರೇ. ನನಗೇ ಬಹುಮಾನ ನೀಡಬೇಕು!

ರಾಮಕೃಷ್ಣ : (ರಾಜನ ಬಳಿ ಹೋಗಿ) ಮಹಾಪ್ರಭು, ಮೊದಲು ಸತ್ತವಳು ಇವಳು. ನನಗೇ ಬಹುಮಾನ ನೀಡಬೇಕು!

ಗೌರಿ : ನೀವು ಸುಮ್ಮನೆ ಕೂತುಕೊಳ್ಳಿ. ತಾಯಿ ಇವರೇ ಮೊದಲು ಸತ್ತದ್ದು.

ರಾಮಕೃಷ್ಣ : ನೀನು ಸುಮ್ಮನೆ ಬಿದ್ದುಕೊಳ್ಳೆ. ಪ್ರಭು ಇವಳೇ ಮೊದಲು ಸತ್ತದ್ದು.

ಗೌರಿ, ರಾಮಕೃಷ್ಣ } (ಒಟ್ಟಿಗೆ) ಇವಳು..... ಇವರು....... ಇವಳು....... ಇವರು.........

(ರಾಜ, ರಾಣಿ ಸಖಿ, ಮಂತ್ರಿ ಎಲ್ಲರೂ ಕಕ್ಕಾಬಿಕ್ಕಿಯಾಗುತ್ತಾರೆ)

ದೊರೆ : ಓಹೋ! ಈಗ ಅರ್ಥವಾಯಿತು, ನೀವು ಇಬ್ಬರೂ ಏಕೆ ಸತ್ತಿರೆಂಬುದು! ಎಲ್ಲಿ, ಬಹುಮಾನ ಬೇಕಾದರೆ ಇಬ್ಬರೂ ಸಾಯಬೇಕು, ಹೂಂ. ಸತ್ತು ಮತ್ತೆ ಬದುಕಿರಿ!

ರಾಮಕೃಷ್ಣ, ಗೌರಿ } (ಒಟ್ಟಿಗೆ) ಪ್ರಭು! ತಾಯಿ! (ಸಾಷ್ಟಾಂಗ ನಮಸ್ಕರಿಸುತ್ತ ಸತ್ತಂತೆ ಒಂದು ಕ್ಷಣ ಮಲಗುತ್ತಾರೆ. ಮತ್ತೆ ಎಲ್ಲರೂ ಒಟ್ಟಿಗೆ ನಗುತ್ತಿದ್ದಂತೆಯೇ ಇಬ್ಬರೂ ಎದ್ದು ಬಿಡುತ್ತಾರೆ. ದೊರೆ, ನಗುವಿನ ಮಧ್ಯದಲ್ಲೇ ರಾಮಕೃಷ್ಣನಿಗೆ ಮುತ್ತಿನ ಹಾರ ತೊಡಿಸುತ್ತಾನೆ.)

(ಎಲ್ಲರೂ ನಗುತ್ತಾರೆ)

**ನಾಟಕಕಾರರ ಪರಿಚಯ**

ಡಾ. ಎಚ್.ಕೆ. ರಾಮನಾಥರು ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಎಂಬಲ್ಲಿ ೧೯೩೮ರಲ್ಲಿ ಜನಿಸಿದರು. ಕನ್ನಡ ರಂಗಭೂಮಿ ಬಗೆಗೆ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿ ಪಡೆದಿರುವ ಶ್ರೀಯುತರು ಪ್ರಸ್ತುತ ಮೈಸೂರಿನಲ್ಲಿ ವಾಸವಾಗಿದ್ದಾರೆ.

ತಿ.ನರಸೀಪುರದಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ವೃತ್ತಿ ಆರಂಭ. ಅನಂತರ ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಕನ್ನಡ ವಿಭಾಗದಲ್ಲಿ ಶಿಕ್ಷಕರಾಗಿ, ಅದೇ ಸಂಸ್ಥೆಯಲ್ಲಿ 'ಶ್ರವಣ ಕಾರ್ಯಕ್ರಮ ನಿರ್ಮಾಪಕ'ರಾಗಿ ಸೇವೆ. ಭಾಷೆಗೆ ಸಂಬಂಧಿಸಿದಂತೆ ಮಕ್ಕಳು ಹಾಗೂ ಶಿಕ್ಷಕರಿಗಾಗಿ ಹಲವು ಶ್ರವಣ ಕಾರ್ಯಕ್ರಮಗಳ ತಯಾರಿಕೆ.

ಬಸವಣ್ಣನವರು, ಕತ್ತಲೆ ಹರಿಯಿತು ಮತ್ತು ಸಂಬಂಧ, ಮಕ್ಕಳೇ ಆಡಬನ್ನಿ, ಕನ್ನಡ ರಂಗಭೂಮಿಯ ವಿಕಾಸ, ಕರ್ನಾಟಕ ರಂಗಭೂಮಿ: ನಿನ್ನೆ - ಇಂದು - ನಾಳೆ (ಸಂ.) - ಮುಂತಾದ ಕೃತಿಗಳು ಪ್ರಕಟವಾಗಿವೆ. ಶಿಕ್ಷಣಕ್ಷೇತ್ರದಲ್ಲಿ ಎನ್‌ಸಿಇಆರ್‌ಟಿಯ ರಾಷ್ಟ್ರೀಯ ಪುರಸ್ಕಾರ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಶತಮಾನದ ಮಕ್ಕಳ ಸಾಹಿತ್ಯ ಸಂಪಾದಿತ ಕೃತಿಯಲ್ಲಿರುವ 'ಮತ್ತೆ ಬದುಕಿರಿ' ನಾಟಕದ ಸಂಕ್ಷಿಪ್ತ ರೂಪವಿದು.

ಐತಿಹಾಸಿಕ ನಾಟಕವೆಂದೇ 'ಮತ್ತೆ ಬದುಕಿರಿ'ಯನ್ನು ಗುರುತಿಸಬಹುದಾದರೂ ಇದೊಂದು ಕಾಲ್ಪನಿಕ ನಗೆನಾಟಕ. ನಾಟಕದ ಆವರಣ ಐತಿಹಾಸಿಕವಾದರೂ ತೆನಾಲಿರಾಮಕೃಷ್ಣನ ಹಾಸ್ಯ ಪ್ರವೃತ್ತಿ, ಸಮಯಪ್ರಜ್ಞೆ, ಅವನ ವಿದೂಷಕ ಪ್ರವೃತ್ತಿಗಳನ್ನು ಅನಾವರಣ ಮಾಡುವುದೇ ಈ ನಾಟಕದ ಮೂಲ ಉದ್ದೇಶ. ಹಸಿವು, ಬರಗಾಲದ ಭೀಕರತೆಯನ್ನೇ ಹಾಸ್ಯಕ್ಕೆ ವಸ್ತುವನ್ನಾಗಿಸುವ ವಿಚಿತ್ರ ವೈನೋದಿಕ ಪ್ರಜ್ಞೆಯನ್ನು ಇಲ್ಲಿ ಕಾಣಬಹುದು.

ಆಶಯ

**ಶಬ್ದಾರ್ಥ :**

ಕ್ಷಾಮ - ಬರ; ವಿದೂಷಕ - ಹಾಸ್ಯಗಾರ; ಕವಳ - ತುತ್ತು, (ಇಲ್ಲಿ) ಅನ್ನ; ರಹಸ್ಯ - ಗುಟ್ಟು; ರೋದನ - ಅಳು; ಯೋಗ್ಯತೆ - ಅರ್ಹತೆ; ಅಮಾತ್ಯ - ಮಂತ್ರಿ; ವೀಕ್ಷಿಸು - ನೋಡು; ಸಂಸ್ಕಾರ - ಸತ್ತಮೇಲೆ ನಡೆಸುವ ಕಾರ್ಯ; ಮನಸ್ತಾಪ - ದ್ವೇಷ. ಸಹಸ್ರ - ಸಾವಿರ.

**ಟಿಪ್ಪಣಿ :**

೧. ಕೃಷ್ಣದೇವರಾಯ: ವಿಜಯನಗರ ಸಾಮ್ರಾಜ್ಯದ ಅರಸರಲ್ಲಿ ಅತ್ಯಂತ ಪ್ರಖ್ಯಾತನಾದವನು. ಇವನ ಆಳ್ವಿಕೆಯ ಕಾಲ ೧೫೦೯-೧೫೨೯. ಕೃಷ್ಣದೇವರಾಯನು ಎಲ್ಲ ಧರ್ಮಗಳಿಗೂ ಆಶ್ರಯದಾತನಾಗಿದ್ದ. ಇವನ ಕಾಲವನ್ನು 'ಸ್ವರ್ಣಯುಗ' ಎನ್ನುತ್ತಾರೆ.

೨. ತೆನಾಲಿ ರಾಮಕೃಷ್ಣ: ರಾಮಕೃಷ್ಣನ ಊರು ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ತೆನಾಲಿ. ಹಾಗಾಗಿ ಈತ ತೆನಾಲಿ ರಾಮಕೃಷ್ಣನಾದ. ಕೃಷ್ಣದೇವರಾಯನ ಆಸ್ಥಾನ ಕವಿ-ವಿದೂಷಕರಲ್ಲಿ ಒಬ್ಬನಾಗಿದ್ದ. ಬುದ್ಧಿವಂತಿಕೆ ಹಾಗೂ ಚಮತ್ಕಾರದಿಂದ ಉತ್ತರಿಸುವ ಪ್ರತಿಭೆ ಈತನಲ್ಲಿ ಮನೆ ಮಾಡಿಕೊಂಡಿತ್ತು.

೩. ತಿಮ್ಮರಸ: ಈತ ಕೃಷ್ಣದೇವರಾಯನ ಮಹಾಮಂತ್ರಿ, ಸಲಹಿದವನು.

೪. ಕೈಹಿಡಿ: ಮದುವೆಯಾಗು, ರಕ್ಷಿಸು.

೫. ಹೊಟ್ಟೆಗೆ ತಣ್ಣೀರು ಬಟ್ಟೆ: ತಿನ್ನಲೂ ಏನೂ ಸಿಗದು ಎಂಬ ಭಾವ.

## ಅಭ್ಯಾಸ

**ಪ್ರಶ್ನೆಗಳು :**

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ರಾಮಕೃಷ್ಣನಿಗೆ ಯಾವ ಕಾಲದ ಹಸಿವು ತಟ್ಟಿತ್ತು?

೨. ಕೃಷ್ಣದೇವರಾಯನೊಡನೆ ಪಗಡೆಯಾಟ ಆಡುತ್ತಿದ್ದವನು ಯಾರು?

೩. ತೆನಾಲಿ ರಾಮಕೃಷ್ಣನು ತನ್ನ ಹೆಂಡತಿಯು ಎಲ್ಲಿಗೆ ಹೋದಳೆಂದು ದೊರೆಯ ಬಳಿ ಹೇಳಿದನು?

೪. ದೊರೆಯು ರಾಮಕೃಷ್ಣನಿಗೆ ಎಷ್ಟು ವರಹಗಳನ್ನು ಕೊಡಲು ಹೇಳಿದನು?

೫. ರಾಮಕೃಷ್ಣನ ಹೆಂಡತಿಯು ತನ್ನ ಗಂಡನು ಎಲ್ಲಿಗೆ ಹೋದನೆಂದು ರಾಣಿಗೆ ಹೇಳಿದಳು?

೬. ತೆನಾಲಿ ರಾಮಕೃಷ್ಣ ಹಾಗೂ ಅವನ ಹೆಂಡತಿ ಸತ್ತಿರುವರೋ ಇಲ್ಲವೋ ತಿಳಿಯಲು ರಾಜರಾಣಿಯರು ಏನು ಮಾಡಿದರು?

೭. ರಾಜರಾಣಿಯರು ಬಂದದ್ದನ್ನು ತಿಳಿದು ರಾಮಕೃಷ್ಣ ಹಾಗೂ ಅವನ ಹೆಂಡತಿ ಏನು ಮಾಡಿದರು?

೮. ಬಹುಮಾನ ಬೇಕಾದರೆ ಏನು ಮಾಡಬೇಕೆಂದು ದೊರೆಯು ಹೇಳಿದನು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ರಾಮಕೃಷ್ಣನು ತನ್ನ ಹೆಂಡತಿಯ ಕಿವಿಯಲ್ಲಿ ಹೇಳಿದ ಉಪಾಯ ಯಾವುದು?

೨. ರಾಮಕೃಷ್ಣನೇ ಸತ್ತಿರುವನೆಂದು ರಾಣಿ ದೊರೆಗೆ ಹೇಗೆ ಹೇಳಿದಳು?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು/ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ರಾಮಕೃಷ್ಣನನ್ನು ಆತನ ಹೆಂಡತಿ ಹಂಗಿಸಿದ ಬಗೆ ಹೇಗೆ?

೨. ತೆನಾಲಿ ರಾಮಕೃಷ್ಣ ಹಾಗೂ ಗೌರಿ - ಈ ಇಬ್ಬರಲ್ಲಿ ಮೊದಲು ಸತ್ತವರು ಯಾರೆಂದು ತಿಳಿಯಲು ಮಂತ್ರಿಯು ಮಾಡಿದ ಉಪಾಯವೇನು?

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.

೧. ತಾಳಲಾರೆ ವಿಧಿಯ ಶಾಪ! ತಾಳಲಾರನೈ!

೨. ಹೂಂ. ನಿಮ್ಮ ಕೈಹಿಡಿದ ಮೇಲೆ ಇನ್ನೂ ಏನೇನು ಮಾಡಬೇಕೊ?

೩. ಉಪಾಯವಿಲ್ದೆ ಇದ್ರೆ ಅಪಾಯವೇ

೪. ಹೂಂ, ಸತ್ತು ಮತ್ತೆ ಬದುಕಿರಿ!

## ಭಾಷಾಭ್ಯಾಸ

ಅ. ಇವುಗಳ ತದ್ಭವ ಪದಗಳನ್ನು ಬರೆಯಿರಿ.

ವಿಧಿ, ಸಂತೋಷ, ಆಶ್ಚರ್ಯ, ಸಹಸ್ರ

ಆ. ಕೆಳಗಿನ ಪದಗಳನ್ನು ಕೂಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ.

ನೀನು + ಈಗ = ...................... (......................)

ಪರಮ + ಆಶ್ಚರ್ಯ = ...................... (......................)

ಕೈ + ಅಲ್ಲಿ = ...................... (....................)

ಸಹಾಯ + ಆಯಿತು = ...................... (....................)

ಇನ್ನು + ಎಲ್ಲಿ = ...................... (....................)

೩. 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ | | ಬ |
|---|---|---|
| ೧. ಗೌರಿ | - | ಸಖಿ |
| ೨. ಸಾಳುವ ತಿಮ್ಮರಸ | - | ರಾಜ |
| ೩. ಕೃಷ್ಣದೇವರಾಯ | - | ಹೆಂಡತಿ |
| ೪. ಮಂದಾರವಲ್ಲಿ | - | ವಿದೂಷಕ |
| ೫. ತೆನಾಲಿ ರಾಮಕೃಷ್ಣ | - | ರಾಣಿ |
| | - | ಮಹಾಮಂತ್ರಿ |

## ಚಟುವಟಿಕೆ

೧. ಈ ನಾಟಕವನ್ನು ನಿಮ್ಮ ಶಾಲಾ ಸಮಾರಂಭಗಳಲ್ಲಿ ಅಭಿನಯಿಸಿರಿ.

೨. ಕೆಳಗಿನ ಕತೆಯನ್ನು ನಾಟಕ ರೂಪಕ್ಕೆ ಪರಿವರ್ತಿಸಿರಿ.

ಒಮ್ಮೆ ಬೀರಬಲ್ಲನು ಅಕ್ಬರನ ಆಸ್ಥಾನಕ್ಕೆ ತಡವಾಗಿ ಬಂದನು. ಆಗ ಅಕ್ಬರನು ಯಾಕೆ ಇಷ್ಟೊಂದು ತಡಮಾಡಿದೆ. ಆಸ್ಥಾನದ ಕಾನೂನುಗಳು ನಿನಗೆ ಸಂಬಂಧಪಡುವುದಿಲ್ಲವೆ? ಎಂದನು. ಅದಕ್ಕೆ ಬೀರಬಲ್ಲನು ಮನೆಯಲ್ಲಿ ಮಡದಿ ಇರಲಿಲ್ಲ. ಮಗು ಜೋರಾಗಿ ಅಳುತ್ತಿತ್ತು. ಸಮಾಧಾನಪಡಿಸಿ ಬರುವುದಕ್ಕೆ ಇಷ್ಟು ತಡವಾಯಿತು ಎಂದನು. ಅದು ಭಾರೀ ದೊಡ್ಡ ಕೆಲಸವೆ? ನಾನಾಗಿದ್ದರೆ ಒಂದು ನಿಮಿಷದಲ್ಲಿ ಸಮಾಧಾನ ಪಡಿಸುತ್ತಿದ್ದೆ ಎಂದ ಅಕ್ಬರ. ಹಾಗಾದರೆ ಪರೀಕ್ಷಿಸೋಣ. ನಾನು ಮಗು ನೀವು ತಂದೆ. ಅದೇನು ಮಾಡುತ್ತೀರೋ ಮಾಡಿ ಎಂದು ಬೀರಬಲ್ಲ ಜೋರಾಗಿ ಅಳತೊಡಗಿದನು.

ಅಕ್ಬರನು ಅಳಬೇಡ ಮಗು ಏನು ಬೇಕು ನಿನಗೆ! ಗೊಂಬೆ ಬೇಕೆ? ತಿಂಡಿ ಬೇಕೆ? ಸೂರ್ಯ ಬೇಕೆ? ಚಂದ್ರ ಬೇಕೆ? ಎಂದು ಕೇಳಿದನು. ಬೀರಬಲ್ಲ ಅಳುತ್ತಾ ನನಗೆ ಅದ್ಯಾವುದೂ ಬೇಡ, ಕಬ್ಬು ಬೇಕು ಎಂದನು. ಯಾರಲ್ಲಿ? ಒಂದು ಕಬ್ಬಿನ ಹೊರೆ ತನ್ನಿರೋ ಎಂದು ಅಕ್ಬರ ಕೂಗಿದನು. ಒಂದು ಹೊರೆ ಕಬ್ಬು ಬಂತು. ಬೀರಬಲ್ಲ

ಜೋರಾಗಿ ಅತ್ತನು. ಈಗೇನಾಯಿತು? ಅಕ್ಬರ ಕೇಳಿದ. ನನಗೆ ತುಂಡು ಮಾಡಿಕೊಡಬೇಕು ಎಂದ ಬೀರಬಲ್ಲ. ಯಾರಲ್ಲಿ ತುಂಡು ಮಾಡಿರೋ, ಕಬ್ಬನ್ನು ಎಂದನಾತ. ತುಂಡು ಕಬ್ಬು ನೋಡಿ ಬೀರಬಲ್ಲ ಇನ್ನೂ ಜೋರಾಗಿ ಅತ್ತನು. ಮತ್ತೇನಾಯಿತು? ಎಂದು ಅಕ್ಬರ ಕೇಳಿದಾಗ ನನಗೆ ಇಡೀ ಕಬ್ಬು ಬೇಕು ಎಂದ. ಅದಕ್ಕೇನಂತೆ ಇನ್ನೊಂದು ಇಡೀ ಕಬ್ಬು ಕೊಡಿರೋ ಎಂದ ಅಕ್ಬರ. ಬೀರಬಲ್ಲ ನೆಲದಲ್ಲಿ ಹೊರಳಾಡುತ್ತಾ ನನಗೆ ಅದೇ ಕಬ್ಬು ಇಡಿಮಾಡಿ ಕೊಡಬೇಕು ಬೇರೆ ಬೇಡ ಎಂದು ಅತ್ತನು.

ಅಕ್ಬರ ದಮ್ಮಯ್ಯ ಮಹಾರಾಯ ನಿನ್ನನ್ನು ಸಮಾಧಾನ ಪಡಿಸೋದು ನನ್ನ ಕೈಲಾಗೋಲ್ಲ. ನಾನು ಸೋತೆ ಎಂದನು. ಬೀರಬಲ್ಲನು ಎದ್ದು ಕುಳಿತ. ಎಲ್ಲರೂ ಚಪ್ಪಾಳೆ ತಟ್ಟಿದರು.

**೩. ಕೆಳಗಿನ ಹನಿಗವನಗಳನ್ನು ಓದಿ ಆನಂದಿಸಿರಿ. ನೀವೂ ಹನಿಗವನ ಬರೆಯಲು ಪ್ರಯತ್ನಿಸಿರಿ.**

**ನಾಟಕದಲ್ಲಿ**

ಪ್ರೇಕ್ಷಕರನ್ನು
ಸೆರೆಹಿಡಿದದ್ದು
ಕೊನೆಯ ತನಕ
ನಾಟಕದ ವಸ್ತು-
ನಟನೆ - ಸಂಭಾಷಣೆ -
ನಿರ್ದೇಶಕನ ಕೈಚಳಕ
ಯಾವುದೂ ಅಲ್ಲ
ಬಾಗಿಲಿನ ಚಿಲಕ!

**ಚಪ್ಪಾಳೆ**

ಹಾಸ್ಯಕವನ
ಓದಿದಾಗ
ನಗ್ಸಿದ್ದಕ್ಕೆ ಚಪ್ಪಾಳೆ
ಗಂಭೀರ ಕವನ
ಓದಿದಾಗ
ಮುಗ್ಸಿದ್ದಕ್ಕೆ ಚಪ್ಪಾಳೆ

**ಅನುಮಾನ**

ಹತ್ತು ವಿಕೆಟ್ಟು
ಕಿತ್ತನು ಕುಂಬ್ಳೆ
ಅಂದ್ರೆ ನಂಬೋರ್‍ಯಾರು?
ಆ ಕಡೆ ಮೂರು
ಈ ಕಡೆ ಮೂರು
ಒಟ್ಟು ಇರೋದೇ ಆರು

**ಎಚ್. ಡುಂಡಿರಾಜ್**

# ೩. ಲಠ್ಠಣಿಗೆ ಪುರಾಣ

ಯಮುನಾ ಮೂರ್ತಿ

ಪ್ರ
ವೇ
ಶ

ನಗುವು ಸಹಜ ಧರ್ಮ, ನಗಿಸುವುದು ಪರಧರ್ಮ - ಎಂಬ ಮಾತಿನಂತೆ ನಗು ಇಂದು ಆವಶ್ಯಕವಾಗಿದೆ. ಬೇಸತ್ತ ಬದುಕನ್ನು ಬಾಳಿನತ್ತ ಕೊಂಡೊಯ್ಯುವ ವಾಹನ ಹಾಸ್ಯ. ಜೊತೆಗೆ ಅದು ಸತ್ಯದ ದರ್ಶನವನ್ನೂ ಮಾಡಿಸುತ್ತದೆ.

ಲಲಿತ ಪ್ರಬಂಧವು ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಇತ್ತೀಚಿನದು. ಇದರಲ್ಲಿ ಹಾಸ್ಯವೂ ಒಂದು. ಹಾಸ್ಯಲೇಖನವು ವಿಚಾರ ಸಾಹಿತ್ಯಕ್ಕಿಂತ ಹಾಗೂ ವರ್ಣನಾತ್ಮಕ ಪ್ರಬಂಧಕ್ಕಿಂತ ಭಿನ್ನವಾದುದು. ಇಲ್ಲಿ ವಿಷಯ-ವಸ್ತುವಿಗಿಂತ ಹಾಸ್ಯಕ್ಕೆ ಪ್ರಾಧಾನ್ಯ ನೀಡಲಾಗುತ್ತದೆ. ಇಲ್ಲಿಯ ನಿರೂಪಣೆ ಸರಳ ಹಾಗೂ ಸುಲಲಿತವಾಗಿರುತ್ತದೆ. ಇತ್ತೀಚೆಗೆ ಈ ಪ್ರಕಾರದಲ್ಲಿ ಲೇಖಕಿಯರೂ ಬೆಳಕಿಗೆ ಬರುತ್ತಿದ್ದಾರೆ.

"ಅಲ್ಲಾ, ಇದಕ್ಕೆ ಲಠ್ಠಣಿಗೆ ಅಂತ ಹೆಸರು ಹ್ಯಾಂಗ ಬಂತು ಅಂತೀನಿ. ನೋಡ್ಲಿಕ್ಕಾರ ಲಠ್ಠ ಇಲ್ಲ. ನಡಕ್ಕ ಸ್ವಲ್ಪ ಲಠ್ಠ ಅದ ಖರೆ. ಆ ಬಾಜು ಈ ಬಾಜು ಸಪೂರ ಅದ. ಮನ್ಯಾಗಿನ ಎಷ್ಟೋ ಸಾಮಾನ ಇದಕ್ಕಿಂತ ಲಠ್ಠ ಅವ. ಎಲ್ಲಾ ಬಿಟ್ಟು ಇದಕ್ಕ ಯಾಕ ಲಠ್ಠಣಗಿ ಅಂತ ಕರೀತಾರ?" ಅಂತ ನನ್ನ ಧಾರವಾಡದ ಗೆಳತಿ ಪ್ರಭಕ್ಕ ಕೇಳಿದಳು, ಚಪಾತಿ ಲಟ್ಟಿಸ್ತಾ. ಧಾರವಾಡದ ಕಡೆ 'ದಪ್ಪ' ಅನ್ನೋದಕ್ಕೆ ಲಠ್ಠ ಅಂತಾರೆ. ನಾನು ಅಲ್ಲಿಗೆ ಹೋದ ಹೊಸದ್ರೊಳಗೆ ನನ್ನ ಗೆಳತಿ ಮನೆಗೆ ಯಾರೊ ಬಂದಿದ್ದರು. ನನ್ನನ್ನ ನೋಡಿ 'ಅಯ್ಯ ನಮ್ಮವ್ವ, ಏನ್ ಲಠ್ಠ ಇದಾಳ ಈಕೆ!' ಅಂತಂದದ್ದು ಅಕಸ್ಮಾತ್ ನನ್ನ ಕಿವಿಗೆ ಬಿತ್ತು. ಎಷ್ಟು ಗಟ್ಟಿಮುಟ್ಟಾಗಿದ್ದೀನಿ ಅಂತ ಹೊಗಳ್ತಾ ಇದ್ದಾರೆ ಅಂತ ನನಗೆ ಒಳಗೊಳಗೆ ಖುಶಿ. ಎಷ್ಟೋ ದಿನಗಳಾದ ಮೇಲೆ 'ಲಠ್ಠ' ಅನ್ನೊ ಪದದ ಅರ್ಥ ಗೊತ್ತಾಗಿ ನನಗೆ ಎಷ್ಟು ಸಿಟ್ಟು ಬಂತೂಂದ್ರೆ, ಅವರೇನಾದ್ರೂ ಎದುರಿಗೆ ಬಂದಿದ್ದರೆ.... ಲಟ್ಟಿಸಿ ಬಿಟ್ಟಿಸಿಬಿಡ್ತಿದ್ದೆ. ಅಂದ್ಹಾಗೆ ಪ್ರಭಾನ ವಿಚಾರ ಸರಣಿ ನನ್ನ ಮನಸ್ಸಿನಲ್ಲೂ ಗೊಂದಲ ಎಬ್ಬಿಸ್ತು. ನೇರವಾಗಿ ನಮ್ಮಜ್ಜಿ ಹತ್ರ ಹೋದೆ. ನನ್ನ ಕೈಯಲ್ಲಿನ ಲಠ್ಠಣಿಗೆ ನೋಡಿ, ಒಂದು ಹೆಜ್ಜೆ ಹಿಂದೆ ಸರಿದರು, ಪಾಪ.

"ಇದಕ್ಕೆ ಲಠ್ಠಣಿಗೆ ಅಂತ ಯಾರು ಹೆಸರಿಟ್ಟರು ಅಜ್ಜಿ?"

ನನ್ನ ಪ್ರಶ್ನೆ ಕೇಳಿ ತಮ್ಮ ಬೊಚ್ಚಬಾಯಿ ಬಿಟ್ಕೊಂಡು ಖೊಕ್ ಅಂತ ನಕ್ಕರು.

"ಹುಚ್ಚೀ ಹುಚ್ಚಿ,ಇದೇನ್ ಕೂಸಾ ಕುನ್ನೀನಾ. ಹೆಸರಿಟ್ಟು ತೊಟ್ಟಿಲಿಗ್ಹಾಕಿ ತೂಗೋಕೆ?"

"ಮತ್ತೆ ಲಟ್ಟಣಿಗೆ ಅಂತ ಯಾಕೆ ಕರೀತಾರೆ?"

"ಯಾಕೇನು? ನಮ್ಮಜ್ಜಿ ಲಟ್ಟಣಿಗೆ ಅಂದ್ರು, ನಮ್ಮಮ್ಮಾನೂ ಲಟ್ಟಣಿಗೆ ಅಂದ್ರು, ನಾನು ಲಟ್ಟಣಿಗೆ ಅಂದೆ, ನನ್ನ ಮಗಳೂ ಲಟ್ಟಣಿಗೆ ಅಂದಳು. ಈಗ ನೀನೂ ಅಂತಿದ್ದೀಯ."

"ಅದ್ಸರಿ ಅಜ್ಜಿ..... ಲಟ್ಟಣಿಗೆ ಅಂತಾನೇ ಯಾಕೆ ಅಂದ್ರೂಂತ. ಪಟ್ಟಣಿಗೆ ಅಂತಾನೂ ಅನ್ನಬಹುದಾಗಿತ್ತಲ್ಲಾ?"

"ಯಾಕೇಂದ್ರೆ? ಲಟ್ಟಿಸ್ತಾರೆ. ಪಟ್ಟಿಸೊಲ್ಲವಲ್ಲಾ?"

"ಅಂದ್ರೆ?"

"ಅಂದ್ರೇನು? ಗೋಧಿಹಿಟ್ಟೋ, ಮೈದಾನೊ, ಅಕ್ಕಿ ಹಿಟ್ಟೋ ಯಾವುದಾದ್ರೂ ತೊಗೊಂಡು, ನೀರು ಹಾಕಿ ಗಟ್ಟಿಯಾಗಿ, ಕಲಸಿ ಸಣ್ಣ ಸಣ್ಣ ಉಂಡೆಗಳನ್ನ ಮಾಡಿ, ಒಂದೊಂದೇ ಉಂಡೆ ಮಣೆ ಮೇಲಿಟ್ಟು, ಲಟ್ಟಣಿಗೆಯಿಂದ ಲಟ್ಟಿಸಿ ಚಪಾತಿ ಅಥವಾ ರೊಟ್ಟಿ ಮಾಡೊಲ್ಲವಾ? ಅದಕ್ಕಂತಾರೆ 'ಲಟ್ಟಣಿಗೆ' ಅಂತ."

"ಅದ್ಸರಿ ಅಜ್ಜಿ..... ಹಿಟ್ಟಿನ ಮುದ್ದೇನ ಚಪಾತಿ ಆಕಾರಕ್ಕೆ ತರೊ ಕ್ರಿಯೆಗೆ, 'ಲಟ್ಟಿಸೋದು' ಅಂತ್ಲೇ ಯಾಕನ್ನಬೇಕು ಅಂತ ನನ್ನ ಪ್ರಶ್ನೆ."

"ನೀನು ಯಾವತ್ತಾದ್ರೂ ಚಪಾತಿ ಮಾಡಿದ್ದಿದ್ದರೆ, ಈ ಪ್ರಶ್ನೆ ಕೇಳ್ತನೇ ಇರಲಿಲ್ಲ. ಮಣೆ ಮೇಲೆ ಹಿಟ್ಟಿನ ಉಂಡೆ ಇಟ್ಟು ಲಟ್ಟಣಿಗೆಯಿಂದ ಲಟ್ಟಿಸೋವಾಗ ಬರೊ ಶಬ್ದ ಕೇಳಿದ್ದೀಯೇನು? ಹ್ಯಾಗೆ ಕೇಳಿಸುತ್ತೆ ಹೇಳು?"

"ಒಂದೊಂದು ಸಲ ಲಟ್ಟಣಿಗೆ ಎತ್ತಿ ಮಣೆ ಮೇಲೆ ಇಟ್ಟಾಗ್ಲೂ ಲಟ್ ಲಟ್ ಲಟ್ ಲಟ್ ಅನ್ನುತ್ತೆ"

"ಅದಕ್ಕೇ ಲಟ್ಟಣಿಗೆ, ಲಟ್ಟಿಸೋದೂ ಅನ್ನೋದು"

ಅಜ್ಜಿ ಏನೊ, ಒಳ್ಳೆ Researchಉ ಸಂಶೋಧನೆ ಮಾಡಿದೋರ ಹಾಗೆ ಉತ್ತರ ಹೇಳಿದರು. ಆದ್ರೆ ನನ್ನ ಮನಸ್ಸಿಗೆ ಮಾತ್ರ ಪೂರ್ತಿ ಸಮಾಧಾನ ಆಗಲಿಲ್ಲ. ಈ ಪದದ ಮೂಲ, ಬೇರೆ ಭಾಷೇಲಿ ಏನಾದ್ರೂ ಇರಬಹುದಾ ಅಂತ ಯೋಚ್ನೆ ಮಾಡಿದೆ. ಬ್ರಿಟಿಷರ ಆಡಳಿತದಲ್ಲಿ ಬೆಳೆದ ನಾವು ಎಷ್ಟೋ ಪದಗಳನ್ನು ಇಂಗ್ಲಿಷಿನಿಂದ ಎರವಲು ಪಡೆದ ಹಾಗೆ ಇದನ್ನೂ ಯಾಕೆ ಪಡೆದಿರಬಾರದು? 'ಲಟ್ಟಣಿಗೆ' ಲಟ್ಟ. ಲಾಟ್ (lot) ಅಂದ್ರೆ ತುಂಬಾ, ಭಾರಿ. ಹ್ಞಾಂ ಭಾರಿ ಅಂದ ಕೂಡ್ಲೆ ನೆನಪಿಗೆ ಬರೋದು little lotta! comicsನಲ್ಲಿ ಡಾಬ್ ಅನ್ನೊ ಹುಡುಗಿಯ ಸ್ನೇಹಿತೆ. ಭಾರಿ ದೇಹ! ಗಿಡ್ಡನೆ ದಪ್ಪನೆ ಕೈ ಕಾಲು. ಒಂದು

ಸಲ ಒಂದು ಚಿಕ್ಕ ನಾಣ್ಯ ಕೈಜಾರಿ ಉರುಳ್ಕೊಂಡು ಒಂದು ದೊಡ್ಡ ಲಾರಿ ಕೆಳಗೆ ಹೋಗ್ಬಿಡುತ್ತೆ. ಅಷ್ಟು ಭಾರಿ ದೇಹ ಬಗ್ಗಿಸಿ ಕೆಳಗೆ ಹುಡುಕೋದು ಹ್ಯಾಗೆ? ಲೊಟ್ಟ, ಸುಲಭವಾಗಿ ಹಾಯಾಗಿ ಲಾರಿಯನ್ನೇ ಎತ್ತಿ ಪಕ್ಕಕ್ಕೆ ಸರಿಸಿ ನಾಣ್ಯ ತೆಗೆದುಕೊಳ್ಳುತ್ತಾಳೆ! ಅಂಥ ಶಕ್ತಿವಂತೆ! ಅದೇ ರೀತಿ ಗೋಧಿಹಿಟ್ಟು, ಮೈದಾಹಿಟ್ಟು ಎಷ್ಟೇ ಜಿಗುಟಾಗಿರಲಿ ಅದರ ಮೇಲೆ ಹೊರಳಾಡಿ, ಸುಲಭವಾಗಿ ತೆಳ್ಳಗೆ ಹಪ್ಪಳದಂತೆ, ಅರೆ! ಹಪ್ಪಳದ ಹಿಟ್ಟನ್ನು ಹಪ್ಪಳ ಮಾಡೋದೂ ಲಟ್ಟಣಿಗೆ ತಾನೆ? ಲೊಟ್ಟಾನ ಹಾಗೇ ಶಕ್ತಿ ಇದೆ ಅಂತ 'ಲಟ್ಟಣಿಗೆ' ಅಂತ ಹೆಸರಿಟ್ಟಿರಬಹುದಾ? ಊಹುಂ ಇರಲಾರದು. ಲಟ್ಟಣಿಗೆ ಸೃಷ್ಟಿಯಾಗಿ ಎಷ್ಟೊ ಯುಗಗಳಾಗಿರಬೇಕು. (ಲೊಟ್ಟ ಇತ್ತೀಚಿಗಿನ ಸೃಷ್ಟಿ ಅಲ್ಲವೆ?)

ಎಷ್ಟು ತಲೆಕೆಡಿಸ್ಕೊಂಡರೂ, ಲಟ್ಟಣಿಗೆಯಿಂದ ತಲೆ ಕುಟ್ಕೊಂಡ್ರೂ ಸರಿಯಾದ ಉತ್ತರ ಸಿಗಲಿಲ್ಲ. ಲಟ್ಟಣಿಗೆಯ ಜನ್ಮರಹಸ್ಯ ಏನಿರಬಹುದು? ವಿಚಾರ ಮಾಡಿ ಬೇಸರವಾಗಿ ಕಡೆಗೆ ನಾಲ್ಕು ಬಿಸಿಬಿಸಿ ಚಪಾತಿ, ಬಾಳೆಹಣ್ಣಿನ ಸೀಕರಣೆ, ಆಲುಗಡ್ಡೆ ಪಲ್ಯ ಎಲ್ಲಾ ಗಡದ್ದಾಗಿ ಹೊಡೆದ ಮೇಲೆ ಸ್ವಲ್ಪ ಸಮಾಧಾನವಾಯ್ತು. ಯಾಕಂದ್ರೆ ಹೊಟ್ಟೆ ತುಂಬಿದಾಗ, ಯೋಚನೆಗಳು ತಲೆ ತಿನ್ನೊಲ್ಲ ಅಂತ ನನ್ನ ಸಿದ್ಧಾಂತ.

ಹಾಯಾಗಿ ಮಲಗಿದ್ದೆ. ಆಗ ತಾನೆ ಜೊಂಪು ಹತ್ತಿತ್ತೊ ಏನೊ, ಕೀರಲು ಧ್ವನೀಲಿ ನಕ್ಕ ಶಬ್ದ.

"ಹಿಹಿಹಿ ನಾನು ಯಾರು ಗೊತ್ತಾಗಲಿಲ್ಲವಾ? ಇಷ್ಟು ಹೊತ್ತಿನ ತನಕ ಯಾರ ವಿಚಾರ ಯೋಚ್ನೆ ಮಾಡಿ ತಲೆ ಕೆಡಿಸ್ಕೊಂಡಿದ್ದಿರೊ ಅವಳೇ ನಾನು, ಲಟ್ಟಣಿಗೆ!"

"ತುಂಬಾ ಸಂತೋಷ. ನಿನ್ನ ಪುರಾಣ ಈಗ ನೀನೇ ಹೇಳ್ಬಿಡು"

"ಅದ್ಹ್ಯಾಗೆ ಸಾಧ್ಯ? ನನಗೆ ಜನ್ಮ ಕೊಟ್ಟ ದೇವತೇನ ನಿಮಗೆ ಪರಿಚಯ ಮಾಡಿ ಕೊಡ್ತೀನಿ. ಇಗೋ! ನನ್ನ ಜನ್ಮ ವೃತ್ತಾಂತಾನ ನನ್ನ ಜನ್ಮದಾತೆ ಬಾಯ್ನಲ್ಲೇ ಕೇಳಿ" (ಢಣ್)

"ನನ್ನ ಹೆಸರು ಪೂರ್ಣಿಮಾ. ಬಡ ಮನೆತನದಲ್ಲಿ ಹುಟ್ಟಿದವಳು. ಆದರೂ ಮುದ್ದಿನಿಂದ ಸೊಂಪಾಗಿ ಬೆಳೆದು ಹುಣ್ಣಿಮೆ ಚಂದ್ರನ ಹಾಗೆ ಮೈಕೈ ತುಂಬಿಕೊಂಡಿದ್ದೆ. ದುರದೃಷ್ಟ, ವರದಕ್ಷಿಣೆ ಕೊಡಲಾರದೆ, ನನ್ನ ತಾಯಿ ತಂದೆ ನನ್ನನ್ನು ಇಪ್ಪತ್ತು ಜನವಿದ್ದ ದೊಡ್ಡ ಕುಟುಂಬಕ್ಕೆ ಸೊಸೆಯನ್ನಾಗಿ ಮಾಡಿದರು. ನನ್ನ ಪಾಲಿನ ಕೆಲಸವೆಂದರೆ ಹೊತ್ತಿಗೆ ಅರವತ್ತರಿಂದ ಎಂಬತ್ತು ರೊಟ್ಟಿ ಬಡಿಯುವುದು. ಮುಂಜಾನೆಯಿಂದ ಸಂಜೆಯವರೆಗೆ ಇದೇ ಕೆಲಸ. ಒಂದು ತಿಂಗಳು ಕಳೆಯುವುದರೊಳಗೆ, ರಾತ್ರಿ ಮಲಗಿದಾಗಲೂ ನನ್ನ ಕೈಗಳು ರೊಟ್ಟಿ ಬಡಿಯುತ್ತ ಕೆಲಸ ಮುಂದುವರೆಸುತ್ತಿದ್ದವು. ನನ್ನ ಗಂಡನ ಬೆನ್ನು ನೀಲಿ ಗಟ್ಟಿತು.

ನನಗೆ ವಿವಾಹ ವಿಚ್ಛೇದನ ಕೊಡುವುದಾಗಿ ಬೆದರಿಕೆ ಹಾಕಿದರು. ನನಗೆ ದಿಕ್ಕೇ ತೋಚಲಿಲ್ಲ. ಆಗ ಮನೆಗೆ ಒಬ್ಬ ವೃದ್ಧ ಸನ್ಯಾಸಿಗಳ ಆಗಮನವಾಯಿತು. ಅವರ ಕಾಲಿಗೆ ಬಿದ್ದೆ. ನನ್ನ ಕಷ್ಟವನ್ನು ತೋಡಿಕೊಂಡೆ. ಕಣ್ಣೀರಿನಿಂದ ಅವರ ಪಾದ ತೊಳೆದೆ. ಕರವಸ್ತ್ರದಿಂದ ಪಾದ ಒರೆಸಿಕೊಂಡು ಹೇಳಿದರು -

"ಮಗಳೇ, ಇದು ನಿನ್ನ ಪೂರ್ವಜನ್ಮದ-ಪಾಪದ ಫಲ. ಪರಿಹಾರವೆಂದರೆ ಒಂದೇ ಮಾರ್ಗ. ಯಾವುದಾದರೂ ಒಂದು ಮಠಕ್ಕೆ ಹೋಗಿ ಭಕ್ತರ ಊಟವಾದ ನಂತರ ಆ ಎಂಜಲಿನ ಮೇಲೆ ಉರುಳು ಸೇವೆ ಮಾಡು. ಕೇವಲ ಹದಿನಾಲ್ಕು ದಿನಗಳು. ಪಾಪ ಪರಿಹಾರವಾಗಿ ಭಗವಂತ ನಿನಗೆ ಸರಿಯಾದ ದಾರಿ ತೋರುವನು"

"ಸನ್ಯಾಸಿಗಳ ಮಾತು ಕೇಳಿ ನನಗೆ ಬಹಳ ಸಂತೋಷವಾಯಿತು. ನನ್ನ ಗಂಡನ ಪರವಾನಗಿ ತೆಗೆದುಕೊಂಡು, ಮರುದಿನದಿಂದ ಸೇವೆ ಪ್ರಾರಂಭ ಮಾಡಿದೆ. ಮನೆಗೆಲಸ ಮುಗಿಸಿ, ಮಠಕ್ಕೆ ಹೋಗಿ ಅಲ್ಲಿ ಎಲ್ಲರ ಊಟ ಆಗುವ ತನಕ ಕಾದಿದ್ದು, ಒದ್ದೆ ಸೀರೆ ಬಿಗಿಯಾಗಿ ಮೈಗೆ ಸುತ್ತಿ, ಎರಡು ಕೈಗಳನ್ನು ಮೇಲೆತ್ತಿ ಜೋಡಿಸಿ, ಕಾಲುಗಳನ್ನೂ ನೀಳವಾಗಿ ಜೋಡಿಸಿ, ಭಕ್ತರು ಊಟ ಮಾಡಿದ ಎಂಜಲಿನ ಮೇಲೆ ಉರುಳು ಸೇವೆ ಮಾಡಿ, ಮನೆಗೆ ಹಿಂದಿರುಗುತ್ತಿದ್ದೆ. ಹದಿಮೂರು ದಿನಗಳು ಕಳೆದವು. ಹದಿನಾಲ್ಕನೇ ದಿನ ಎಲೆ ಸರಿಯಾಗಿ ಎತ್ತಿರಲಿಲ್ಲವೊ, ಬೆಲ್ಲ ಜಾಸ್ತಿಯಾಯಿತೆಂದು ಸಜ್ಜಿಗೆ ಉಂಡೆಗಳು ನೆಲದ ಮೇಲೆ ಬಿದ್ದಿದ್ದವು. ನಾನು ಧೃತಿಗೆಡಲಿಲ್ಲ. ದಿನದಂತೆ ಅಂದೂ ಎಂಜಲ ಮೇಲೆ ಉರುಳಿದೆ, ಎದ್ದು ನೋಡುತ್ತೇನೆ. ಆ ಉಂಡೆಗಳು ತೆಳ್ಳಗೆ ರೊಟ್ಟಿಯ ತರಹ ನೆಲಕ್ಕೆ ಕಚ್ಚಿವೆ. ಥಟ್ಟನೆ ಹೊಳೆಯಿತು. ಮನೆಗೆ ಹೋಗಿ ಒಂದು ಮರದ ತುಂಡನ್ನು ತೆಗೆದುಕೊಂಡು, ಚಾಕುವಿನಿಂದ ಎರಡು ಕಡೆಯೂ ಕೆತ್ತಿ ಕೈಯಲ್ಲಿ ಹಿಡಿಯುವಂತೆ ಮಾಡಿ, ಮಧ್ಯದ ಭಾಗವನ್ನು ಗುಂಡಗೆ ನುಣುಪಾಗಿರುವಂತೆ ಉಪ್ಪುಕಾಗದದಿಂದ ಉಜ್ಜಿದೆ, ನಾನು ಉರುಳುಸೇವೆ ಮಾಡುವಾಗ, ದೂರದಿಂದ ನೋಡಿದವರಿಗೆ ಇದೇ ಆಕಾರವಾಗಿ ಕಾಣುತ್ತಿದ್ದೆನೇನೊ! ನಂತರ ಮಣೆಯ ಮೇಲೆ ಹಿಟ್ಟಿನ ಮುದ್ದೆಯಿಟ್ಟು, ನಾನು ಸೃಷ್ಟಿಸಿದ ಮರದ ಕೊರಡಿನಿಂದ ಅದನ್ನು ಒತ್ತಿ ಉರುಳಿಸಿದಾಗ ಅಬ್ಬ! ಅದೆಷ್ಟು ಸುಲಭವಾಗಿ ತೆಳ್ಳನೆಯ ರೊಟ್ಟಿಯಾಯಿತು. ಇದೇ ಲಟ್ಟಣಿಗೆಯ ಜನ್ಮ ರಹಸ್ಯ. ಅಂದಿನಿಂದ ಇಂದಿನವರೆಗೆ ಪ್ರತಿಯೊಬ್ಬ ಗೃಹಿಣಿಗೂ ಬಹಳ ಬೇಕಾದ ವಸ್ತು ಲಟ್ಟಣಿಗೆ!"

"ಹೌದಾ?" ಎಂದು ನಾನು ಬಾಯಿ ಬಿಡೋದಕ್ಕೆ ಮೊದಲೇ ಕಣ್ಣುಬಿಟ್ಟಿರಬೇಕು.

**ಲೇಖಕರ ಪರಿಚಯ**

ಕನ್ನಡ ಹಾಸ್ಯಸಾಹಿತ್ಯದಲ್ಲಿ ಶ್ರೀಮತಿ ಯಮುನಾಮೂರ್ತಿಯವರ ಹೆಸರು ಪ್ರಸಿದ್ಧವಾದುದು. ಇವರು ೧೯೩೩ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಬೆಂಗಳೂರು, ಧಾರವಾಡ ಆಕಾಶವಾಣಿಯಲ್ಲಿ ಕಲಾವಿದೆ ಹಾಗೂ ನಾಟಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಇವರು ಬೆಂಗಳೂರಿನ ಆಕಾಶವಾಣಿಯಲ್ಲಿ ಸಹಾಯಕ ಕೇಂದ್ರ ನಿರ್ದೇಶಕರಾಗಿ ನಿವೃತ್ತರಾದರು. ಇವರು ನಂಜು ನೇಹ ಎಂಬ ಕಾದಂಬರಿಯನ್ನೂ, ನನ್ನನ್ನು ಮುಟ್ಟಬೇಡ, ಗುಳಿಗೆ ಮುಂತಾದ ನಾಟಕಗಳನ್ನೂ, ನಾನು ಯಾರು, ಜೀವನ ನಾಟಕದ ಸೈಡ್‌ವಿಂಗ್ಸ್‌ನಿಂದ ಮೊದಲಾದ ಲಲಿತಪ್ರಬಂಧಗಳನ್ನು ರಚಿಸಿ ಖ್ಯಾತರಾಗಿದ್ದಾರೆ. ಇವರಿಗೆ ೧೯೯೧ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಅಖಿಲಭಾರತ ಬಾನುಲಿ ನಾಟಕ ಸ್ಪರ್ಧೆಯ ನಿರ್ದೇಶನಕ್ಕಾಗಿ ಆರು ಬಾರಿ ರಾಷ್ಟ್ರಮಟ್ಟದ ಪ್ರಶಸ್ತಿ ಲಭಿಸಿವೆ.

ಪ್ರಸ್ತುತ ಪ್ರಬಂಧವನ್ನು 'ಪ್ರಸಾರ ಹಾಸ್ಯ' ಕೃತಿಯಿಂದ ಆರಿಸಲಾಗಿದೆ.

**ಆಶಯ**

*ಶಬ್ದಾರ್ಥಗಳು ಒಂದು ನಾಣ್ಯದ ಎರಡು ಮುಖಗಳು. ಪ್ರತಿಶಬ್ದವೂ ಅರ್ಥವಿಲ್ಲದಿಲ್ಲ. ಸೂಕ್ಷ್ಮವಾಗಿ ಅವಲೋಕಿಸಿದರೆ ವಿಶೇಷವಾದ ಅರ್ಥಗಳೂ ಹೊಮ್ಮುತ್ತವೆ. ಕೆಲವು ಹೆಸರುಗಳ ಜನ್ಮರಹಸ್ಯ ಎಷ್ಟು ವಿಚಿತ್ರ! ಸಾಮಾನ್ಯ ವಸ್ತುವೂ ಸಾಹಿತ್ಯಕ್ಕೆ ಆಕರವಾದುದು ಇಲ್ಲಿ ಕಂಡುಬರುತ್ತದೆ, ಅದೂ ರಸಭರಿತವಾಗಿ. 'ಲಟ್ಟಣಗೆ' ಅಡುಗೆಯ ಅತ್ಯವಶ್ಯ ಉಪಕರಣ. ಅದರ ಆಕಾರ, ಉಪಯೋಗ, ಬಳಕೆ, ಹೆಸರು, ಲೇಖಕಿಗೆ ಬರೆಯಲು ಸ್ಫೂರ್ತಿ ನೀಡಿದೆ.*

**ಶಬ್ದಾರ್ಥ :**

ಬಾಜು - ಪಕ್ಕ, ಬದಿ; ಸಪೂರ - ತೆಳ್ಳಗೆ; ಮೂಲ - ಹುಟ್ಟು; ಎರವಲು - ಸಾಲ; ಜಿಗುಟು - ಅಂಟು; ಜನ್ಮರಹಸ್ಯ - ಹುಟ್ಟಿನ ಗುಟ್ಟು; ಗಡದ್ದಾಗಿ - ಚೆನ್ನಾಗಿ, ಹೊಟ್ಟೆತುಂಬಾ; ಸಿದ್ಧಾಂತ - ನಿರ್ಣಯ, ಸ್ಥಾಪಿತವಾದ ವಿಷಯ; ಹಾಯಾಗಿ - ಹಿತವಾಗಿ; ಜೊಂಪು - ಮಂಪರು, ತೂಕಡಿಕೆ; ಕೀರಲು ಧ್ವನಿ - ಕರ್ಕಶಕಂಠ; ಪರವಾನಗಿ - ಅನುಮತಿ; ನೀಳ - ಉದ್ದ; ಧೃತಿಗೆಡು - ಧೈರ್ಯಗುಂದು; ನುಣುಪು - ನಯ; ಉಜ್ಜು - ತಿಕ್ಕು; ಉಪ್ಪುಕಾಗದ - ಉಸುಕು ಕಾಗದ; ಸ್ಯಾಂಡ್ ಪೇಪರ್.

**ಟಿಪ್ಪಣಿ :**

ಸೀಕರಣೆ - ಮಾವಿನ ಹಣ್ಣು ಮುಂತಾದುವುಗಳಿಂದ ಮಾಡುವ ಒಂದು ಬಗೆಯ ದ್ರವರೂಪದ ಸಿಹಿ ಆಹಾರ.

## ಅಭ್ಯಾಸ

**ಪ್ರಶ್ನೆಗಳು :**

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. 'ದಪ್ಪ' ಅನ್ನೋದಕ್ಕೆ ಧಾರವಾಡದ ಕಡೆ ಏನೆಂದು ಕರೆಯುತ್ತಾರೆ?

೨. ಯಾರ ವಿಚಾರಸರಣಿ ಲೇಖಕಿಯ ಮನಸ್ಸಿನಲ್ಲಿ ಗೊಂದಲ ಎಬ್ಬಿಸಿತು?

೩. ಹಿಟ್ಟಿನ ಮುದ್ದೆಯನ್ನು ಚಪಾತಿ ಆಕಾರಕ್ಕೆ ತರುವ ಕ್ರಿಯೆಗೆ ಏನನ್ನುತ್ತಾರೆ?

೪. ಲಠ್ಠಣಿಗೆಯಿಂದ ಲಟ್ಟಿಸುವಾಗ ಕೇಳಿಸುವ ಶಬ್ದವೇನು?

**ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. "ಲಠ್ಠಣಿಗೆ ಅಂತ ಯಾಕ ಕರೀತಾರೆ" ಎಂದು ಕೇಳಿದ ಪ್ರಶ್ನೆಗೆ ಅಜ್ಜಿ ಹೇಳಿದ ಉತ್ತರವೇನು?

೨. ಲಠ್ಠಣಿಗೆಯ ಜನ್ಮರಹಸ್ಯದ ಬಗ್ಗೆ ವಿಚಾರ ಮಾಡಿ ಬಳಿಕ ಸಮಾಧಾನ ಪಟ್ಟುಕೊಂಡದ್ದು ಹೇಗೆ?

೩. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದ್ದು ಏಕೆ?

**ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಲಾರಿ ಕೆಳಗೆ ಬಿದ್ದ ನಾಣ್ಯವನ್ನು 'ಲೊಟ್ಟ' ತೆಗೆದದ್ದು ಹೇಗೆ? ವಿವರಿಸಿರಿ.

೨. ಉರುಳುಸೇವೆಯನ್ನು ಲೇಖಕಿ ಹೇಗೆ ಮಾಡಿದರು?

೩. ಲಠ್ಠಣಿಗೆಯ ಜನ್ಮರಹಸ್ಯ ಏನು?

**ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. "ಅಯ್ಯ ನಮ್ಮವ್ವ, ಏನ್ ಲಠ್ಠ ಇದಾಳ ಈಕೆ!"

೨. "ನಿನ್ನ ಪುರಾಣ ಈಗ ನೀನೇ ಹೇಳ್ಬಿಡು"

೩. "ಇದು ನಿನ್ನ ಪೂರ್ವ ಜನ್ಮದ ಪಾಪದ ಫಲ."

**ಉ. ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.**

೧. ಪುರಾಣ, ಹೂರಣ, ಪ್ರವಚನ, ಪುಣ್ಯಕಥೆ

೨. ಕರೀತಾರ, ಹ್ಯಾಂಗ, ಮನ್ಯಾಗಿನ, ಹೊಗಳುತ್ತಾ

೩. ಸಾಧ್ಯ, ಅಸಾಧ್ಯ, ದುಸ್ಸಾಧ್ಯ, ಸಾನ್ನಿಧ್ಯ

**ಊ. ಕೆಳಗಿನ ಪದಗಳ ವಿರುದ್ಧಾರ್ಥಕ ಪದ ಬರೆಯಿರಿ.**

ಸಮಾನ, ಅರ್ಥ, ಸಾಧ್ಯ, ಆಗಮನ

## ಭಾಷಾಭ್ಯಾಸ

ಅ. ಕೂಸು ಕುನ್ನಿ - ಇಂತಹ ಇನ್ನೂ ಐದು ಪದಗಳನ್ನು ಬರೆಯಿರಿ.

ಆ. ಈ ಕೆಳಗಿನ ಪದಗಳ ನಾನಾರ್ಥ ಬರೆಯಿರಿ.

| ಮಾದರಿ : ಹೊಳೆ - ನದಿ, ಮಿಂಚುವುದು |
|---|

ಕರಿ, ತುಂಬಿ, ಉರುಳು

ಇ. ಈ ಕೆಳಗಿನ ಕ್ರಿಯಾಪದದ ನಿಷೇಧ ರೂಪ ಬರೆಯಿರಿ.

| ಮಾದರಿ: ಬಂತು - ಬಾರದು; ಬಿತ್ತು - ಬೀಳದು |
|---|

ತಿನ್ನು .......... ಕೇಳು ..........

ಲಟ್ಟಿಸು .......... ಮಾಡು ..........

ಈ. ಕೆಳಗಿನ ವಾಕ್ಯಗಳಿಗೆ ಲೇಖನ ಚಿಹ್ನೆ ಹಾಕಿರಿ.

ಅದ್ಯಾಕ್ಕಗೆ ಸಾಧ್ಯ ನನಗೆ ಜನ್ಮ ಕೊಟ್ಟ ದೇವತೇನ ನಿಮಗೆ ಪರಿಚಯ ಮಾಡಿ ಕೊಡ್ತೀನಿ ಇಗೋ ನನ್ನ ಜನ್ಮ ವೃತ್ತಾಂತಾನ ನನ್ನ ಜನ್ಮದಾತೆ ಬಾಯ್ನಲ್ಲೇ ಕೇಳಿ

ಉ. ಕೆಳಗಿನ ಪದಗಳಿಗೆ ತಕ್ಕ ಪ್ರತ್ಯಯಗಳನ್ನು ಬಿಟ್ಟ ಸ್ಥಳದಲ್ಲಿ ಬರೆದು ಓದಿರಿ.

ಶಿಷ್ಯ ಗುರು ...... ವಂದಿಸಿದನು. ಗುರುಗಳು ಅವ... ಆಶೀರ್ವದಿಸಿದರು. ಅವರಿಬ್ಬರೂ ಅಲ್ಲಿ ...... ಮುಂದೆ ಸಾಗಿದರು. ನಡೆದೂ ನಡೆದೂ ಒಂದು ಅರಣ್ಯ ....... ತಲುಪಿದರು. ಅಲ್ಲಿನ ಪ್ರಶಾಂತ ವಾತಾವರಣ ......ಅವರ ಮನ ........ ಆಕರ್ಷಿಸಿತು. ಬಳಲಿದ ಗುರು ಶಿಷ್ಯ ...... ಉಪಚರಿಸಲು ಯಾರೂ ಇರಲಿಲ್ಲ. ಅಲ್ಲಿ ......... ಒಂದು ಮಂಗ ಬಂದಿತು. ಮರದ ಗೆಲ್ಲನ್ನು ಅಲುಗಿಸಿ ಹಣ್ಣು......... ಉದುರಿಸಿತು.

ಊ. ಕೆಳಗಿನ ನುಡಿಗಟ್ಟುಗಳ ಅರ್ಥವನ್ನು ಬರೆಯಿರಿ.

| ಮಾದರಿ: ಕಿವಿಗೊಡು - ಗಮನವಿಟ್ಟು ಆಲಿಸು |
|---|

ನೀರುಕುಡಿದಂತೆ - ಕಬ್ಬಿಣದ ಕಡಲೆ -

ಕಣ್ಣುಕೆಂಪಾಗು - ಬೆನ್ನಟ್ಟು -

ಹುಬ್ಬೇರಿಸು -

## ಚಟುವಟಿಕೆ

೧. ಈ ಪ್ರಬಂಧವನ್ನು ನಾಟಕ ರೂಪಕ್ಕೆ ಬದಲಾಯಿಸಿ ನಾಟಕ ಆಡಿರಿ.

೨. ಲಠ್ಠಣಿಗೆಯಂತೆ ಇನ್ನೂ ಕೆಲವು ಪದಗಳ ಹುಟ್ಟು, ಮೂಲದ ಬಗ್ಗೆ ಯೋಚಿಸಿ ಒಂದು ವಿಷಯದ ಕುರಿತು ಪ್ರಬಂಧ ಬರೆಯಿರಿ.

# ೪. ಏರುವ ಬಾರ ಕೇದಾರ

ಲೀಲಾವತಿ ಎಸ್. ರಾವ್

'ದೇಶ ಸುತ್ತಿ ನೋಡು, ಕೋಶ ಓದಿ ನೋಡು' ಎಂಬುದು ಜನಪ್ರಿಯವಾದ ನಾಣ್ನುಡಿ. ಹಾಗೆ ಮಾಡುವುದರಿಂದ ಮನುಷ್ಯನ ಅನುಭವ ವಿಸ್ತಾರವಾಗುತ್ತದೆ. ನಾನಾ ಬಗೆಯ ಜನರ ಜೀವನ, ರೀತಿ-ನೀತಿ, ಸಂಸ್ಕೃತಿಗಳ ಪರಿಚಯವಾಗುತ್ತದೆ. ಮನುಷ್ಯ ತಾನು ನೋಡಿದ ಸ್ಥಳಗಳ ಪರಿಚಯವನ್ನು, ಪಡೆದ ಅನುಭವವನ್ನು ಸ್ವಾರಸ್ಯಕರವಾಗಿ ದಾಖಲು ಮಾಡುವುದೇ ಪ್ರವಾಸ ಕಥನ. 'ಏರುವ ಬಾರ ಕೇದಾರ' ಅಂತಹ ಒಂದು ಪ್ರವಾಸ ಕಥನ.

ಭಾರತದಲ್ಲಿ ಹುಟ್ಟಿದ ಮೇಲೆ ಒಮ್ಮೆ ಹಿಮಾಲಯಕ್ಕೆ ಹೋಗಬೇಕೆಂಬ ಆಸೆ ಸಹಜ. ನನಗಂತು ಚಿಕ್ಕಂದಿನಿಂದಲೇ ಸದಾ ಹಿಮಾಲಯದ ಕನಸು. ಯಾವ ಜನ್ಮದ ಪುಣ್ಯವೋ ಬಂಧುಗಳೊಂದಿಗೆ ಕೇದಾರಕ್ಕೆ ಹೋಗುವ ಅವಕಾಶ ಒದಗಿತು.

ದೆಹಲಿಯಿಂದ ಎಂಟು ದಿನಗಳ ಕೇದಾರ ಯಾತ್ರೆ. ಹರಿದ್ವಾರ, ಹೃಷಿಕೇಶಗಳನ್ನು ನೋಡಿಕೊಂಡು ಸೋನಪ್ರಯಾಗ ಎಂಬ ಊರಿಗೆ ಹೋದೆವು. ಮಂದಾಕಿನೀ ಮತ್ತು ಸೋನಗಂಗಾ ಎಂಬ ನದಿಗಳ ಸಂಗಮದಲ್ಲಿ ಈ ಪುಟ್ಟ ಊರಿದೆ. ಇಲ್ಲಿಂದ ಗೌರೀಕುಂಡ ಎಂಬ ಹಳ್ಳಿಗೆ ಹೋಗಿ ಅಲ್ಲಿಂಧ ಕೇದಾರ ಪರ್ವತವನ್ನು ಹತ್ತಬೇಕು.

ಗೌರೀಕುಂಡಕ್ಕೆ 'ಗೋಕುಂಡ' ಎಂಬ ಇನ್ನೊಂದು ಹೆಸರು ಇದೆ. ಪರ್ವತದ ತಪ್ಪಲಲ್ಲಿ 'ಗೋಮುಖ'ದಿಂದ ಸತತವಾಗಿ ಹಬೆಯಾಡುವ ಬಿಸಿನೀರು ಹರಿದು ಬಂದು ಕುಂಡದಲ್ಲಿ ಬೀಳುತ್ತಿರುತ್ತದೆ. ಗಡಗಡ ನಡುಗಿಸುವ ಚಳಿಯಲ್ಲಿ ಇಂಥ ಬಿಸಿನೀರಿನ ಬುಗ್ಗೆ ಇರುವುದು ಪ್ರಕೃತಿಯ ವೈಚಿತ್ರ್ಯವೇ ಸರಿ! ಈ ಸ್ಥಳದಲ್ಲಿಯೇ ಪಾರ್ವತಿ ಶಿವನನ್ನು ಪತಿಯಾಗಿ ಪಡೆಯಲು ತಪಸ್ಸು ಮಾಡಿದ್ದಳಂತೆ.

ಗೌರೀಕುಂಡದಿಂದ ಕೇದಾರ ಹದಿನೈದು ಕಿಲೋಮೀಟರ್‌ಗಳ ದಾರಿ. ನಡೆದು ಹೋಗಬಹುದು ಇಲ್ಲವೆ ಕುದುರೆ ಮೇಲೆ ಅಥವಾ ಕಂಡಿ ಮತ್ತು ದಂಡಿ ಎಂಬುದರಲ್ಲಿ ಹೋಗಬಹುದು. ದಂಡಿ ಎಂಬುದು ಕುರ್ಚಿಯ ಹಾಗೆ ಇದ್ದು ಅದಕ್ಕೆ ಎರಡು ಕಡೆಗಳಲ್ಲಿ ಉದ್ದವಾದ ದಂಡಿಗೆ ಇರುತ್ತದೆ. ನಾಲ್ಕು ಜನ ಹೊತ್ತುಕೊಂಡು ನಡೆಯುತ್ತಾರೆ. ಕಂಡಿ ಎಂಬುದು ಬುಟ್ಟಿಯ ಹಾಗೆ ಇರುತ್ತದೆ. ಚಾ ಸೊಪ್ಪು ಕೀಳುವ ಹೆಂಗಸರು ಬೆನ್ನಿಗೆ ಕಟ್ಟಿಕೊಂಡಿರುತ್ತಾರಲ್ಲ ಅಂತಹುದು. ಅದರೊಳಗೆ ಕುಳಿತುಕೊಳ್ಳಬೇಕು. ಎದೆಯ ಮಟ್ಟದಲ್ಲಿ ಬುಟ್ಟಿಯ ಮೇಲ್ಭಾಗದ ಎರಡು ಕಡೆ ಹಗ್ಗ ಇರುತ್ತದೆ. ಕೂಲಿಯವರು ಈ

ಬುಟ್ಟಿಯನ್ನು ಎತ್ತಿ ಬೆನ್ನಿನ ಮೇಲೆ ಏರಿಸಿಕೊಂಡು, ಹೊತ್ತುಕೊಂಡು ಹೋಗುತ್ತಾರೆ. ನಮ್ಮ ಗುಂಪಿನ ಇಬ್ಬರು ಇದರಲ್ಲಿ, ಇಬ್ಬರು ಕುದುರೆ ಮೇಲೆ ಏರಿ ಹೋದರು. ಕೇದಾರ ಪರ್ವತದ ನಡುವೆ ಏಳು ಸಾವಿರ ಅಡಿಗಳ ಎತ್ತರದ ಗೌರೀ ಕುಂಡದಲ್ಲಿ ನಿಂತು ಸುತ್ತಲಿನ ಹಿಮಾಲಯವನ್ನು ಕಂಡು ಬೆರಗಾಗಿದ್ದ ನನಗೆ ಕಾಲ್ನಡಿಗೆಯಲ್ಲೇ ಏರಿ ಮರಿತೇನ್‌ಸಿಂಗ್ ಆಗುವ ಆಸೆ!

ಕೇದಾರದ ಏರುವೆಯ ದಾರಿ ಮಂದಾಕಿನೀ ನದಿಯ ಅಂಚಿನಲ್ಲೇ ಸಾಗುತ್ತದೆ. ಐದಾರು ಅಡಿ ಅಗಲದ ಕಿರುದಾರಿ. ಒಂದು ಕಡೆ ತಲೆ ಎತ್ತಿ ನಿಂತ ಪರ್ವತ, ಮತ್ತೊಂದು ಕಡೆ ಪ್ರಪಾತ! ಅದರ ಆಚೆಗೆ ಬೃಹದಾಕಾರದ ಹಿಮ ಆವರಿಸಿದ ಬಿಳಿಯ ಬೆಟ್ಟ. ಅಲ್ಲಲ್ಲಿ ಕಣ್‌ತಣಿಸುವ ಹಸುರು. ಹಸುರಿನಲ್ಲಿ ಎಷ್ಟು ಬಗೆ ಎಂಬುದನ್ನು ಅಲ್ಲಿ ನೋಡಬೇಕು. ಅಲ್ಲಲ್ಲಿ ಹಿಮಕರಗಿ ಹರಿದು ಬರುವ ಬಿಳಿಯ ಧಾರೆ. ಬಿಸಿಲಿಗೆ ಹೊಳೆಯುವ ಬೆಟ್ಟ. ಕ್ಷಣಕ್ಕೊಂದು ರೂಪ, ಕ್ಷಣಕ್ಕೊಂದು ವಿನ್ಯಾಸ. ಎಂತಹ ಅದ್ಭುತ ಕಲಾಕಾರನಪ್ಪ ಈ ಪ್ರಕೃತಿ ಎಂಬ ವಿಸ್ಮಯ!

ಹಾಗೂ, ಹೀಗೂ ಏಳು ಕಿಲೋಮೀಟರ್ ನಡೆದು ರಾಮಬಾಡ ಎಂಬಲ್ಲಿಗೆ ಬಂದೆವು. ಮುಂದೆ ನಡೆಯುವುದು ಸಾಧ್ಯವಿಲ್ಲ ಎನಿಸಿತು. ಆ ನಡುದಾರಿಯಲ್ಲಿ ಕುದುರೆ ಸಿಗಬೇಕಲ್ಲ? ಏನೋ ನಮ್ಮ ಪುಣ್ಯ. ಕುದುರೆ ಸಿಕ್ಕಿತು. ಜೀವನದಲ್ಲೇ ಮೊದಲ ಕುದುರೆ ಸವಾರಿ! ಹೇಗೆ ಕೂತರೂ ಹಿಂಸೆ. ಕುದುರೆ ನಿಧಾನವಾಗಿ ಹೆಜ್ಜೆ ಹಾಕುತ್ತಿತ್ತು. ಕುದುರೆಯವನು ಹಗ್ಗ ಹಿಡಿದು ಪಕ್ಕದಲ್ಲೇ ಸಾಗುತ್ತಿದ್ದ. ಮೇಲಕ್ಕೆ ಹತ್ತುವಾಗ ಮುಂದೆ ಬಾಗಬೇಕೆಂದೂ, ಕೆಳಗೆ ಇಳಿಯುವಾಗ ಹಿಂದಕ್ಕೆ ಬಾಗಬೇಕೆಂದೂ, ದೇಹ ಸಡಿಲ ಬಿಟ್ಟು ಕೂರಬೇಕೆಂದೂ ಸಲಹೆ ಕೊಟ್ಟ. ಅಂತು ಹಿಂದೆ ಮುಂದೆ ಬಾಗುತ್ತಾ, ಕುದುರೆ ದಾರಿಯ ಅಂಚಿಗೆ ಬಂದಾಗ ಕೆಳಗಿನ ಪ್ರಪಾತ ನೋಡಿ ಹೆದರುತ್ತಾ, ಜೀವ ಕೈಯಲ್ಲಿ ಹಿಡಿದುಕೊಂಡು ಸಾಗುತ್ತಿರುವಾಗಲೇ ಎದುರಿನಿಂದ ಬಂದ ಕುದುರೆಯ ಮೇಲೆ ಕುಳಿತವರು ಕೆಳಗೆ ಬಿದ್ದರು. ಹೋ ಎಂದು ಬೊಬ್ಬೆ. ಕುದುರೆಯವನಿಗೆ ಬೈಗುಳ. ಅದೃಷ್ಟವಶಾತ್ ಹೆಚ್ಚೇನು ಪೆಟ್ಟಾಗಲಿಲ್ಲ. ದಾರಿ ಕೆಲವೆಡೆ ಎಷ್ಟು ಕಿರಿದೆಂದರೆ ಮೇಲಿನಿಂದ ಬರುವವರು, ಕೆಳಗಿನಿಂದ ಏರುವವರು, ಕುದುರೆಗಳು, ದಂಡಿ, ಕಂಡಿಯವರು ಇವರೆಲ್ಲರ ಮಧ್ಯೆ ನುಸುಳಿ ಹೋಗುವುದು ನಿಜವಾಗಿ ಹರಸಾಹಸವೇ ಸರಿ! ಸಾಧುಸಂತರು, ಹೆಂಗಸರು, ಗಂಡಸರು, ಮಕ್ಕಳು, ಮುದುಕರು, ಯುವಕರು, ವಿದೇಶಿಯರು - ಎಷ್ಟು ಭಾಷೆ! ಎಷ್ಟು ವೇಷ! ಮಿನಿ ವಿಶ್ವವನ್ನೇ ಕಂಡಂತೆ ಆಗುತ್ತದೆ.

ರಾಮಬಾಡದಿಂದ ಸುಮಾರು ಒಂದು ಗಂಟೆ ಕುದುರೆ ಪ್ರಯಾಣ ಮಾಡಿದ ಮೇಲೆ ಗರುಡ ಚಟ್ಟಿ ಎಂಬ ಸಣ್ಣಹಳ್ಳಿ ಸಿಗುತ್ತದೆ. ಇಲ್ಲಿಂದ ಕೇದಾರಕ್ಕೆ ಕೇವಲ ಮೂರು ಕಿಲೋಮೀಟರ್ ದೂರ. ಈ ಕೇದಾರ ಪರ್ವತ ಶ್ರೇಣಿಗಳನ್ನು ರುದ್ರ ಹಿಮಾಲಯ ಎನ್ನುತ್ತಾರೆ. ಸುಮೇರು ಪರ್ವತ ಅಥವಾ ಪಂಚಪರ್ವತ ಎಂದೂ ಇದನ್ನು ಕರೆಯುತ್ತಾರೆ. ಇದರಲ್ಲಿ ಐದು ಶಿಖರಗಳಿವೆ. ರುದ್ರ ಹಿಮಾಲಯ, ಬ್ರಹ್ಮಪುರಿ, ವಿಷ್ಣುಪುರಿ, ಉದ್ಗರಿಕಾಂತ ಮತ್ತು ಸ್ವರ್ಗಾರೋಹಿಣಿ. ಸ್ವರ್ಗಾರೋಹಿಣಿ ಎಂಬ ಶಿಖರದ ಮೂಲಕವೇ ಧರ್ಮರಾಯ, ಸ್ವರ್ಗಕ್ಕೆ ಹೋದ ಎಂದು ಹೇಳುತ್ತಾರೆ.

ಇದ್ದಕ್ಕಿದ್ದಂತೆ ಕುದುರೆಯವ 'ಬೆಹನ್‌ಜೀ, ವೋದೇಖೋ, ಕೇದಾರ್‌ಜೀ ಕಾ ಮಂದಿರ್' ಎಂದು ಕೈ ತೋರಿಸಿದ. ದೂರದಲ್ಲಿ ಹೊಳೆಯುತ್ತಿದ್ದ ಕಳಸ ಕಣ್ಣಿಗೆ ಬಿತ್ತು. ಮರುದಿನ ಬೆಳಿಗ್ಗೆ ಬೇಗ ಬೇಗ ಸಿದ್ಧರಾಗಿ ಕೇದಾರನಾಥನ ದರ್ಶನಕ್ಕೆ ಹೊರಟೆವು. ಸುಮೇರು ಪರ್ವತದ ಮಡಿಲಿನಲ್ಲಿ ದೇವಾಲಯ ಬೆಚ್ಚಗೆ ಕುಳಿತಿದೆ. ದೇವಾಲಯದ ಪ್ರಾಕಾರಕ್ಕೆ ಏರುವ ಮೆಟ್ಟಿಲುಗಳ ಬಳಿಯೇ ಬೂಟ್ಸುಗಳನ್ನು ಕಳಚಿಡಬೇಕಾಯಿತು. ಮೆಟ್ಟಿಲು ಹತ್ತಿ ಮೇಲೆ ಬಂದರೆ ದೇವಾಲಯದ ಅಂಗಳದಲ್ಲಿ ಆಗಲೇ ದೊಡ್ಡ ಕ್ಯೂ. ಉಷ್ಣದೇಶದಿಂದ ಬಂದ ನಮ್ಮಂತ ಬಡಪಾಯಿಗಳ ಮೇಲೆ ತನ್ನ ಪೌರುಷ ತೋರಿಸಲು ಚಳಿರಾಯ ನಿರ್ಧರಿಸಿದಂತಿತ್ತು. ಉಣ್ಣೆ ಬಟ್ಟೆಯನ್ನು ಧರಿಸಿದ್ದ ನಾವು ಮೇಲೆ ಕಂಬಳಿ ಹೊದ್ದು, ಗಡ ಗಡ ನಡುಗುತ್ತಾ ನಿಂತೆವು. ಕ್ಯೂ ದೇಗುಲದ ಮುಂಭಾಗಕ್ಕೆ ಬರುವಷ್ಟರಲ್ಲಿ ಸೂರ್ಯದೇವನಿಗೆ ನಮ್ಮ ಮೇಲೆ ಕರುಣೆ ಬಂತು. ಸುಮೇರು ಪರ್ವತ ಬಂಗಾರದ ಬೆಟ್ಟವಾಗಿ ಥಳಥಳಿಸಿತು.

ಕೇದಾರ ದೇವಾಲಯ ಬಹು ಸುಂದರವಾಗಿದೆ. ಪುರಾಣಗಳ ಪ್ರಕಾರ ವೇದವ್ಯಾಸ ಮಹರ್ಷಿಗಳ ಉಪದೇಶದಂತೆ ಪಾಂಡವರು ಇಲ್ಲಿ ತಪಸ್ಸು ಮಾಡಿ ಈ ದೇವಸ್ಥಾನವನ್ನು ಕಟ್ಟಿದರು. ಹಾಗಾಗಿ ದೇವಸ್ಥಾನದ ಒಳಗೋಡೆಗಳಲ್ಲಿ ಪಾಂಡವರ ವಿಗ್ರಹಗಳನ್ನು ಅಳವಡಿಸಿದ್ದಾರೆ. ಇನ್ನು ಕೆಲವರ ಪ್ರಕಾರ ಆಚಾರ್ಯ ಶಂಕರರು ಈ ದೇಗುಲವನ್ನು ಕಟ್ಟಿಸಿದರು. ಇದರ ವಾಸ್ತುವನ್ನು ನೋಡಿ ೧೫-೧೬ನೇ ಶತಮಾನದಲ್ಲಿ ಕಟ್ಟಿರಬಹುದು ಎನ್ನುತ್ತಾರೆ ಇತಿಹಾಸಕಾರರು. ಯಾರಾದರೂ ಕಟ್ಟಿರಲಿ. ತುಂಬಾ ಸುಂದರವಾಗಿ ಕಟ್ಟಿದ್ದಾರೆ. ಗರ್ಭಗುಡಿಯ ಒಳಗೆ ಕೇದಾರೇಶ್ವರ. ಅದು ಲಿಂಗವೂ ಅಲ್ಲ, ಮೂರ್ತಿಯೂ ಅಲ್ಲ, ಬರೇ ಒಂದು ಒರಟು ಕಲ್ಲಿನ ಬಂಡೆ. ಪರ್ವತದ ಶಿಖರಾಕೃತಿಯ ಮೇಲೆ ದೇವಾಲಯ ನಿರ್ಮಿಸಿದಂತೆ ಭಾಸವಾಗುತ್ತದೆ. ಪ್ರಾಯಶಃ ಹೊರಗಿನ ಪರ್ವತದ ಸಾಂಕೇತಿಕ ಪ್ರಕೃತಿ ಪೂಜೆ ಒಳಗೆ ನಡೆಯುತ್ತದೆ. ಜಾತಿ, ಮತ, ಲಿಂಗ ಯಾವ ಭೇದವೂ ಇಲ್ಲದೆ

ಪ್ರತಿಯೊಬ್ಬರು ತಾವೇ ಮುಟ್ಟಿ ಪೂಜಿಸುವ ಅಪೂರ್ವ ಅವಕಾಶ ಇಲ್ಲಿದೆ. ಆ ಎತ್ತರದಲ್ಲಾದರೂ ಮನುಷ್ಯ ಮೇಲು ಕೀಳು ಮರೆತಿದ್ದಾನೆ ಎಂಬುದು ಸಂತೋಷದ ಸಂಗತಿ.

ಕೇದಾರನಾಥನ ಬಗೆಗೂ ಪುರಾಣದಲ್ಲಿ ವಿಚಿತ್ರವಾದ ಕಥೆಯೊಂದಿದೆ. ಒಮ್ಮೆ ಶಿವನು ಗೂಳಿಯ ರೂಪವನ್ನು ಧರಿಸಿ ಪರ್ವತ ಪ್ರದೇಶದಲ್ಲಿ ಅಲೆಯುತ್ತಿದ್ದನು. ಅಲ್ಲಿದ್ದ ಪಾಂಡವರು ಇದನ್ನು ತಿಳಿದು ಆ ಗೂಳಿಯನ್ನು ಹಿಡಿಯಲು ಪ್ರಯತ್ನಿಸಿದರು. ತಪ್ಪಿಸಿಕೊಂಡು ಓಡುತ್ತಿದ್ದ ಗೂಳಿ ಭೂಮಿಯೊಳಗೆ ನುಗ್ಗಲು ಪ್ರಯತ್ನಿಸಿತು. ಆಗ ಭೀಮನು ಅದರ ಹಿಂಭಾಗವನ್ನು (ಪೃಷ್ಠವನ್ನು) ತಬ್ಬಿಕೊಂಡನು. ಅದೇ ಶಿಲಾರೂಪದಲ್ಲಿ ಉಳಿದುಕೊಂಡು ಕೇದಾರೇಶ್ವರ ಆಗಿದೆ. ಗೂಳಿಯ ಇನ್ನುಳಿದ ಭಾಗಗಳಾದ ಕಾಲುಗಳು - ತುಂಗನಾಥ, ಮುಖ - ರುದ್ರನಾಥ, ಹೊಟ್ಟೆ - ಮಹೇಶ್ವರ, ಶಿರ - ಕಪಾಲೇಶ್ವರ - ಹೀಗೆ ಐದು ಕಡೆಗಳಲ್ಲಿ ಶಿವ ಗೋಚರನಾದ. ಇವುಗಳೇ ಪಂಚ ಕೇದಾರಗಳೆಂದು ಪ್ರಸಿದ್ಧವಾಗಿವೆ.

ಮಂದಿರದ ಹೊರಗೆ ಈಶಾನ್ಯ ಕುಂಡ, ಅಮೃತಕುಂಡ, ಹಂಸಕುಂಡ, ರೇತಸ ಕುಂಡ ಎಂಬ ತೀರ್ಥಗಳಿವೆ. ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿ ಶಂಕರಾಚಾರ್ಯರ ಸಮಾಧಿ ಇದೆ. ಸಣ್ಣ ಮಂದಿರದ ಒಳಗೆ ಶಂಕರರ ಮೂರ್ತಿ ಇದೆ. ತಲೆಬಾಗಿ ಅಲ್ಲಿಂದ ಹೊರಬಂದೆವು.

ಕೇದಾರ ದರ್ಶನದ ಬಹುದಿನಗಳ ಬಯಕೆ ಈಡೇರಿತು.

**ಲೇಖಕರ ಪರಿಚಯ**

ಶ್ರೀಮತಿ ಲೀಲಾವತಿ ಎಸ್. ರಾವ್‌ರವರು ೧೯೪೩ರಲ್ಲಿ ದಾವಣಗೆರೆಯಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ., ಹಿಂದಿ ರಾಷ್ಟ್ರಭಾಷಾ ವಿಶಾರದ ಪದವಿಗಳನ್ನು ಪಡೆದು ಕನ್ನಡ ಪ್ರಾಧ್ಯಾಪಕರಾಗಿ ಈಗ ಮೈಸೂರಿನಲ್ಲಿ ನಿವೃತ್ತ ಜೀವನ ಸಾಗಿಸುತ್ತಿದ್ದಾರೆ. ಇವರು ದಾಸಸಾಹಿತ್ಯ ವಿಭಾಗದಲ್ಲಿ ಸಂಶೋಧನ ಸಹಾಯಕಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಜೀವು ಬಾಯಿಯವರ ಕೀರ್ತನೆಗಳು, ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು ಎಂಬ ಸಂಪುಟಗಳನ್ನು ಸಂಪಾದಿಸಿದ್ದಾರೆ. ಪ್ರಾಚೀನ ಸಾಹಿತ್ಯದಲ್ಲಿ ಮಹಿಳೆ, ದಾಸಸಾಹಿತ್ಯದ ನೋಟಗಳು, ಕಿರಿಯರಿಗೆ ಹಿರಿಯರ ಕಥೆಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಪ್ರಸ್ತುತ ಪ್ರವಾಸಕಥನವು ಏರುವ ಬಾ ಕೇದಾರ ಶಿಖರ ಎಂಬ ಕೃತಿಯ ಸಂಕ್ಷಿಪ್ತ ರೂಪ.

ಉದ್ದೇಶ

*ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರವಾಸಸಾಹಿತ್ಯವೂ ಒಂದು. ಗಿರಿಧಾಮ ಗಳನ್ನು, ಪ್ರೇಕ್ಷಣೀಯ ಸ್ಥಳಗಳನ್ನು, ತೀರ್ಥಕ್ಷೇತ್ರಗಳನ್ನು, ಪ್ರಕೃತಿಯ ರಮ್ಯತಾಣಗಳನ್ನು, ಅನ್ಯದೇಶಗಳನ್ನು ಸಂದರ್ಶಿಸಿದರೆ ಮಾತ್ರ ಸಾಲದು; ಅವುಗಳನ್ನು ಆಕರ್ಷಕವಾಗಿ ಬರವಣಿಗೆಯಲ್ಲಿ ದಾಖಲಿಸುವುದೂ ಒಂದು ವಿಶೇಷ ಕಲೆ. 'ಏರುವ ಬಾರಾ ಕೇದಾರ' ಒಂದು ಪರ್ವತ ಶ್ರೇಣಿಯ ಆರೋಹಣದ ರೋಚಕ ಅನುಭವ. ವಿದ್ಯಾರ್ಥಿಗಳಲ್ಲಿ ಪ್ರವಾಸಕಥನಗಳನ್ನು ಓದುವ ಆಸಕ್ತಿ ಮೂಡಿಸಲು ಇದು ಸಹಕಾರಿಯಾಗಬಲ್ಲುದು.*

**ಶಬ್ದಾರ್ಥ :**

ದಂಡಿಗೆ - ಮರದ ಹಿಡಿ; ಬೆರಗು - ಆಶ್ಚರ್ಯ; ಪ್ರಪಾತ - ಕಡಿದಾದ ಕೊರಕಲು, ಜಲಪಾತ; ಹರಿದ್ವಾರ - ಹಿಮಾಲಯದ ದ್ವಾರ; ಭಾಸವಾಗು - ತೋರಿ ಹೋಗು.

**ಟಿಪ್ಪಣಿ :**

ವಾಸ್ತು - ಕಟ್ಟಡ ನಿರ್ಮಾಣ ವಿದ್ಯೆ.

ಹರಿದ್ವಾರ - ಗಂಗಾನದಿ ಬೆಟ್ಟಗಳಿಂದ ಇಳಿದು ಬಯಲುಪ್ರದೇಶಕ್ಕೆ ಬರುವ ಸ್ಥಳ ಮತ್ತು ಆ ಸ್ಥಳದಲ್ಲಿರುವ ಪುಣ್ಯತೀರ್ಥಸ್ಥಳ.

ಹೃಷಿಕೇಶ - ಹರಿದ್ವಾರದ ಪಕ್ಕದಲ್ಲಿರುವ ಇನ್ನೊಂದು ಪುಣ್ಯಸ್ಥಳ.

## ಅಭ್ಯಾಸ

**ಪ್ರಶ್ನೆಗಳು :**

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಲೇಖಕಿ ಚಿಕ್ಕಂದಿನಿಂದ ಯಾವ ಕನಸು ಕಾಣುತ್ತಿದ್ದರು?

೨. ಬಿಸಿನೀರು ಹರಿದು ಎಲ್ಲಿಗೆ ಬೀಳುತ್ತದೆ?

೩. ದಂಡಿ ಎಂದರೇನು?

೪. 'ಗರುಡಬೆಟ್ಟ' ಹಳ್ಳಿಯಿಂದ ಕೇದಾರ ಶಿಖರ ಎಷ್ಟು ದೂರವಿದೆ?

೫. ಕೇದಾರನಾಥ ದೇವಾಲಯ ಯಾವ ಪರ್ವತದ ಮಡಿಲಿನಲ್ಲಿ ಇದೆ?

೬. ಕೇದಾರನಾಥ ಮಂದಿರದ ಹೊರವಲಯದಲ್ಲಿ ಯಾವ ಯಾವ ತೀರ್ಥಗಳಿವೆ?

**ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಗೌರೀಕುಂಡದಿಂದ ಕೇದಾರಶಿಖರಕ್ಕೆ ಯಾವ ಯಾವ ರೀತಿಯಲ್ಲಿ ಹೋಗಬಹುದು?

೨. ಲೇಖಕಿಗೆ ಮರಿ ತೇನಸಿಂಗ್ ಆಗುವ ಆಸೆ ಏಕೆ ಆಯಿತು?

೩. ಕೇದಾರ ಏರುವಾಗ ಕುದುರೆಯವನು ಲೇಖಕಿಗೆ ಏನೆಂದು ಸಲಹೆ ಕೊಟ್ಟನು?

೪. ಪಂಚಪರ್ವತಗಳು ಎಲ್ಲಿವೆ? ಅವು ಯಾವುವು?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ಸಾಲುಗಳಲ್ಲಿ ಉತ್ತರ ಬರೆಯಿರಿ.

೧. ಕೇದಾರವ ಏರುವ ದಾರಿಯ ಪ್ರಕೃತಿ ವೈಭವವನ್ನು ಸಂಗ್ರಹಿಸಿ ಬರೆಯಿರಿ.

೨. ರಾಮಬಾಡ ಪ್ರದೇಶದ ಕಿರುದಾರಿಯನ್ನು 'ಮಿನಿ ವಿಶ್ವ'ವೆಂದು ಕರೆದುದು ಏಕೆ?

**ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. ಆ ಎತ್ತರದಲ್ಲಾದರೂ ಮನುಷ್ಯ ಮೇಲು ಕೀಳು ಮರೆತಿದ್ದಾನೆ.

೨. ಎಂತಹ ಅದ್ಭುತ ಕಲಾಕಾರನಪ್ಪ ಈ ಪ್ರಕೃತಿ!

## ಭಾಷಾಭ್ಯಾಸ

ಅ. 'ಗಡ ಗಡ', 'ಥಳ ಥಳ' ಇಂತಹ ಐದು ಪದಗಳನ್ನು ಬರೆಯಿರಿ.

ಆ. ಕ್ಷಣ ಕ್ಷಣ - ಇದನ್ನು ದ್ವಿರುಕ್ತಿ ಎನ್ನುತ್ತಾರೆ. ಇಂತಹ ಐದು ದ್ವಿರುಕ್ತಿಗಳನ್ನು ಬರೆಯಿರಿ.

ಇ. ಅರ್ಥವ್ಯತ್ಯಾಸ ತಿಳಿಸಿರಿ: ಪ್ರಕಾರ - ಪ್ರಾಕಾರ; ದನ - ದಾನ; ನಿಧನ - ನಿಧಾನ; ವಸ್ತು - ವಾಸ್ತು

**ಈ. ಈ ಪಾಠದಲ್ಲಿರುವ ಅನ್ಯಭಾಷೆಯ ಪದಗಳನ್ನು ಪಟ್ಟಿ ಮಾಡಿರಿ.**

**ಉದಾ : ಬೆಹನ್‌ಜೀ**

**ಉ. ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಹೆಸರಿಸಿರಿ.**

ಭಾರತದಲ್ಲಿ, ಹಿಮಾಲಯಕ್ಕೆ, ಹಿಮಾಲಯದ, ಹೃಷಿಕೇಶವನ್ನು

**ಊ. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯ ಹೆಸರು ಬರೆಯಿರಿ.**

ಹೋಗಬೇಕೆಂಬ, ದೆಹಲಿಯಿಂದ, ಪರ್ವತವನ್ನು, ಸ್ವರ್ಗಾರೋಹಿಣಿ, ಕೇದಾರೇಶ್ವರ

ಋ. 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ | ಬ |
|---|---|
| ೧. ಕೇದಾರೇಶ್ವರ | ಗೂಳಿಯ ಕಾಲುಗಳು |
| ೨. ತುಂಗನಾಥ | ಗೂಳಿಯ ಮುಖ |
| ೩. ರುದ್ರನಾಥ | ಗೂಳಿಯ ಶಿರ |
| ೪. ಮಹೇಶ್ವರ | ಗೂಳಿಯ ಹಿಂಭಾಗ |
| ೫. ಕಪಾಲೇಶ್ವರ | ಗೂಳಿಯ ಹೊಟ್ಟೆ |
| | ಗೂಳಿಯ ಬಾಲ |

## ಚಟುವಟಿಕೆ

೧. ಪ್ರವಾಸ ಸಾಹಿತ್ಯ ಕೃತಿಗಳನ್ನು ಓದಿರಿ.

೨. 'ದೇಶ ಸುತ್ತು ಕೋಶ ಓದು' - ಇದನ್ನು ಒಂದು ಪುಟದಷ್ಟು ಪ್ರಬಂಧ ಬರೆಯಿರಿ.

# ೫. ಬಹುಮುಖ ರಂಗಪ್ರತಿಭೆಯ ಬಿ.ವಿ. ಕಾರಂತ

ಹಾ.ಸಾ.ಕೃ.

ಪ್ರಿ ಚ ಯ ಕನ್ನಡ ನಾಡು ಕಲೆಗಳ ಬೀಡು, ಪ್ರಾಕೃತಿಕ ಸೌಂದರ್ಯದ ಆಗರ. ಪ್ರಸಿದ್ಧ ಕವಿಗಳು, ಕಲಾವಿದರು ಈ ಪುಣ್ಯಭೂಮಿಯಲ್ಲಿ ಜನ್ಮ ತಾಳಿದ್ದಾರೆ. ಇವರಲ್ಲದೆ ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರೂ ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಈ ಎಲ್ಲ ಕ್ಷೇತ್ರಗಳಲ್ಲೂ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯಾತ ವ್ಯಕ್ತಿಗಳು ಈ ನಾಡಿನಲ್ಲಿದ್ದರು; ಇದ್ದಾರೆ. ಅಂತಹ ಮಹತ್ವದ ಸಾಧನೆಗೈದಿರುವ ನಾಟಕಕಾರರು, ನಟರು, ನಿರ್ದೇಶಕರು ಮೊದಲಾದ ರಂಗಸಂಪನ್ನರ ಬಗ್ಗೆ ಅರಿಯುವುದು ಮುಂದಿನ ಪೀಳಿಗೆಗೆ ಪ್ರಯೋಜನಕಾರಿಯಾಗಬಹುದು.

ಕನ್ನಡ ರಂಗಭೂಮಿಗೆ ದಕ್ಷಿಣ ಕನ್ನಡ ಜಿಲ್ಲೆ ಕೊಟ್ಟಿರುವ ಕೊಡುಗೆಗಳಲ್ಲಿ ಬಿ.ವಿ. ಕಾರಂತರು ಪ್ರಮುಖರು. ಕಾರಂತರು ಬಾಲ್ಯದಲ್ಲಿಯೆ ಗುಬ್ಬಿ ಕಂಪನಿಯನ್ನು ಸೇರುವ ಬದಲು ಯಕ್ಷಗಾನ ಮೇಳವನ್ನು ಸೇರಿಬಿಟ್ಟಿದ್ದರೆ, ಯಕ್ಷಗಾನದ ಸಂಪತ್ತು ಹೆಚ್ಚುತ್ತಿತ್ತೇನೋ! ಆದರೆ, ಹವ್ಯಾಸಿ ರಂಗಭೂಮಿ ಬಹಳವಾಗಿ ಕಳೆದುಕೊಳ್ಳುತ್ತಿತ್ತು.

ಅವರ ತಂದೆ ನಾರಣಪ್ಪಯ್ಯ ಹಾಗೂ ತಾಯಿ ಲಕ್ಷ್ಮಮ್ಮ. ನಾಲ್ಕು ಗಂಡು ಮಕ್ಕಳು ಹಾಗೂ ಎರಡು ಹೆಣ್ಣು ಮಕ್ಕಳಲ್ಲಿ ಹಿರಿಯರಾಗಿ ೧೯೨೯ರಲ್ಲಿ ಕಾರಂತರು ಹುಟ್ಟಿದರು.

ಕಾರಂತರು ಹುಟ್ಟಿದ್ದು ಬಂಟ್ವಾಳ ತಾಲ್ಲೂಕಿನ ಬಾಬುಕೋಡಿ ಎಂಬ ಗ್ರಾಮದಲ್ಲಿ. ಆರ್ಥಿಕವಾಗಿ ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ತಾಯಿ ಲಕ್ಷ್ಮಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತಮುತ್ತಲ ಊರುಗಳ ಜಾತ್ರೆ, ಭೂತ ಕೋಲ, ರಥೋತ್ಸವ, ಪಾಡ್ದನಗಳು, ಪಾತ್ರಿಯ ದರ್ಶನ, ವಾದ್ಯಗಳ ಧ್ವನಿ ಕಾರಂತರಿಗೆ ಸಿಕ್ಕ ಶ್ರೀಮಂತಿಕೆ.

ಸಂಗೀತ, ನಾಟಕ, ಓದು - ಈ ಮೂರೂ ಕಾರಂತರ ಬಾಲ್ಯದ ಆಸಕ್ತಿಯ ವಿಷಯಗಳು. ಪಾರಾಯಣ ಮಾಡುವುದರಿಂದ ರಾಮಾಯಣ, ಮಹಾಭಾರತ ಗ್ರಂಥಗಳನ್ನು ಕೇಳಿ ತಿಳಿದಿದ್ದರು. ಅಂದಿನವರೆಗೆ ಬಂದಿದ್ದ ಶಿವರಾಮ ಕಾರಂತರ ಕಾದಂಬರಿಗಳನ್ನು ಓದಿದ್ದರು. ಕಥೆ, ಕಾದಂಬರಿಗಳನ್ನು ಓದುವ ಹವ್ಯಾಸ ಅವರಿಗಿತ್ತು. ಶಾಸ್ತ್ರೀಯವಾಗಿ ಸಂಗೀತಾಭ್ಯಾಸ ಮಾಡದಿದ್ದರೂ, ಮನೆಯ ಹೆಂಗಸರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳಿಂದ ಅವರ ಕಿವಿ ಚುರುಕಾಗಿತ್ತು.

ಒಮ್ಮೆ ಮಂಗಳೂರಿನಲ್ಲಿ ಗುಬ್ಬಿ ಕಂಪೆನಿ ಮೊಕ್ಕಾಂ ಹೂಡಿ 'ಕೃಷ್ಣಲೀಲಾ' ನಾಟಕ ಪ್ರದರ್ಶನ ನಡೆಸಿತ್ತು. ಆ ನಾಟಕವನ್ನು ನೋಡಲು ತಮ್ಮ ಹಳ್ಳಿಯಿಂದ ಪಾಣೆ ಮಂಗಳೂರಿಗೆ ನಾಲ್ಕು ಮೈಲಿ ನಡೆದು ಹೋಗಿ, ಅಲ್ಲಿಂದ ಒಂದು ಬಾಡಿಗೆ ಸೈಕಲ್ ಪಡೆದು ಕೃಷ್ಣಲೀಲಾ ನಾಟಕ ನೋಡಲು ಹೋಗಿದ್ದರಂತೆ. ರಾತ್ರಿ ನಾಟಕ ನೋಡಿ ಬರುವಾಗ ಚಿಕ್ಕಪ್ಪನವರು ಸೈಕಲ್ ತುಳಿಯುತ್ತಿದ್ದರು. ಅದೇ ಗುಂಗಿನಲ್ಲಿ ಕ್ಯಾರಿಯರ್ ಮೇಲೆ ಕೂತಿದ್ದ ಕಾರಂತರು, ಚಕ್ರಕ್ಕೆ ಕಾಲು ಕೊಟ್ಟು, ಪೆಟ್ಟು ಮಾಡಿಕೊಂಡು ನರಳಿದರಂತೆ.

ಎಂಟನೆ ತರಗತಿಯ ಓದು ಮುಗಿಸುವ ಹೊತ್ತಿಗೆ ಅವರು ಶಾಲೆಯನ್ನು ಬಿಡಬೇಕಾಗಿ ಬಂತು. ಮನೆಯ ಆರ್ಥಿಕ ಪರಿಸ್ಥಿತಿ ಒಂದು ಕಾರಣವಾದರೆ, ಇನ್ನೊಂದು ಅವರ ಜೀವನದ ಒಂದು ಘಟನೆ. ಓದಿನ ಆಸಕ್ತಿಯಿದ್ದ ಕಾರಂತರಿಗೆ ಪುಸ್ತಕ ಕೊಳ್ಳಲು ಹಣವಿಲ್ಲದಾದಾಗ, ಅವರು ಪಾಠ ಹೇಳುತ್ತಿದ್ದ ಮನೆಯಿಂದ ಹಣ ಕದಿಯುತ್ತಿದ್ದರು. ಕಳ್ಳತನ ಬಯಲಾದಾಗ ಊರು ಬಿಟ್ಟು ಹೋದರು. ಮೈಸೂರು ತಲುಪುತ್ತಿದ್ದಂತೆ ಗುಬ್ಬಿ ಕಂಪೆನಿ ಅಲ್ಲಿ ಬಿಡಾರ ಹೂಡಿರುವ ವಿಚಾರ ತಿಳಿಯಿತು. ಕಾರಂತರು ಗುಬ್ಬಿ ಕಂಪೆನಿ ಪ್ರವೇಶಿಸಿದರು. ಕಂಪೆನಿ ಸೇರಿದ ಕಾರಂತರು ತಮ್ಮ ಓದು ಮತ್ತು ಸಂಗೀತದ ಆಸಕ್ತಿಯನ್ನು ಕಡಿಮೆ ಮಾಡಿಕೊಳ್ಳಲಿಲ್ಲ. ಬಿಡುವು ಸಿಕ್ಕಾಗಲೆಲ್ಲ ಓದುತ್ತಿದ್ದರು. ಹಾರ್ಮೋನಿಯಂ ನುಡಿಸುವುದನ್ನು ಕಲಿತರು. ನಾಟಕ ಕಲಿಸಲು ಬರುತ್ತಿದ್ದ ಬೆಳ್ಳಾವೆ ನರಹರಿ ಶಾಸ್ತ್ರೀ, ಬಿ. ಪುಟ್ಟಸ್ವಾಮಯ್ಯ ಮುಂತಾದವರ ಬಳಿ ಶಿಷ್ಯವೃತ್ತಿ ಮಾಡಿ ಹಸ್ತಪ್ರತಿ ಮಾಡುವ ಕೆಲಸ ಗಿಟ್ಟಿಸಿಕೊಂಡು ತಮ್ಮ ಕಲಿಕೆಗೆ ದಾರಿ ಮಾಡಿಕೊಂಡರು.

ಗುಬ್ಬಿ ಕಂಪೆನಿಯಲ್ಲಿ ಕಾರಂತರಿಗೆ ಹೆಚ್ಚಾಗಿ ನಟನೆಗೆ ಸಿಗುತ್ತಿದ್ದುದು ಸ್ತ್ರೀ ಪಾತ್ರಗಳು. ಇದು ಅವರಿಗೆ ಮುಜುಗರದ ಸಂಗತಿಯಾಗಿತ್ತು. ಒಮ್ಮೆ ಅವರು ಬೆಳ್ಳಾವೆ ನರಹರಿ ಶಾಸ್ತ್ರಿಗಳನ್ನು ಕೇಳಿದರು, 'ಹೇಗೆ ಸ್ವಾಮಿ ಇದು? ಗಂಡಸರು ಹೆಣ್ಣು ಪಾತ್ರ ಮಾಡೋದು ಸರೀನಾ?' ಅದಕ್ಕೆ ಶಾಸ್ತ್ರಿಗಳು, 'ಅದೇ ಅಭಿನಯ. ತಾನು ಏನು ಅಲ್ಲೋ ಅದನ್ನು ಮಾಡೋದೇ ಅಭಿನಯ' ಎಂದು ತಿಳಿಯಪಡಿಸಿದರು.

ಗುಬ್ಬಿ ಕಂಪೆನಿ ಮುಚ್ಚುವ ಪರಿಸ್ಥಿತಿ ಬಂದಾಗ ಕಾರಂತರು ತಮ್ಮ ಹಿಂದಿ ಕಲಿಕೆ ಮುಂದುವರಿಸಿದರು. ಅನಂತರ ಬೆಂಗಳೂರಿನ ಶಾಲೆಯೊಂದರಲ್ಲಿ ಕಾರಂತರು ಮಾಸ್ತರರಾಗಿ ಕೆಲಸ ಮಾಡಿದರು. ಎಂಟನೆಯ ಇಯತ್ತೆಯವರೆಗೆ ಓದಿದ್ದ ಕಾರಂತರಿಗೆ ಎಸ್.ಎಸ್.ಎಲ್.ಸಿ. ಪಾಸು ಮಾಡುವ ಆಸೆ ಇತ್ತು. ಇಂಗ್ಲಿಷ್ ಜ್ಞಾನ ಕಡಿಮೆ ಇದ್ದುದರಿಂದ ಕಾರಂತರು ಖಾಸಗಿಯಾಗಿ ಹಿಂದಿ ಕಲಿಕೆ ಮುಂದುವರಿಸಿದರು. ಮಾಸ್ತರಿಕೆ ಮಾಡಿಕೊಂಡು, ಸಂಗೀತ ಕಲಿಯುತ್ತ ಬನಾರಸ್ ವಿಶ್ವವಿದ್ಯಾಲಯದ ಮೂಲಕ ಹಿಂದಿ ಪದವಿ ಪಡೆದರು.

ಸಾಂಸಾರಿಕ ಬದುಕಿಗೆ ಧುಮುಕಿದ ಕಾರಂತರು ಪ್ರೇಮಾ ಅವರನ್ನು ಬಾಳ ಸಂಗಾತಿಯಾಗಿ ಕೈಹಿಡಿದರು. ಆಗ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದ ಪ್ರೇಮಾ ಅವರ ಸಂಬಳದಿಂದ ಕುಟುಂಬ ಸಾಗಬೇಕಿತ್ತು.

ರಾಷ್ಟ್ರೀಯ ನಾಟಕ ಶಾಲೆಯ ವಿದ್ಯಾರ್ಥಿಯಾಗಿ ಕಾರಂತರು ಎರಡು ವರ್ಷದ ಡಿಪ್ಲೊಮಾ ಪಡೆದರು. ಜೀವನ ನಿರ್ವಹಣೆಗಾಗಿ ದೆಹಲಿಯ ಸರ್ದಾರ್ ಪಟೇಲ್ ವಿದ್ಯಾಲಯದಲ್ಲಿ ನೌಕರಿ ಹಿಡಿದರು. ತಮ್ಮ ಬಿಡುವಿನ ವೇಳೆಯಲ್ಲಿ ದೆಹಲಿಯಲ್ಲಿ ಯಾರೇ ನಾಟಕ ಆಡಲಿ, ಅವರು ಕರೆಯಲಿ; ಕರೆಯದಿರಲಿ - ಹೋಗಿ ಬಿಟ್ಟಿಯಾಗಿ ಪ್ರಸಾಧನ ಮಾಡಿಕೊಡುವ ಹವ್ಯಾಸ ಇಟ್ಟುಕೊಂಡರು.

ಎಪ್ಪತ್ತರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ ನವೋದಯದ ಕಾವು ಆರಿ, ನವ್ಯ ಸಾಹಿತ್ಯ ಚಳವಳಿ ಕಾಲಿರಿಸಿತ್ತು. ಬೆಂಗಳೂರಿನ ಸಂಸ ಬಯಲುರಂಗದಲ್ಲಿ ಮೂರು ನಾಟಕಗಳ ಉತ್ಸವವನ್ನು ಮಾಡಿದ ಕಾರಂತರು ಆಧುನಿಕ ಹವ್ಯಾಸಿ ರಂಗಭೂಮಿಗೆ ಭದ್ರ ಬುನಾದಿ ಹಾಕಿದರು. ಬಯಲಿನಲ್ಲೇ ರಂಗಭೂಮಿಯನ್ನು ಕಂಡುಕೊಂಡರು. ಕುವೆಂಪು ಅವರ 'ಕಿಂದರಿ ಜೋಗಿ' ಪ್ರಯೋಗಕ್ಕಾಗಿ ರಂಗಾಯಣದ 'ವನರಂಗ'ದಲ್ಲಿ ಬೊಮ್ಮನಹಳ್ಳಿಯನ್ನೇ ನಿರ್ಮಾಣ ಮಾಡಿದರು. ರಂಗಚಟುವಟಿಕೆ ಚಳವಳಿಯೋಪಾದಿಯಲ್ಲಿ ಬೆಳೆದು ಕಾರಂತರು 'ಹವ್ಯಾಸಿ ರಂಗಭೂಮಿಯ ಹರಿಕಾರ' ಎನಿಸಿದರು.

ಮಧ್ಯಪ್ರದೇಶದ ಭೂಪಾಲಿನಲ್ಲಿ 'ಭಾರತ ಭವನ' ಆರಂಭವಾದಾಗ ಅದರ ನಿರ್ದೇಶಕರಾಗಿದ್ದ ಕಾರಂತರು ಅಲ್ಲಿ ರಂಗಮಂಡಲ ರೆಪರ್ಟರಿ ಕಟ್ಟಿದರು. ನಾಲ್ಕು ವರ್ಷಗಳಲ್ಲಿ ಘಾಸೀರಾಮ್ ಕೊತ್ವಾಲ್, ಮಾಲವಿಕಾಗ್ನಿಮಿತ್ರ, ಹಯವದನ ಮುಂತಾದ ಪ್ರಮುಖ ನಾಟಕ ನಿರ್ದೇಶನ ಮಾಡಿದರು. ಹಿಂದಿ ಉಪಭಾಷೆ ಬುಂದೇಲಿಯಲ್ಲಿ ಪ್ರಯೋಗವಾದ ಮಾಲವಿಕಾಗ್ನಿಮಿತ್ರ ನಾಟಕ ಹೊಸ ಜೀವಸಂಚಾರ ಹರಿಸಿತು.

ಕರ್ನಾಟಕಕ್ಕೆ ಕಾರಂತರ ಮರು ಪ್ರವೇಶ ಆಯಿತು. ರಾಜ್ಯ ಸರಕಾರದ ವತಿಯಿಂದ ರೆಪರ್ಟರಿ ಕಟ್ಟುವುದು ಅವರ ಉದ್ದೇಶವಿತ್ತು. ಅದಕ್ಕಾಗಿ ಅವರು ಆಯ್ಕೆ ಮಾಡಿಕೊಂಡ ಸ್ಥಳ ಮೈಸೂರು. ಕಲಾಮಂದಿರದ ಹಿಂಭಾಗದ ಪಾಳುಬಿದ್ದ ಜಾಗವನ್ನು ಕಾರಂತರ ನಟವರ್ಗವೇ ಶುದ್ಧಗೊಳಿಸಿತು. ಸರಕಾರದ ಮುಂದಾಗಲಿ, ಸಾರ್ವಜನಿಕರ ಮುಂದಾಗಲಿ ಬೇಡಿಕೆಗಳನ್ನು ಇಡಬೇಕಾದರೆ ಮೊದಲಿಗೆ ನಾವು ದುಡಿದು ಕೆಲಸ ಮಾಡಿ ತೋರಿಸಿ, ಆ ಬೇಡಿಕೆಗಳಿಗೆ ಅರ್ಹರಾಗಬೇಕೆಂಬುದು ಕಾರಂತರ ನಿಲುವು. ಹಾಗೆಯೇ ಮಾಡಿದರು. ರೆಪರ್ಟರಿ ಆರಂಭಗೊಂಡಿತು.

ರಂಗಾಯಣದ ಮೂಲಕ 'ಗೋವಿನ ಹಾಡು', 'ಕಿಂದರಿಜೋಗಿ', 'ಚಂದ್ರಹಾಸ', 'ಮೂಕನ ಮಕ್ಕಳು' ಸ್ಮರಣೀಯ ಪ್ರಯೋಗಗಳಾಗಿ ಪ್ರದರ್ಶಿತವಾದವು. ಕಾರಂತರು ಕನ್ನಡ ರಂಗಭೂಮಿ ಚಳವಳಿಗೆ ನೀಡಿದ ಗಟ್ಟಿ ಕೊಡುಗೆ ಮೈಸೂರಿನ ರಂಗಾಯಣ. ಅವರು ನಿರ್ದೇಶಕರಾಗಿ ರಾಷ್ಟ್ರಮಟ್ಟದ ಖ್ಯಾತಿ ಪಡೆದರೂ ಅದಕ್ಕೆ ಅಂಟಿಕೊಂಡು ಕೂರಲಿಲ್ಲ. ಪಟ್ಟಣ, ಹಳ್ಳಿ ಎನ್ನದೆ, ವೃತ್ತಿಪರ, ಹವ್ಯಾಸಿ ಎನ್ನದೆ ಎಲ್ಲೆಂದರಲ್ಲಿ ರಂಗಪ್ರಯೋಗ, ರಂಗ ನಿರ್ದೇಶನ ಮಾಡಿ ಮುನ್ನಡೆದರು. ಆ ದೃಷ್ಟಿಯಿಂದ ಕಾರಂತರಿಗೆ ವಿಫಲತೆ ಎಂಬುದಿಲ್ಲ.

ಕನ್ನಡ ರಂಗಭೂಮಿಯನ್ನೇ ಏಕೆ, ಇಡೀ ಭಾರತದ ಅನೇಕ ರಂಗಭೂಮಿಗಳನ್ನು ಶ್ರೀಮಂತಗೊಳಿಸಿದವರು ಕಾರಂತರು. ಅವರು ತಮ್ಮ ಪ್ರಯೋಗಗಳಿಗೆ ಒಂದು ನಿರ್ದಿಷ್ಟ ಶೈಲಿ ರೂಢಿಸಿದವರಲ್ಲ. ಅಲ್ಲಲ್ಲಿಗೆ ಸಿಗುವ ಸಂಪನ್ಮೂಲಗಳನ್ನಾಶ್ರಯಿಸಿ, ಅಲ್ಲಿಗೆ ತಕ್ಕದ್ದೆನಿಸುವ ನಾಟಕ ಹುಡುಕಿ ಆಡಿಸುವ ಪ್ರವೃತ್ತಿ ಅವರದು. ಆ ಗುಂಪಿನಲ್ಲಿ ಯಾವ ದ್ರವ್ಯ ಕಾಣುತ್ತದೋ ಅದನ್ನೆ ರೂಪುಗೊಳಿಸುವ ಮೂಲಕ ಸ್ಥಳೀಯವಾದ ಒಂದು ಹೊಸ ಶೈಲಿಗೆ ರೂಪು ನೀಡುವ ಚಮತ್ಕಾರ ಅವರದು.

ಬಾಲ್ಯದಲ್ಲಿ ಶಾಲೆ-ಮನೆ ಎರಡರಿಂದಲೂ ವಂಚಿತರಾದ ಕಾರಂತರು 'ಮಕ್ಕಳ ಸ್ಕೂಲು ರಂಗಭೂಮಿ'ಯಲ್ಲಿ ಎಂಬಂತೆ ಮಕ್ಕಳ ರಂಗಭೂಮಿಗೆ ಶ್ರಮಿಸಿದರು. ಮಕ್ಕಳಿಗಾಗಿ ನಾಟಕ ರಚಿಸಿ, ನಿರ್ದೇಶಿಸಿದ್ದಾರೆ. ಪಂಜರ ಶಾಲೆ, ಕಿಂದರಿ ಜೋಗಿ, ಮೂಕನ ಮಕ್ಕಳು ಮೊದಲಾದ ನಾಟಕಗಳನ್ನು ಮಕ್ಕಳಿಗಾಗಿ ಮಾಡಿಸಿದ್ದಾರೆ. ಮಕ್ಕಳ ರಂಗದ ಕಲ್ಪನೆಯ ಮೂಲಕ ಚಿಣ್ಣರಿಗಾಗಿ ಹೊಸ ರಂಗಲೋಕ ನಿರ್ಮಿಸಿದವರು ಕಾರಂತರು.

ಮಕ್ಕಳ ನಾಟಕಗಳೂ ಸೇರಿದಂತೆ ದೇಶ - ವಿದೇಶೀಯ ಭಾಷೆಗಳಲ್ಲಿ ಒಟ್ಟು ೧೦೪ ನಾಟಕಗಳನ್ನು ಕಾರಂತರು ನಿರ್ದೇಶಿಸಿದ್ದಾರೆ. ಇವರು ಸಂಗೀತ, ಧ್ವನಿ, ಬೆಳಕು ನೀಡಿದ ಪ್ರದರ್ಶನಗಳೂ ಅನೇಕ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಚೋಮನ ದುಡಿ ಮುಂತಾದ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರಗಳು, ಸಾಕ್ಷ್ಯ ಚಿತ್ರಗಳೂ ಸೇರಿದಂತೆ ಎಂಟು ಚಿತ್ರಗಳಿಗೆ ನಿರ್ದೇಶನ ನೀಡಿದ್ದಾರೆ. ಇತರ ನಿರ್ದೇಶಕರ ಒಟ್ಟು ೨೫ ಚಿತ್ರಗಳಿಗೆ ಹಿನ್ನೆಲೆ ಸಂಗೀತ ನೀಡಿದ್ದಾರೆ. ಸಂಸ್ಕೃತದಿಂದ ಹಿಂದಿಗೆ, ಕನ್ನಡದಿಂದ ಹಿಂದಿಗೆ ೧೨ ನಾಟಕಗಳನ್ನು ಭಾಷಾಂತರಿಸಿದ್ದಾರೆ. ರಾಷ್ಟ್ರಾದ್ಯಂತ ಹದಿನೈದು ನಾಟಕ ಕಮ್ಮಟಗಳ ನಿರ್ದೇಶಕರಾಗಿದ್ದ ಕಾರಂತರಿಗೆ, ಪದ್ಮಶ್ರೀ ಮೊದಲಾದ ರಾಷ್ಟ್ರ ಮತ್ತು ರಾಜ್ಯಪ್ರಶಸ್ತಿಗಳು ಲಭಿಸಿವೆ.

ರಂಗಭೂಮಿಯ ದಿಗ್ಗಜ ಕಾರಂತರಿಗೆ ಪ್ರಾದೇಶಿಕ ಸೊಗಡು ಸೂಸುವ ರಂಗಾಯಣಗಳಂತಹ ಐದು ಸಂಸ್ಥೆಗಳನ್ನು ಕಟ್ಟುವ ಕನಸಿದ್ದಿತು. ಕನಸುಗಳೆಲ್ಲ

ನನಸಾಗದಿರಬಹುದು. ಆದರೆ ಕಲಾವಿದ ಜೀವಂತವಿರಲು ಕನಸೇ ಬೇಕಲ್ಲವೆ? ಕಾರಂತರ ಕನಸು ಕೈಗೂಡುವ ಮುನ್ನ ೨೦೦೨ರಲ್ಲಿ ವಿಧಿವಶರಾದರು.

**ಲೇಖಕರ ಪರಿಚಯ**

ಹಾ. ಸಾ. ಕೃಷ್ಣಮೂರ್ತಿ ಅವರು ಹಾ.ಸಾ.ಕೃ. ಎಂದೇ ಪ್ರಸಿದ್ಧರು. ಇವರು ಮೈಸೂರು ಜಿಲ್ಲೆ, ಹುಣಸೂರು ತಾಲೂಕಿನ ಹನಗೂಡು ಗ್ರಾಮದಲ್ಲಿ ೧೯೪೦ರಲ್ಲಿ ಹುಟ್ಟಿದರು. ತಂದೆ ಎಚ್.ಎಸ್. ಶ್ರೀಕಂಠಯ್ಯ, ತಾಯಿ ಸುಬ್ಬರತ್ನಮ್ಮ. ವಿಜ್ಞಾನ ವಿಷಯದಲ್ಲಿ ಪದವೀಧರರಾದ ಹಾ.ಸಾ.ಕೃ.ರವರು ನಾಟಕ ವಿಷಯದಲ್ಲಿ ಬಿ.ಎ. ಓದಿದ್ದಾರೆ.

ಕನ್ನಡ ಹವ್ಯಾಸಿ ರಂಗ ಭೂಮಿಯಲ್ಲಿ ಎರಡು ದಶಕಗಳ ಕಾಲ ನಟರಾಗಿ, ನಿರ್ದೇಶಕರಾಗಿ, ಮಕ್ಕಳ ನಾಟಕ ರಚನಾಕಾರರಾಗಿ, ರಂಗವಿಮರ್ಶಕರಾಗಿ ದುಡಿದಿದ್ದಾರೆ. ಕೆಲವು ಪತ್ರಿಕೆಗಳಲ್ಲಿ ಅಂಕಣ ಬರಹಗಳನ್ನೂ ಬರೆದಿದ್ದಾರೆ. ಮೈಸೂರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ 'ರಂಗಾಯಣ'ಕ್ಕೆ ವಿಶೇಷಾಧಿಕಾರಿಗಳಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಪ್ರಶಸ್ತಿ ಸಂದಿದೆ. ಸಂಪಿಗೆ ಹೂ, ನಲಿವು ತಂದ ನೋವು ಮುಂತಾದವು ಇವರ ಕೃತಿಗಳು.

ಪ್ರಸ್ತುತ ಲೇಖನವು ಹಾ.ಸಾ.ಕೃ.ರವರ ಬಿ.ವಿ. ಕಾರಂತ ಕೃತಿಯ ಸಂಕ್ಷೇಪ ರೂಪವಾಗಿದೆ.

**ಪೀಠಿಕೆ**

*ಬಿ.ವಿ. ಕಾರಂತರು ಬಹುಮುಖ ಪ್ರತಿಭೆಯುಳ್ಳ ರಂಗಸಂಪನ್ನರು. ಬಾಲ್ಯದಿಂದಲೇ ಅವರದು ಹೋರಾಟದ ಬದುಕು. ಸ್ವಪ್ರಯತ್ನದಿಂದ ಮೇಲೇರಿದ ಕಾರಂತರು ರಾಜ್ಯ ಮತ್ತು ರಾಷ್ಟ್ರ ಕಂಡಂತಹ ಓರ್ವ ಶ್ರೇಷ್ಠ ನಟ, ನಾಟಕಕಾರ, ನಿರ್ದೇಶಕ. ರಂಗಭೂಮಿ ಮತ್ತು ಸಿನಿಮಾ ಜಗತ್ತಿನಲ್ಲಿ ಅಪೂರ್ವ ಛಾಪನ್ನು ಮೂಡಿಸಿದ ಕಾರಂತರ ವ್ಯಕ್ತಿತ್ವವನ್ನು ಸಂಕ್ಷಿಪ್ತವಾಗಿ ಪರಿಚಯಿಸುವುದೇ ಇಲ್ಲಿಯ ಉದ್ದೇಶವಾಗಿದೆ.*

**ಶಬ್ದಾರ್ಥ :**

ಹವ್ಯಾಸಿ - ಅಭ್ಯಾಸಿ, ಆಸಕ್ತಿಯುಳ್ಳವನು; ಕುಗ್ರಾಮ - ತೀರ ಚಿಕ್ಕ ಹಳ್ಳಿ; ಪಾರಾಯಣ - (ಧರ್ಮಗ್ರಂಥಗಳನ್ನು) ಮೊದಲಿನಿಂದ ಕೊನೆಯವರೆಗೆ ಓದುವುದು; ಮೊಕ್ಕಾಂ - ತಂಗುವ ಸ್ಥಳ, ಬೀಡು; ವಿಸ್ಮಯ - ಆಶ್ಚರ್ಯ; ಸಂಚಕಾರ - ಕೇಡು, ಆಪತ್ತು; ಕಮ್ಮಟ - ಕಾರ್ಯಾಗಾರ; ಪ್ರಸಾಧನ - ಅಲಂಕಾರ.

**ಟಿಪ್ಪಣಿ :**

ಪಾಡ್ದನ: ದ.ಕ. ಜಿಲ್ಲೆಯಲ್ಲಿ ಜನಪದರು ಭೂತಾರಾಧನೆಯ ಸಂದರ್ಭದಲ್ಲಿ ಬಳಸುವ ಹಾಡು.

ಭೂತಕೋಲ : ಭೂತಾರಾಧನೆ.

ಪಾತ್ರಿ : ದೈವಸ್ಥಾನ, ಭೂತಸ್ಥಾನಗಳಲ್ಲಿನ ಪೂಜಾರಿ.

ಪಾತ್ರಿಯ ದರ್ಶನ : ಪಾತ್ರಿಯ ಮೈಮೇಲೆ ಆವೇಶ ಬರುವುದು.

ರೆಪರ್ಟರಿ : ನಾಟಕವನ್ನೇ ವೃತ್ತಿಯನ್ನಾಗಿ ಮಾಡಿಕೊಂಡ ರಂಗತಂಡ.

## ಅಭ್ಯಾಸ

ಪ್ರಶ್ನೆಗಳು :

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. 'ಕೃಷ್ಣಲೀಲಾ' ನಾಟಕವನ್ನು ನೋಡಲು ಕಾರಂತರು ಹೋದ ಬಗೆ ಹೇಗೆ?

೨. ಯಾರ ಬಳಿಯಲ್ಲಿ ಕಾರಂತರು ಶಿಷ್ಯವೃತ್ತಿ ಗಿಟ್ಟಿಸಿದರು?

೩. ಕಾರಂತರಿಗೆ ಗುಬ್ಬಿಕಂಪೆನಿಯಲ್ಲಿ ವಿಶೇಷವಾಗಿ ಯಾವ ಪಾತ್ರ ಸಿಗುತ್ತಿತ್ತು?

೪. ಹಿಂದಿ ಉಪಭಾಷೆ ಬುಂದೇಲಿಯಲ್ಲಿ ಪ್ರಯೋಗವಾದ ನಾಟಕ ಯಾವುದು?

೫. ಎಷ್ಟು ನಾಟಕಗಳನ್ನು ಕಾರಂತರು ನಿರ್ದೇಶಿಸಿದ್ದಾರೆ?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಬಾಲ್ಯದಲ್ಲಿ ಕಾರಂತರಿಗೆ ಸಿಕ್ಕ ಕಲಾಶ್ರೀಮಂತಿಕೆ ಯಾವ ಯಾವ ಬಗೆಯವು?

೨. ಕಾರಂತರ ವಿದ್ಯಾಭ್ಯಾಸವನ್ನು ಕುರಿತು ಬರೆಯಿರಿ.

೩. ಮಕ್ಕಳ ರಂಗಭೂಮಿಗೆ ಕಾರಂತರ ಕೊಡುಗೆ ಏನು?

೪. ಆಧುನಿಕ ಹವ್ಯಾಸಿ ರಂಗಭೂಮಿಗೆ ಕಾರಂತರು ಭದ್ರ ಬುನಾದಿಯನ್ನು ಹೇಗೆ ನಿರ್ಮಾಣ ಮಾಡಿದರು?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಗುಬ್ಬಿ ಕಂಪೆನಿಯಲ್ಲಿ ಕಾರಂತರು ಹೇಗೆ ಅಭಿವೃದ್ಧಿ ಹೊಂದಿದರು?

೨. ಮೈಸೂರಿನಲ್ಲಿ 'ರೆಪರ್ಟರಿ' ಆರಂಭಗೊಂಡ ಸನ್ನಿವೇಶವನ್ನು ಕುರಿತು ಬರೆಯಿರಿ.

೩. ಬಿ.ವಿ. ಕಾರಂತರು ನಿರ್ದೇಶಿಸಿದ ನಾಟಕ ಮತ್ತು ಚಲನಚಿತ್ರಗಳನ್ನು ಕುರಿತು ಬರೆಯಿರಿ.

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯಸಹಿತ ತಿಳಿಸಿರಿ.

೧. ಅವರು ಪಾಠ ಹೇಳುತ್ತಿದ್ದ ಮನೆಯಿಂದ ಹಣ ಕದಿಯುತ್ತಿದ್ದರು.

೨. ತಾನು ಏನು ಅಲ್ವೋ ಅದನ್ನೆ ಮಾಡೋದೇ ಅಭಿನಯ.

## ಭಾಷಾಭ್ಯಾಸ

ಅ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಹಾಡುತ್ತಿದ್ದ, ಲೋಕವನ್ನು, ತಂದೊಡ್ಡಿತು, ರಥೋತ್ಸವ, ನವೋದಯ

ಆ. ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಅನುಭವ, ಜ್ಞಾನ, ದುರ್ದೈವ, ವೇಳೆ, ಶುದ್ಧ, ಆಸಕ್ತಿ, ವಿಫಲತೆ

ಇ. ಇವುಗಳಿಗೆ ತದ್ಭವಗಳನ್ನು ಬರೆಯಿರಿ.

ಜಾತ್ರೆ, ಧ್ವನಿ, ವರ್ಣ, ಅದ್ಭುತ, ಪುಸ್ತಕ, ದೃಷ್ಟಿ, ಸಂಸ್ಕೃತ, ವಿಧಿ

ಈ. ಈ ಕೆಳಗಿನ ಪದಗಳನ್ನು ನಾಮಪದ - ಕ್ರಿಯಾಪದಗಳ ಅರ್ಥ ಬರುವಂತೆ ವಾಕ್ಯ ರಚಿಸಿರಿ.

ಕಲಿ, ತಿಳಿ, ಕರೆ, ಆರು

ಉ. ಕೆಳಗಿನ ಕ್ರಿಯಾಪದಗಳಲ್ಲಿರುವ ಧಾತುವನ್ನು ಗುರುತಿಸಿ ಬರೆಯಿರಿ.

ನೋಡಲು, ನುಡಿಸು, ಮಾಡಿದರು, ಕಳೆದುಕೊಳ್ಳು

ಊ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ತುಂಬಿರಿ.

೧. ಬಿ.ವಿ. ಕಾರಂತರ ಹುಟ್ಟೂರು ........... .

೨. ಮಂಗಳೂರಿನಲ್ಲಿ ಗುಬ್ಬಿ ಕಂಪೆನಿಯವರು ಪ್ರದರ್ಶನ ನೀಡುತ್ತಿದ್ದ ನಾಟಕ .........

೩. ಅಭಿನಯದ ಬಗ್ಗೆ ಕಾರಂತರಿಗೆ ತಿಳಿಯಪಡಿಸಿದವರು ..........

೪. ಕಾರಂತರು ಹಿಂದಿಯಲ್ಲಿ ಪದವಿ ಪಡೆದ ವಿಶ್ವವಿದ್ಯಾಲಯದ ಹೆಸರು ..........

ಋ. 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ | ಬ |
|---|---|
| ೧. ನಾರಣಪ್ಪಯ್ಯ | ಕುವೆಂಪು |
| ೨. ಪದ್ಮಶ್ರೀ | ಬೇಸಾಯ |
| ೩. ಕಿಂದರಿಜೋಗಿ | ಬಿ. ಪುಟ್ಟಸ್ವಾಮಯ್ಯ |
| ೪. ವ್ಯವಸಾಯ | ಕಾರಂತರ ತಂದೆ |
| | ಒಂದು ರಾಷ್ಟ್ರೀಯ ಪ್ರಶಸ್ತಿ |

### ಚಟುವಟಿಕೆ

೧. ಕರ್ನಾಟಕದ ಹವ್ಯಾಸಿ ರಂಗಭೂಮಿ ಬೆಳವಣಿಗೆಯ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

೨. ಶಾಲಾ ಸಮಾರಂಭಗಳಲ್ಲಿ ಕಿಂದರಿಜೋಗಿ, ಪಂಜರಶಾಲೆ, ಮೂಕನ ಮಕ್ಕಳು - ಇವುಗಳಲ್ಲಿ ಯಾವುದಾದರೊಂದು ನಾಟಕವನ್ನು ಅಭಿನಯಿಸಿರಿ.

# ೬. ಕರ್ಮಯೋಗಿ

ಗೊರೂರು ರಾಮಸ್ವಾಮಿ ಅಯ್ಯಂಗಾರ್

**ಪ್ರವೇಶ** ವ್ಯಾಪಾರ ಮಾಡಲು ತಕ್ಕಡಿ ಹಿಡಿದು ಬಂದ ಈಸ್ಟ್ ಇಂಡಿಯಾ ಕಂಪನಿಯವರು, ಭಾರತದಲ್ಲಿನ ಪರಿಸ್ಥಿತಿಯ ದುರ್ಲಾಭ ಪಡೆದರು. ಒಡೆದು ಆಳುವ ತಮ್ಮ ನೀತಿಯಿಂದ ಭಾರತದ ರಾಜ್ಯಗಳನ್ನು ಒಂದೊಂದಾಗಿ ಕಬಳಿಸಿದರು. ಬ್ರಿಟಿಷರ ವಿರುದ್ಧ ಅಲ್ಲಲ್ಲಿ ಹೋರಾಟ ನಡೆಯಿತು. ಲಾಲಾ ಲಜಪತ್‌ರಾಯ್, ಬಾಲಗಂಗಾಧರ ಟಿಳಕ, ಗೋಪಾಲಕೃಷ್ಣ ಗೋಖಲೆಯಂಥವರು ಬ್ರಿಟಿಷರ ವಿರುದ್ಧ ಸೆಟೆದು ನಿಂತರು. ಮೋಹನದಾಸ ಕರಮಚಂದ ಗಾಂಧಿಯವರು ದಕ್ಷಿಣ ಆಫ್ರಿಕೆಯಿಂದ ಮರಳಿ ಭಾರತಕ್ಕೆ ಬಂದರು. ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿ ನಿಂತರು. ರಾಷ್ಟ್ರಾದ್ಯಂತ ಜನರು ಅಗಣಿತ ಸಂಖ್ಯೆಯಲ್ಲಿ ಸ್ವಾತಂತ್ರ್ಯದೇವಿಗೆ ತಮ್ಮನ್ನರ್ಪಿಸಿಕೊಂಡರು. 'ತಗಡೂರು ಗಾಂಧಿ' ಎಂದೇ ಹೆಸರಾದ ಕರ್ಮಯೋಗಿ ತಗಡೂರು ರಾಮಚಂದ್ರರಾಯರು ಅಂಥವರಲ್ಲೊಬ್ಬರು.

ಶ್ರೀಮಾನ್ ತಗಡೂರು ರಾಮಚಂದ್ರರಾಯರ ಹೆಸರನ್ನು ನನಗೆ ಬುದ್ಧಿ ತಿಳಿದಂದಿನಿಂದ ನಾನು ಕೇಳುತ್ತಲೇ ಇದ್ದೇನೆ. ಸ್ವಲ್ಪ ಹೆಚ್ಚು ಕಡಿಮೆ, ನಮ್ಮ ದೇಶದಲ್ಲಿ ಮಹಾತ್ಮಾ ಗಾಂಧೀಯವರ ಹೆಸರು ಪ್ರಚಾರಕ್ಕೆ ಬಂದ ಕಾಲದಲ್ಲಿಯೇ, ಇವರ ಹೆಸರೂ ಜನರಲ್ಲಿ ಬಳಕೆಯಾಗಿ ಅಂದಿನಿಂದ ಇಂದಿನವರೆಗೆ ಮರ್ಯಾದೆ, ಗೌರವ,ತ್ಯಾಗ, ಸೇವೆಗಳ ಸಂಕೇತವಾಗಿದೆ. ಪ್ರಾರಂಭದ ದೆಸೆಯಲ್ಲಿಯೇ ಇವರು ಸ್ವದೇಶಿ, ಸ್ವರಾಜ್ಯ, ಹಳ್ಳಿಗಳ ಏಳಿಗೆ - ಇವುಗಳ ಪ್ರತೀಕವಾದರು. ವಂಗವಿಭಜನೆಯ ಪರಿಣಾಮವಾಗಿ ಅದು ಸರಿದುಹೋದ ಒಂದು ದಶಕದ ನಂತರ ಸಹ ಇವರು ಅತ್ಯುತ್ಸಾಹದಿಂದ, ತಾವು ಇನ್ನೂ ಯೌವನದಲ್ಲಿ ಕಾಲಿಡುತ್ತಿರುವ ಪ್ರಾರಂಭದಲ್ಲಿಯೇ ಸ್ವದೇಶಿಯ ಪ್ರಚಾರಕರಾಗಿ ಕೆಲವು ವೇಳೆ ಸ್ವದೇಶೀ ಸಾಮಾನುಗಳನ್ನು ಕೂಡ ಹೊತ್ತು ಹಳ್ಳಿಗಳನ್ನೂ, ಪಟ್ಟಣಗಳನ್ನೂ ತಿರುಗುತ್ತಿದ್ದರು. ಬಹುಕಾಲ ಇವರು ತಾವೇ ಸ್ವದೇಶಿ ವ್ರತದ ಜಂಗಮಮೂರ್ತಿಯಾಗಿ ವೇಷ ಭೂಷಣಗಳಲ್ಲಿ ಸಹ ಸ್ವದೇಶಿಯ ಸಂಕೇತವನ್ನು ಆಚರಿಸುತ್ತಿದ್ದರು. ಉಡುಪಿನ ಮೇಲೆಲ್ಲ ಸ್ವದೇಶಿಯ ಘೋಷಣೆಗಳು (ಸ್ವದೇಶಿಗೆ ಜಯವಾಗಲಿ, ಪರದೇಶಿಯನ್ನು ಬಹಿಷ್ಕರಿಸಿ, ಸ್ವದೇಶಿಯೇ ಸ್ವರಾಜ್ಯ) ಅಂಕಿತವಾಗಿದ್ದವು. ಇವರ ಉಡುಪು ರಾಷ್ಟ್ರಧ್ವಜವನ್ನು ಪ್ರತಿನಿಧಿಸುತ್ತಿತ್ತು. ತಲೆಗೆ ಕೇಸರಿವರ್ಣದ ಗಾಂಧೀಟೋಪಿ, ಹಸಿರು ಬಣ್ಣದ ಜುಬ್ಬ, ಬಿಳಿಯ ಪಂಚೆ ಇವುಗಳಿಂದೆಲ್ಲ ಇವರು ಒಬ್ಬ ಮಾರಿಯಮ್ಮನ ಪೂಜಾರಿಯಂತೆ ಕಾಣುತ್ತಿದ್ದರು. ಜನತೆಯ ಹಾಸ್ಯವನ್ನು ಸಹ ಲಕ್ಷ್ಯ ಮಾಡದೆ ಹಳ್ಳಿಗಳಲ್ಲಿಯೂ ನಗರಗಳಲ್ಲಿಯೂ ಸ್ವದೇಶಿ ಪ್ರಚಾರ ಮಾಡಿದರು. ಕೆಲವು ಕಾಲ ಕರಿಯ ಕಂಬಳಿಯನ್ನೇ

ನಿಲುವಂಗಿಯಾಗಿ ಹೊಲಿದುಕೊಂಡು, ಅದರ ಮೇಲೆಯ, ಅಂಚುಗಳಲ್ಲಿಯೂ ಬಿಳಿಯ ಬಣ್ಣದ ಘೋಷಣೆಗಳನ್ನು ಬರೆಸಿ ಚಿಕ್ಕಮಕ್ಕಳು ಕೂಡ ಓದುವಂತೆ ಪ್ರದರ್ಶಿಸುತ್ತ ತಿರುಗುತ್ತಿದ್ದರು. ಹೀಗೆ ಇವರು ಒಬ್ಬರೇ ಸ್ವದೇಶಿ ಪ್ರಚಾರವನ್ನು ಅನೇಕ ವರುಷಗಳ ಕಾಲ - ನೂರಾರು ಸಂಘ ಸಂಸ್ಥೆಗಳು ಮಾಡಲಾಗದುದನ್ನು ಮಾಡಿದರು. ಪ್ರಾರಂಭ ದೆಸೆಯಲ್ಲಿ ಇವರು ಯಾರನ್ನೂ ಏನನ್ನೂ (ಚಂದಾ-ವಗೈರೆ) ಕೇಳಲಿಲ್ಲ. ಅಂದಿನ ಕಾಲದಲ್ಲಿ ಪ್ರಚಾರದಲ್ಲಿದ್ದಂತೆ, ಒಂದಾಣೆಯ ಕಡಲೆಕಾಯನ್ನು ತಿಂದುಕೊಂಡೋ ಅಥವಾ ಹೋಟೆಲಿನವರು ಮಾರುತ್ತಿದ್ದ ಒಂದಾಣೆಗೆ ಒಂದು ಪೊಟ್ಟಣದ ಅನ್ನವನ್ನು ತಿಂದೋ ಸ್ವಯಂ ಪ್ರೇರಣೆಯಿಂದ, ಏಕಾಗ್ರವಾದ ನಿಷ್ಠೆಯಿಂದ ತಾವು ಆರಿಸಿಕೊಂಡ ಉದ್ಯೋಗವನ್ನು ನಡೆಸಿದರು. ಇವರು ಕೆಲವು ಕಾಲ, ಸ್ವದೇಶಿ ಸಾಮಾನುಗಳನ್ನು ಒಂದು ಕೈಗಾಡಿಯಲ್ಲಿ ಸಹ ಮಾರಿದರೆಂದು ನನಗೆ ಜ್ಞಾಪಕ. ಇವರದು ಅಹಿಂಸಾಮಾರ್ಗ; ಒಲಿಸಿಕೊಳ್ಳುವ ಮಾರ್ಗ. ಇವರು ಯಾರನ್ನು ದಾರಿಯಲ್ಲಿ ಕಂಡರೂ ಅವರೊಂದಿಗೆ ಗಂಟೆಗಟ್ಟಲೆ ಸ್ವರಾಜ್ಯ ಸ್ವದೇಶಿ ಗ್ರಾಮಗಳ ಏಳಿಗೆಯ ವಿಚಾರಗಳನ್ನು ಚರ್ಚಿಸುತ್ತ ಆ ಅಂಶಗಳತ್ತ ಅವರ ಮನಸ್ಸನ್ನು ತಿರುಗಿಸಲು ಪ್ರಯತ್ನಿಸುವರು. ಇವರ ಶ್ರದ್ಧೆ, ದೇಶಪ್ರೇಮ, ತ್ಯಾಗ, ಸೇವಾಬುದ್ಧಿ ಇವು ಇವರ ಬಾಲ್ಯದಿಂದಲೇ ಪ್ರಕಟವಾಗಿತ್ತು. ಜನರಿಗೆಲ್ಲ ಇವರಲ್ಲಿ ಪೂರ್ಣ ನಂಬಿಕೆ ಹುಟ್ಟಿ ಇವರು ಅತ್ಯಂತ ಪ್ರಾಮಾಣಿಕ ಕೆಲಸಗಾರರೆಂಬುದು ಅವರಿಗೆ ಮನದಟ್ಟಾಯಿತು. ತನ್ನ ಸೇವೆಗಾಗಿ ಏನನ್ನೂ ಪ್ರತಿಫಲ ಬಯಸದೆ, ಸ್ವಂತವಾದ ಗುರಿ, ಆಸೆ ಏನೂ ಇಲ್ಲದೆ ಮನೆ-ಮಠ, ಡಿಗ್ರಿ, ಅಧಿಕಾರ, ಹಿಂಬಾಲಕರು ಯಾರೂ ಇಲ್ಲದಿದ್ದರೂ ದೇಶಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡವರೆಂದರೆ ತಗಡೂರು ರಾಮಚಂದ್ರರಾಯರು ಎಂಬುದು ಜನಜನಿತವಾಗಿ ಪ್ರಚಾರವಾಯಿತು. ಯಾವ ವಿಧವಾದ ಬಾಹ್ಯ ಉಪಕರಣಗಳಾಗಲೀ, ಪತ್ರಿಕೆಗಳಾಗಲೀ ಅನುಯಾಯಿಗಳ ತಂಡವಾಗಲೀ ಪ್ರಚಾರ ಸಾಧನಗಳಾಗಲೀ ಇಲ್ಲದೆ ಬರಿಯ ತಮ್ಮ ಅಂತಃಕರಣ ಶುದ್ಧಿಯಿಂದ ಏಕಾಂಗಿಯಾಗಿ ಕೆಲಸ ಮಾಡಿದ ರಾಯರ ಸಂದೇಶ ಜನತೆಯ ಹೃದಯವನ್ನು ಮುಟ್ಟಿತು. ಇವರ ಸ್ವಂತ ಊರಾದ ತಗಡೂರಿನಲ್ಲಿಯೇ ಇವರು ಜನಪ್ರಿಯ ಸೇವಕರೆಂಬ ಹೆಸರುಗಳಿಸಿದರು.

ಗಾಂಧೀಜಿ ಭಾರತದಲ್ಲಿ ತಮ್ಮ ಕಾರ್ಯಕ್ರಮಗಳನ್ನು ಪ್ರಾರಂಭಿಸಿ, ಅದರ ಪ್ರಭಾವ ದೇಶದ ಮೇಲೆ ಬಿದ್ದಂತೆಲ್ಲ ತಗಡೂರರು ಆ ಕಾರ್ಯಗಳಿಗೆ ತಮ್ಮ ಬಾಳನ್ನು ಅರ್ಪಿಸಿಕೊಂಡರು. ಆ ಕಾಲದಲ್ಲಿ ಅವರು ತಮ್ಮ ಪರಿಸರದ ಗ್ರಾಮಾಂತರ ಜನರ, ಅವರಲ್ಲಿಯೂ ಮುಖ್ಯವಾಗಿ ಹರಿಜನರ ಸೇವೆ ಏಳಿಗೆಗಾಗಿ ತಮ್ಮ ಆಯಸ್ಸನ್ನು ವಿನಿಯೋಗಿಸಿದರು. ಕೈಗಾರಿಕೆಗಳು ನಶಿಸಿ ಹೋಗಿದ್ದ ಗ್ರಾಮಾಂತರಗಳಲ್ಲಿ ಗೃಹಕೈಗಾರಿಕೆ

ಗುಡಿಕೈಗಾರಿಕೆಗಳ ಪುನರುಜ್ಜೀವನವನ್ನು ಪ್ರಾರಂಭಿಸಿದರು. ಒಂದೆಡೆ ಜನತೆಯನ್ನು ಸ್ವಾತಂತ್ರ್ಯ ಸ್ವರಾಜ್ಯಕ್ಕೆ ಪ್ರೇರಿಸುವುದು, ಮತ್ತೊಂದೆಡೆ ಸ್ವರಾಜ್ಯದ ಎರಡನೆ ಅಂಗವಾದ ಸ್ವಾವಲಂಬನೆಗಾಗಿ ಹಳ್ಳಿಗರನ್ನು ಸಿದ್ಧಗೊಳಿಸುವುದು ಇವೆರಡೂ ಅವರ ಮುಖ್ಯ ಕಾರ್ಯಗಳಾದವು. ಗ್ರಾಮಗಳ ಜನತೆಯ ಮೂಢಭಕ್ತಿ, ನಿರಕ್ಷರತೆ, ಅಸ್ವಚ್ಛತೆ, ಕುಡಿಯುವ ನೀರಿನ ಅಭಾವ ಇವುಗಳನ್ನೆಲ್ಲ ಪರಿಹರಿಸುವುದಕ್ಕೂ ಗೋರಕ್ಷಣೆ, ಪಾನನಿರೋಧಗಳಿಗೂ ಇವರು ತಮ್ಮ ಚಟುವಟಿಕೆಗಳನ್ನು ಹರಿಸಿದರು. ಇವುಗಳ ಜೊತೆಗೆ ಸ್ವಾತಂತ್ರ್ಯ ಸಾಧನೆಯ ಹೋರಾಟ, ಭಾಷಣಗಳು, ಲೇಖನಗಳು, ಪ್ರಚಾರಕಾರ್ಯ ಇವು ನಡೆದೇ ಇದ್ದವು. ಈ ಎಲ್ಲ ಕಾರ್ಯಗಳೂ ಸರ್ಕಾರಕ್ಕೆ ಅಪ್ರಿಯವಾಗಿ ಪೋಲೀಸರು ಅವರಿಗೆ ಸತತವಾಗಿ ಕಿರುಕುಳ ಕೊಡುತ್ತಲೇ ಇದ್ದರು. ಗಾಂಧೀಜಿ ಪ್ರಾರಂಭಿಸಿದ ಪ್ರಥಮ ಅಸಹಕಾರ ಚಳವಳಿಯಲ್ಲಿ ಶ್ರೀ ತಗಡೂರು ರಾಮಚಂದ್ರರಾಯರು ದೇಶದ ನಾನಾ ಭಾಗಗಳಲ್ಲಿ, ಕಾಲು ನಡಿಗೆಯಲ್ಲಿಯೇ ಸಂಚರಿಸಿ ಅಸಹಕಾರ ಪ್ರಚಾರಕಾರ್ಯವನ್ನು ನಡೆಸಿದರು. ಈ ಎಲ್ಲ ಕಾರ್ಯಗಳನ್ನೂ ತಗಡೂರರು ಏಕಾಂಗಿಯಾಗಿ ಸ್ವಶಕ್ತಿ, ಆತ್ಮಪ್ರತ್ಯಯ ಸೇವಾಬುದ್ಧಿ ದೈವಭಕ್ತಿಯಿಂದ ನೆರವೇರಿಸಿದರು. ನಮ್ಮ ದೃಷ್ಟಿಯಲ್ಲಿ ಅವರೇ ಒಬ್ಬ 'ಛೋಟಾ ಗಾಂಧಿ'ಯಾಗಿದ್ದರು.

ಗಾಂಧೀಜಿಯ ಚಳವಳಿ, ಅಖಿಲ ಭಾರತಕ್ಕೆ ಹಾಕಿಕೊಟ್ಟ ಮಾರ್ಗದರ್ಶನಕ್ಕನುಗುಣವಾಗಿ ತಗಡೂರರರೂ ತಮ್ಮ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡರು. ೧೯೨೫ರ ವೇಳೆಗೆ ಅವರು 'ತಗಡೂರು ಆಶ್ರಮ ಖಾದೀಕೇಂದ್ರ'ವನ್ನು ತೆರೆದರು. ತಗಡೂರರು ಒಳ್ಳೆಯ ವ್ಯವಸ್ಥಾಪಕರು. ಅವರ ಖಾದಿಸಂಸ್ಥೆ ಬಹುಬೇಗ ಸರ್ವಜನಪ್ರಿಯವೂ ಗ್ರಾಮಗಳ ನಿರುದ್ಯೋಗ ನಿವಾರಣೆಗೆ ಸಾಧಕವೂ ಆಯಿತು. ಮೈಸೂರು ಸರ್ಕಾರದವರೇ ಆಗ ತಗಡೂರಿಗೆ ಐದು ಮೈಲಿ ದೂರವಿದ್ದ ಬದನವಾಳಿಯಲ್ಲಿ ಖಾದೀಕೇಂದ್ರವನ್ನು ತೆರೆದರು. ಸರ್ಕಾರವೆಂದ ಮೇಲೆ ಅದಕ್ಕೆ ಬೇಕಾದ ಹಣ ಸಹಾಯ, ಕಟ್ಟಡ, ವಾಹನ ಸಂಬಳದ ಸಿಬ್ಬಂದಿ, ಮೂಲಧನ ಎಲ್ಲ ಇದ್ದೇ ಇರುತ್ತದೆ. ಆದರೆ ಬೈರಾಗಿಯಾಗಿ ಅರ್ಧಬೆತ್ತಲೆಯಿದ್ದ ತಗಡೂರರಿಗೆ ಆ ಸೌಕರ್ಯಗಳೆಲ್ಲ ಎಲ್ಲಿ ದೊರೆಯಬೇಕು? ಆದರೆ ತಗಡೂರರು ಧೃತಿಗೆಡಲಿಲ್ಲ. ಅವರ ಪ್ರಾಮಾಣಿಕತೆಯಿಂದಲೇ ಅವರಿಗೆ ಸಾರ್ವಜನಿಕರಿಂದ ಧನ ಸಹಾಯವೂ, ಕೆಲಸಗಾರರೂ ದೊರಕಿದರು. ಮಿತವ್ಯಯ ಮತ್ತು ದಕ್ಷತೆಯಿಂದ ತಗಡೂರರು ನೇಕಾರರಿಗೂ, ನೂಲುವವರಿಗೂ ಅಖಿಲ ಭಾರತ ಚರಕಸಂಘದ ನಿಯಮದಂತೆ ಕೂಲಿಕೊಟ್ಟೂ ಸಹ ಖಾದಿಯನ್ನು ಚರಕಸಂಘ ನಿಯಮಿಸಿದ ಬೆಲೆಗೆ ಮಾರುತ್ತಿದ್ದರು. ತಗಡೂರು ಖಾದಿ ಉತ್ತಮವೂ, ಜನಪ್ರಿಯವೂ ಆಗಿತ್ತು. ತಗಡೂರು

ಖಾದೀಕೇಂದ್ರ, ಎಲ್ಲ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡಿತು. ಹರಿಜನರು ಹಿಂದುಳಿದವರು ದೀನದಲಿತರ ಸೇವೆ, ತಗಡೂರರ ಮುಖ್ಯ ಗುರಿಯಾಗಿದ್ದಿತು. ಅವರು ಅಲ್ಲಲ್ಲಿ ಹರಿಜನ ಸಮ್ಮೇಳನಗಳನ್ನು ನಡೆಸಿ ಸಮಾಜದಲ್ಲಿ ಅವರಿಗೆ ಸಮಾನ ಸ್ಥಾನವನ್ನು ಕೊಡಿಸಲು ಪ್ರತಿಪಾದಿಸಿದರು. ಈ ಮಾಲಿಕೆಯಲ್ಲಿ ಸುಮಾರು ನಲವತ್ತು ವರುಷಗಳ ಕೆಳಗೆ ತಿರುಮಕೂಡಲು ನರಸೀಪುರದ ತೋಪಿನಲ್ಲಿ ನಡೆದ ಸಂಸ್ಥಾನದ ಕಣಿಯರ ಸಮ್ಮೇಳನ ಒಂದು ಮೈಲಿಕಲ್ಲು. ಅದು, ಸಮಾಜದ ಹಿಂದುಳಿದ ವರ್ಗದವರ ಪ್ರತಿಭಟನೆ ಆತ್ಮಗೌರವದ ಕುರುಹಾಗಿತ್ತು. ಆ ಸಮ್ಮೇಳನಕ್ಕೆ ಮುಖ್ಯ ಸ್ಫೂರ್ತಿ ನೀಡಿದವರು ಶ್ರೀ ತಗಡೂರರು. ತಗಡೂರು ಆಶ್ರಮದಲ್ಲಿ ಹರಿಜನರು ಮೇಲುವರ್ಣದವರು ಎಂಬ ವ್ಯತ್ಯಾಸವಿರಲಿಲ್ಲ. ಇದರಿಂದ ಕೆಲವು ದಾನಿಗಳು ಸ್ವಲ್ಪಕಾಲ ತಗಡೂರರಿಂದ ವಿಮುಖರಾಗಿದ್ದರೂ, ಕೊನೆಗೆ ತಗಡೂರರ ಪ್ರಾಮಾಣಿಕತೆ, ಉದ್ದೇಶದ ಸ್ವಚ್ಛತೆ, ಹರಿಜನ ಗಿರಿಜನರ ಅಭಿವೃದ್ಧಿಯ ಆವಶ್ಯಕತೆ, ಸರ್ವಸಮಾನತೆ ಇವುಗಳನ್ನು ಮನದಟ್ಟು ಮಾಡಿಕೊಂಡ ನಂತರ ಮತ್ತೆ ತಗಡೂರರ ಮಿತ್ರರೇ ಆಗಿ ತಮ್ಮ ಕೈಲಾದ ಸಹಾಯವನ್ನು ಮುಂದುವರಿಸತೊಡಗಿದರು.

ಭಾರತದಲ್ಲಿ ಗಾಂಧೀಜಿಯ ಚಳವಳಿ ಪ್ರಬಲವಾಗುತ್ತ ಹೋದಂತೆ, ದೇಶೀಯ ಸಂಸ್ಥಾನದ ರಾಜರೂ ಸಹ ಇಲ್ಲಿಯ ಜನತೆಯ ಸ್ವಾತಂತ್ರ್ಯ ಹೋರಾಟವನ್ನು ಅಡಗಿಸಲು ಬ್ರಿಟಿಷ್ ಸರ್ಕಾರದಿಂದ ಪ್ರೇರಿತರಾದರು. ಜನಜಾಗೃತಿ, ಸ್ವಾತಂತ್ರ್ಯ, ಜವಾಬ್ದಾರಿ ಸರ್ಕಾರಗಳಿಗಾಗಿ ತಗಡೂರರ ಭಾಷಣ, ಲೇಖನ, ಹಸ್ತಪತ್ರಿಕೆ, ಬಿಡಿಬಿಡಿ ಹೊತ್ತಿಗೆಗಳು ನಡೆದೇ ಇದ್ದವು. ಉಪ್ಪಿನ ಸತ್ಯಾಗ್ರಹದ ಕಾಲದಲ್ಲಿ ಸರ್ಕಾರದ ಕ್ರೂರ ದೃಷ್ಟಿ ಪತ್ರಿಕೆಗಳ ಮೇಲೆ ಬಿದ್ದಿತು. ಸ್ವಾತಂತ್ರ್ಯ ಸಂಗ್ರಾಮದ ಸುದ್ದಿಯ ಪ್ರಕಟನೆಗೆ ಸಹ ಸರ್ಕಾರದಿಂದ ತಡೆಯುಂಟಾಯಿತು. ಸರ್ಕಾರ, ಪ್ರೆಸ್ ಆಕ್ಟಿನ ಕ್ರೂರ ವಿಧಿಗಳಿಗೆಲ್ಲ ಮತ್ತೆ ಚೇತನವಿತ್ತಿತು. ತಗಡೂರರ ಲೇಖನಗಳನ್ನು ಯಾವ ಪತ್ರಿಕೆಯೂ ಪ್ರಕಟಿಸಲು ಹಿಂಜರಿಯಿತು. ಕೊನೆಗೆ ತಗಡೂರು ರಾಮಚಂದ್ರರಾಯರೇ ಒಂದು ಪ್ರೆಸ್ (ಮುದ್ರಣಾಲಯ) ಸ್ಥಾಪಿಸಿ ಅಲ್ಲಿ ತಮ್ಮ ಪತ್ರಿಕೆ ನಡೆಸತೊಡಗಿದರು. ಅದರ ವಿವರಣೆಯೇ ಒಂದು ದೊಡ್ಡ ರೋಮಾಂಚಕಾರೀ ಇತಿಹಾಸವಾದೀತು. ನಿತ್ಯ ಒಂದೊಂದು ಮುದ್ರಣಾಲಯದ ಮುಟ್ಟುಗೋಲು, ಆದರೂ ನಿತ್ಯ ತಗಡೂರರ ಹೊಸ ಹೊಸ ಹೆಸರಿನ ಪತ್ರಿಕೆಗಳ ಪ್ರಕಟನೆ. ಹೀಗೆ ಅನೇಕ ಸಲ (ಹದಿನೆಂಟು ಸಲವೆಂದು ಜ್ಞಾಪಕ) ಸರ್ಕಾರ ರಾಮಚಂದ್ರರಾಯರ ಮುದ್ರಣಾಲಯಗಳನ್ನು ಮುಟ್ಟುಗೋಲು ಹಾಕಿಕೊಂಡಿತೇ ವಿನಾ; ಪತ್ರಿಕೆಯನ್ನು ನಿಲ್ಲಿಸಲು ಸಮರ್ಥವಾಗಲಿಲ್ಲ. ಸರ್ ಮಿರ್ಜಾ ಇಸ್ಮಾಯಿಲ್ ಸರ್ಕಾರ ಇವರನ್ನು ಇಪ್ಪತ್ತು ಮುವತ್ತು ಸಲವಾದರೂ ಸೆರೆ

ಹಿಡಿದು ಮತ್ತೆ ಮತ್ತೆ ಬಿಟ್ಟುದುಂಟು. ರಾಷ್ಟ್ರ ಜಾಗೃತಿಯ ಯಾವ ಕಾರ್ಯವನ್ನು ಮಾಡುವ ಅವಕಾಶವನ್ನೂ ಅವರು ಕಳೆದುಕೊಂಡವರಲ್ಲ. ಹ್ಯಾಮಿಲ್ಟನ್‌ರವರ ಹೆಸರನ್ನು ಒಂದು ಕಟ್ಟಡಕ್ಕೆ ಇಟ್ಟುದರಿಂದ ಭಾರತೀಯರ ರಾಷ್ಟ್ರಾಭಿಮಾನಕ್ಕೆ ಅವಮಾನವಾಯಿತೆಂದು ಮೈಸೂರಿನಲ್ಲಿ ಸತ್ಯಾಗ್ರಹವನ್ನು ಹೂಡಿ ನೂರಾರು ಸ್ವಯಂಸೇವಕರೊಂದಿಗೆ ಸೆರೆಮನೆ ಸೇರಿದರು.

ಶ್ರೀಮಾನ್ ತಗಡೂರು ರಾಮಚಂದ್ರರಾಯರು ಅತ್ಯುತ್ತಮ ಸಂಘಟನಕಾರರು. ಮೈಸೂರು ಕಾಂಗ್ರೆಸ್‌ನ ಸ್ಥಾಪಕರಲ್ಲಿ ಒಬ್ಬರು. ಅವರು ಹಾಕಿದ ಅಡಿಪಾಯದಿಂದ ೧೯೪೭ನೆ ಸೆಪ್ಟಂಬರಿನಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿತವಾಯಿತು.

ತಗಡೂರು ರಾಮಚಂದ್ರರಾಯರು ಪ್ರಾರಂಭದ ದೆಸೆಯಿಂದಲೂ ಮಹಾರಾಜರ ನಿರಂಕುಶ ಪ್ರಭುತ್ವವನ್ನು ಎದುರಿಸಿದವರು. ದೇಶೀಯ ರಾಜರ ಬೇಜವಾಬ್ದಾರಿ ವರ್ತನೆ, ದುಂದುವೆಚ್ಚ, ಸಾರ್ವಜನಿಕ ಬೊಕ್ಕಸದ ಲೂಟಿ, ಕುದುರೆ ಜೂಜು, ಪರದೇಶದಲ್ಲಿ ಮೋಜು ಇತರ ನಾನಾ ರೀತಿಯ ದುರಾಚಾರಗಳನ್ನೆಲ್ಲ, ಅವರು ಅಂಕಿ ಅಂಶಗಳನ್ನು ಪ್ರಕಟಿಸಿ ಪ್ರತಿಭಟಿಸಿದರು. ಸೆರೆಮನೆಯಲ್ಲಿದ್ದರೂ ಸಹ ಅವರು ರಾಷ್ಟ್ರಜಾಗೃತಿಯ ಕಾರ್ಯದಲ್ಲಿ ತೊಡಗಿರುತ್ತಿದ್ದರು. ೧೯೪೨ನೆ ಸಂವತ್ಸರದ "ಭಾರತದಿಂದ ತೊಲಗಿ" ಚಳವಳಿಯಲ್ಲಿ ಸರ್ಕಾರದವರು ರಾಮಚಂದ್ರರಾಯರನ್ನು ಬಂಧಿಸಿ ಹಾಸನದ ಸೆರೆಮನೆಗೆ ಕರೆತಂದರು. ಆಗ ಹಾಸನದ ಸೆರೆಮನೆ ತುಂಬ ಪ್ರಸಿದ್ಧವಾಗಿತ್ತು. ಯಾಕೆಂದರೆ ಮೈಸೂರು ಕಾಂಗ್ರೆಸ್‌ನ ಮುಖಂಡರನ್ನೆಲ್ಲ ಸರ್ಕಾರ ಹಾಸನದ ಸೆರೆಮನೆಯಲ್ಲಿಟ್ಟಿತ್ತು.

ವಿನೋಬಾ ಭಾವೆಯವರ ಗ್ರಾಮದಾನ ಚಳವಳಿಗೆ ಬಹಳ ಮುಂಚಿನಿಂದಲೂ ಸಹ ರಾಮಚಂದ್ರರಾಯರು ಗ್ರಾಮ ಸ್ವರಾಜ್ಯದ ಧ್ಯೇಯವನ್ನು ದೇಶದ ಮುಂದಿಟ್ಟು ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಈ ವಿಷಯದ ಮೇಲೆ ಅವರು ವಿಪುಲವಾಗಿ ಚರ್ಚೆ ಹೇಳಿಕೆ ಪ್ರಕಟನೆಗಳನ್ನು ಕೊಟ್ಟಿದ್ದಾರೆ. ಅವರು ಯಾವಾಗಲೂ ಅದೇ ವಿಷಯವನ್ನು ಕುರಿತು ಚಿಂತಿಸುತ್ತಿರುತ್ತಾರೆ. ಅವರ ಜೀವನ ತೆರೆದ ಬುಕ್ಕು.. ಅದರಲ್ಲಿ ರಹಸ್ಯವೆಂಬುದು ಇಲ್ಲ.. ಒಂದು ಕಾಲದಲ್ಲಿ ಸಂಸಾರಿಯಾಗಬೇಕೆಂಬ ಹಂಬಲವೂ ಅವರಿಗೆ ಹುಟ್ಟಿತು. ತಮಗೆ ಎಂತಹ ಹೆಂಡತಿ ಬೇಕೆಂಬುದನ್ನು ಪತ್ರಿಕೆಗಳಲ್ಲಿ ಸಹ ಜಾಹೀರು ಮಾಡಿ ಒಪ್ಪಿಗೆಯಾದ ಹೆಣ್ಣನ್ನು ಸರಳ ಸಮಾರಂಭದಲ್ಲಿ ಕೈಹಿಡಿದರು. ಸಂಸಾರದಲ್ಲಿದ್ದರೂ ಅವರು ಒಂದು ರೀತಿಯಲ್ಲಿ ಅನಾಸಕ್ತರಾಗಿ ಇದ್ದರು. ಪತ್ನೀವಿಯೋಗವನ್ನೂ ಪ್ರಕೃತಿನಿಯಮವೆಂಬಂತೆ ಸಹಿಸಿಕೊಂಡರು. ಸಂಸಾರಬಂಧನವಿದ್ದರೂ ಇಲ್ಲದಂತಿರುವುದು ಅವರಿಗೆ ಅಭ್ಯಾಸವಾಗಿದೆ. ಹಾಗೆ "ತಾವರೆಯ ಮೇಲಿನ ನೀರಿನ ಹನಿ" ಎಂಬ ಮಾತನ್ನು ಕೇಳಿದ್ದೇವೆಯಷ್ಟೆ.

ತಗಡೂರು ರಾಮಚಂದ್ರರಾಯರು ವ್ಯವಹಾರಕುಶಲರೂ ಹೌದು. ಅವರು ಯಾವುದನ್ನೂ ಪೋಲು ಮಾಡುವವರಲ್ಲ. ದುಂದುವೆಚ್ಚ ಮಾಡುವವರಲ್ಲ. ತನಗಾಗಿ ಖರ್ಚು ಮಾಡುವವರಲ್ಲ. "ಜನ ನನಗೆ ಕೊಟ್ಟಿರುವ ಪ್ರತಿಯೊಂದು ಕಾಸನ್ನೂ ಒಂದು ರೂಪಾಯಿ ಎಂದು ಭಾವಿಸಿ ನಾನು ಖರ್ಚು ಮಾಡಬೇಕು" ಎಂದು ಅವರು ಹೇಳುತ್ತಾರೆ. ಖಾದಿ, ಎಣ್ಣೆ, ಗೃಹಕೈಗಾರಿಕೆ, ಗ್ರಾಮಕೈಗಾರಿಕೆಗಳಂತಹ ನಷ್ಟದಾಯಕವಾದ ಉದ್ಯೋಗಗಳಲ್ಲಿ ಸಹ, ಅವರು ಮಿತವ್ಯಯದಿಂದ ಪ್ರತಿಯೊಂದು ವೆಚ್ಚವನ್ನೂ ಕಣ್ಣಿಟ್ಟು ನೋಡಿ, ಅಖಿಲ ಭಾರತ ಚರಕ ಸಂಘದ ನಿಯಮಗಳಿಗನುಗುಣವಾಗಿಯೇ ಲಾಭವಿಟ್ಟು ಮಾರಿ, ಹಣ ಯಾವುದಾದರೂ ತಮ್ಮಲ್ಲಿ ಉಳಿದಿದ್ದಿದ್ದರೆ ಅದನ್ನು ಸಾರ್ವಜನಿಕರಿಗೇ ಹಿಂದಿರುಗಿಸುತ್ತಾರೆಂಬುದು ಅವರನ್ನು ತಿಳಿದವರಿಗೆಲ್ಲ ಚೆನ್ನಾಗಿ ಗೊತ್ತು.

ಸಾಂಪ್ರದಾಯಿಕ ದೃಷ್ಟಿಯಿಂದ ನೋಡಿದರೆ, ರಾಮಚಂದ್ರರಾಯರು ಇಂಗ್ಲಿಷ್ ಸಂಸ್ಕೃತ - ಕೊನೆಗೆ ಕನ್ನಡದಲ್ಲಿ ಸಹ ವಿದ್ಯಾವಂತರಲ್ಲ. ಆದರೆ ಅವರು ಯಾವ ವಿಷಯವನ್ನೂ ತುಂಬ ಶ್ರದ್ಧೆಯಿಂದ ಆಸಕ್ತಿಯಿಂದ ಚರ್ಚಿಸಿ ತಮ್ಮ ವಾದಕ್ಕೆ ನಮ್ಮ ಮನಸ್ಸನ್ನು ಸೆಳೆಯುವ ಶಕ್ತಿಯುಳ್ಳವರಾಗಿದ್ದಾರೆ. ಅವರಿಗೆ ವಿವೇಕವೂ, ಜ್ಞಾನವೂ ಅಪಾರವಾಗಿದೆ. ಅವರು ಒಳ್ಳೆ ಸ್ನೇಹಪರರು; ವಿನೋದಿಗಳೂ ಹೌದು. ಸಂಭಾಷಣೆಯಲ್ಲಿ ಬೇಕಾದಷ್ಟು ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾರೆ. ಎಂತಹ ಕಷ್ಟಕ್ಕೂ ಎದೆಗುಂದುವವರಲ್ಲ. ಯಾವ ಲೋಭಕ್ಕೂ ವಶರಾಗುವವರಲ್ಲ. ಗಾಂಧೀಯುಗದಲ್ಲಿ ನಮಗೆ ದೊರೆತ ಅನೇಕ ಶುಭಗಳಲ್ಲಿ ರಾಮಚಂದ್ರರಾಯರು ಒಂದು ದೊಡ್ಡ ನಿಧಿ.

**ಲೇಖಕರ ಪರಿಚಯ**

ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದ (೧೯೦೪-೧೯೯೧) ಗೊರೂರು ರಾಮಸ್ವಾಮಿ ಅಯ್ಯಂಗಾರರು ಕನ್ನಡನಾಡಿನ ಸಾಹಿತ್ಯದ ದಿಗ್ಗಜಗಳಲ್ಲಿ ಒಬ್ಬರು. ಕಥೆ, ಕಾದಂಬರಿ, ಹರಟೆ, ಪ್ರಬಂಧ, ವಿಮರ್ಶೆ, ಪ್ರವಾಸಕಥನ - ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ವಿದ್ಯಾಭ್ಯಾಸದ ವೇಳೆಯಲ್ಲಿಯೇ ಸ್ವಾತಂತ್ರ್ಯ ಹೋರಾಟದ ಆಕರ್ಷಣೆಗೆ ಸಿಲುಕಿ ವಿದ್ಯಾಭ್ಯಾಸಕ್ಕೆ ವಿದಾಯ ಹೇಳಿದರು. ಜೈಲುವಾಸದ ಸವಿ ಅನುಭವಿಸಿದರು. ಮುಂದೆ ಮದ್ರಾಸು ವಿಶ್ವವಿದ್ಯಾಲಯದಿಂದ ವಿದ್ವಾನ್ ಪರೀಕ್ಷೆಗೆ ಬರೆಯುವ ವೇಳೆಗೆ ಅವರೇ ಬರೆದ 'ನಮ್ಮ ಊರಿನ ರಸಿಕರು' ಕೃತಿಯನ್ನು ಪಠ್ಯಪುಸ್ತಕವಾಗಿ ಓದಬೇಕಾಯಿತು. ಹಳ್ಳಿಯ ಚಿತ್ರಗಳು, ಬೈಲಹಳ್ಳಿಯ ಸರ್ವೆ, ಹೇಮಾವತಿ, ಅಮೆರಿಕಾದಲ್ಲಿ ಗೊರೂರು - ಮುಂತಾದವು ಗೊರೂರರ ಪ್ರಮುಖ ಕೃತಿಗಳು. ಶ್ರೀಯುತರು ೧೯೮೨ರಲ್ಲಿ ಶಿರಸಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಗೊರೂರರು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನೂ ಗಳಿಸಿದ್ದರು.

ಪ್ರಸ್ತುತ ಲೇಖನವನ್ನು ಕರ್ಮಯೋಗಿ - ತಗಡೂರು ರಾಮಚಂದ್ರರಾಯರ ಆತ್ಮಕಥನ ಮತ್ತು ಅಭಿನಂದನ ಗ್ರಂಥ (ಸಂ. ಎಂ. ಎನ್. ಜೋಯಿಸ್)ದಿಂದ ಆಯ್ದುಕೊಳ್ಳಲಾಗಿದೆ.

ಪೀಠಿಕೆ

*ರಾಮಚಂದ್ರರಾಯರ ಹೆಸರಿನ ಹಿಂದೆ 'ತಗಡೂರು' ಸೇರಿಕೊಳ್ಳಲು ಅವರು ತಗಡೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡಿದ್ದೇ ಕಾರಣ. ಚಾಮರಾಜನಗರ ತಾಲ್ಲೂಕಿನ ಕುದೇರುವಿನಲ್ಲಿ ೧೮೮೮ರಲ್ಲಿ ಜನಿಸಿದರು. ೧೯೧೮ರಲ್ಲಿ ಸ್ವದೇಶೀ ವಸ್ತುಗಳನ್ನು ತಳ್ಳುಗಾಡಿಯಲ್ಲಿಟ್ಟು ಮಾರಾಟ ಮಾಡುವ ಮೂಲಕ 'ಸ್ವದೇಶಿ ಚಳವಳಿ' ಪ್ರಾರಂಭಿಸಿದರು. ಖಾದಿ ಸಹಕಾರಸಂಘ ಸ್ಥಾಪನೆ, ಕಣಿಯರ ಹೋರಾಟ, ಪ್ರೆಸ್ ಆಕ್ಟ್ ಸತ್ಯಾಗ್ರಹ, ಮೈಸೂರಿನ ಸೈಮನ್ ಕಮಿಷನ್ನಿನ ಬಹಿಷ್ಕಾರ, ಶಿವಪುರ ಧ್ವಜ ಸತ್ಯಾಗ್ರಹ, ಭಾರತವನ್ನು ಬಿಟ್ಟು ತೊಲಗಿ, ವಿನೋಬಾ ಜತೆ 'ಭೂದಾನ - ಗ್ರಾಮದಾನ' - ಚಳವಳಿಯ ಯಾತ್ರೆ - ಮುಂತಾದುವುಗಳಲ್ಲಿ ತಗಡೂರು ರಾಮಚಂದ್ರರಾಯರು ಮುಖ್ಯ ಪಾತ್ರವಹಿಸಿದ್ದರು. ಇಂದಿನ ಯುವಪೀಳಿಗೆಗೆ ಸ್ವಾತಂತ್ರ್ಯ ಹೋರಾಟದ ಮಹತ್ವವನ್ನು ತಿಳಿಹೇಳುವುದೇ ಈ ಪಠ್ಯಭಾಗದ ಆಶಯವಾಗಿದೆ.*

**ಶಬ್ದಾರ್ಥ :**

ಸಂಕೇತ - ಗುರುತು; ಪ್ರತೀಕ - ಪ್ರತಿರೂಪ; ವಂಗ - ಬಂಗಾಳ; ಜಂಗಮಮೂರ್ತಿ - ಶೈವ ಸನ್ಯಾಸಿ, ಸಂಚಾರಿ; ಅಂಕಿತವಾಗು - ಗುರುತು ಮಾಡು; ಚಂದಾ - ವಂತಿಗೆ; ವಗೈರೆ - ಇತ್ಯಾದಿ; ಅನುಯಾಯಿ - ಹಿಂಬಾಲಕ; ಬೈರಾಗಿ - ವಿರಕ್ತ; ಮಿತವ್ಯಯ - ಕಡಿಮೆ ಖರ್ಚು ಮಾಡುವುದು; ಪ್ರೆಸ್ ಆಕ್ಟ್ - ಪತ್ರಿಕಾ ಕಾನೂನು; ಸಂವತ್ಸರ - ವರ್ಷ.

**ಟಿಪ್ಪಣಿ :**

ಸ್ವಾವಲಂಬನೆ - ನಮಗೆ ನಾವೇ ಆಧಾರವಾಗುವುದು.

ಅಸಹಕಾರ ಚಳವಳಿ - ಬ್ರಿಟಿಷರಿಗೆ ಆಡಳಿತದಲ್ಲಿ ಸಹಕಾರ ಕೊಡದೆ ನಡೆಸುವ ಹೋರಾಟ.

ಕಣಿಯರು - ಹಿಂದುಳಿದ ಒಂದು ವರ್ಗ.

ಮುಟ್ಟುಗೋಲು - ಕಾನೂನು ಬಾಹಿರವಾದುದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು.

## ಅಭ್ಯಾಸ

**ಪ್ರಶ್ನೆಗಳು :**

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ತಗಡೂರು ರಾಮಚಂದ್ರರಾಯರ ಉಡುಪು ಯಾವುದನ್ನು ಪ್ರತಿನಿಧಿಸುತ್ತಿದ್ದಿತು?

೨. ಮಾರಿಯಮ್ಮನ ಪೂಜಾರಿಯಂತೆ ರಾಯರು ಕಾಣುತ್ತಿದ್ದದ್ದು ಏಕೆ?

೩. ರಾಯರು ಕೈಗಾಡಿಯಲ್ಲಿ ಏನನ್ನು ಮಾರುತ್ತಿದ್ದರು?

೪. ಕಣಿಯರ ಮೊದಲ ಸಮ್ಮೇಳನ ಎಲ್ಲಿ ನಡೆಯಿತು?

೫. 'ಗಾಂಧಿಯುಗದಲ್ಲಿ ದೊರೆತ ದೊಡ್ಡ ನಿಧಿ' ಯಾರು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಜನರ ಮನಸ್ಸನ್ನು ತಿರುಗಿಸಲು ರಾಯರು ಏನು ಮಾಡುತ್ತಿದ್ದರು?

೨. ರಾಯರು ಮಾಡಿದ ಎರಡು ಮುಖ್ಯ ಕಾರ್ಯಗಳು ಯಾವುವು?

೩. ರಾಯರನ್ನು 'ಧೋತಾ ಗಾಂಧಿ' - ಎಂದು ಏಕೆ ಕರೆದಿದ್ದಾರೆ?

೪. ರಾಯರನ್ನು 'ಪರಿಪೂರ್ಣ ವಿದ್ಯಾವಂತರು' - ಎಂದು ಏಕೆ ಕರೆಯುತ್ತಾರೆ?

೫. ತಗಡೂರರ ಸಾಂಸಾರಿಕ ಬದುಕನ್ನು ಕುರಿತು ತಿಳಿಸಿರಿ.

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ತಗಡೂರರನ್ನು ಲೇಖಕರು 'ಸ್ವದೇಶಿ ವ್ರತದ ಜಂಗಮಮೂರ್ತಿ' ಎಂದು ಕರೆಯಲು ಕಾರಣವೇನು?

೨. ತಗಡೂರು ಖಾದಿ ಕೇಂದ್ರ ಹೇಗೆ ಯಶಸ್ವಿಯಾಯಿತು?

೩. ಸುದ್ದಿ ಪ್ರಕಟಣೆಗಾಗಿ ತಗಡೂರರು ಮಾಡಿದ ಏರ್ಪಾಡುಗಳನ್ನು ವಿವರಿಸಿರಿ.

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.

೧. ನಿಮ್ಮ ರಾಜ್ಯವನ್ನು ತೊರೆದು ಚಳವಳಿಗೆ ಸೇರಿ.

೨. ಅವರು ಶುದ್ಧ ಜನಪದರು.

## ಭಾಷಾಭ್ಯಾಸ

ಅ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.

ಸಂಕೇತ, ಸ್ವದೇಶಿ, ಪ್ರಾಮಾಣಿಕ, ಪ್ರಚಾರ, ಸೇವಕ

ಆ. ಇವುಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.

ಅತ್ಯುತ್ಸಾಹ, ಹಾಸ್ಯವನ್ನು, ತಡೆಯುಂಟಾಯಿತು, ಮನಸ್ಸನ್ನು, ಏಕಾಂಗಿ

ಇ. ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಮರ್ಯಾದೆ, ಗೌರವ, ಲಕ್ಷ್ಯ, ಸ್ವಾವಲಂಬನೆ

ಈ. 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ | ಬ |
| --- | --- |
| ೧. ರಾಮಚಂದ್ರರಾಯರು | ಕಟ್ಟಡದ ಹೆಸರು |
| ೨. ಹ್ಯಾಮಿಲ್ಟನ್ | ಅಹಿಂಸಾಮಾರ್ಗ |
| ೩. ತಗಡೂರು | ಭಾರತದಿಂದ ತೊಲಗಿರಿ |
| ೪. ಮಹಾರಾಜರು | ಸ್ವಾತಂತ್ರ್ಯ ಹೋರಾಟಗಾರ |
| ೫. ಬ್ರಿಟಿಷರು | ಖಾದಿಗ್ರಾಮೋದ್ಯೋಗ ಕೇಂದ್ರ |
| | ನಿರಂಕುಶ ಪ್ರಭುತ್ವ |

ಉ. ಕೆಳಗಿನ ವಾಕ್ಯಗಳಿಗೆ ಲೇಖನ ಚಿಹ್ನೆ ಬಳಸಿರಿ.

ತಗಡೂರು ರಾಮಚಂದ್ರರಾಯರು ವ್ಯವಹಾರ ಕುಶಲರು ಹೌದು ಅವರು ಯಾವುದನ್ನೂ ಪೋಲು ಮಾಡುವವರಲ್ಲ ದುಂದುವೆಚ್ಚ ಮಾಡುವವರಲ್ಲ ತನಗಾಗಿ ಖರ್ಚು ಮಾಡುವವರಲ್ಲ ಜನ ನನಗೆ ಕೊಟ್ಟಿರುವ ಪ್ರತಿಯೊಂದು ಕಾಸನ್ನೂ ಒಂದು ರೂಪಾಯಿ ಎಂದು ಭಾವಿಸಿ ನಾನು ಖರ್ಚು ಮಾಡಬೇಕು ಎಂದು ಅವರು ಹೇಳುತ್ತಾರೆ.

## ಚಟುವಟಿಕೆ

೧. ಸ್ವಾತಂತ್ರ್ಯ ಹೋರಾಟಗಾರರಿಗೆ ಸಂಬಂಧಪಟ್ಟ ಲೇಖನಗಳನ್ನು ಸಂಗ್ರಹಿಸಿ ಓದಿರಿ.

೨. ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಸಂಗ್ರಹಿಸಿರಿ.

೩. ಪೂರಕ ಓದು

ಸಾಮಾನ್ಯವಾಗಿ ಕನ್ನಡ ಚಳುವಳಿಯನ್ನು ಇಪ್ಪತ್ತನೇ ಶತಮಾನಕ್ಕೆ ನಾವು ಸೀಮಿತಗೊಳಿಸಿಕೊಳ್ಳುತ್ತೇವೆ. ಮೊದಲು ಕರ್ನಾಟಕ ಏಕೀಕರಣ ಚಳುವಳಿ, ಆಮೇಲೆ ಕನ್ನಡ ಭಾಷೆಯ ಮೇಲ್ಮೆಗಾಗಿ ನಡೆದ ಚಳುವಳಿಯನ್ನು ನೆನೆಯುತ್ತೇವೆ. ಆದರೆ ಕನ್ನಡ ಚಳುವಳಿಯು ಸುಮಾರು ಎರಡು ಸಾವಿರ ವರ್ಷಗಳಷ್ಟು ಹಳಮೆಯನ್ನು ಪಡೆದಿದೆ ಎನ್ನುವುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಏಕೆಂದರೆ ಸಂಸ್ಕೃತ-ಪ್ರಾಕೃತಗಳಂತಹ ಪ್ರಾಚೀನ ಮಾತ್ರವಲ್ಲ; ವಿವಿಧ ಧಾರ್ಮಿಕ ಬರಹಗಳ ಭಾಷೆಗಳೊಡನೆ ತನ್ನ ಅಸ್ತಿತ್ವಕ್ಕಾಗಿ ಮೊದಲು ಸೆಣಸಿ ಆಮೇಲೆ ತನ್ನ ಮೇಲ್ಮೆಗಾಗಿ ಕನ್ನಡದಂತಹ ಜನಭಾಷೆಗಳು ಹೋರಾಡಬೇಕಾಯಿತು. ಚಳುವಳಿಯು ಎಲ್ಲ ಕಾಲದಲ್ಲೂ ಭಾಷೆಯ ಹೆಸರಿನಲ್ಲಿಯೇ ನಡೆಯಿತಂದೇನೋ ಅಲ್ಲ; ಮತ್ತು ಪ್ರಜ್ಞಾಪೂರ್ವಕವಾಗಿ ನಡೆಯಿತೆಂದೂ ಅಲ್ಲ. ಯಾಕೆಂದರೆ ಜನಭಾಷೆಯು ಜನರ ಆಶೋತ್ತರಗಳನ್ನು ಪ್ರತ್ಯೇಕಿಸುವುದರಿಂದ ಎಲ್ಲ ಜನಪರ ಚಳುವಳಿಗಳೂ ಆಯಾ ಜನರ ಭಾಷೆಗಳ ಪರವಾಗಿಯೂ ನಿಂತಿರುತ್ತದೆ.

ಡಾ. ಪಿ. ವಿ. ನಾರಾಯಣ

# ೨. ಉದ್ಯಾನರಾಣಿ - 'ಲಾಲ್‌ಬಾಗ್'

ದೇ. ಜವರೇಗೌಡ

**ಪ್ರವೇಶ**

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪರಿಸರ ಕಾಳಜಿಯ ಲೇಖನಗಳು ಹೆಚ್ಚಾಗಿ ಕಂಡು ಬರುತ್ತಿವೆ. ಆಧುನಿಕತೆಯ ಅಬ್ಬರದಲ್ಲಿ ಪರಿಸರ ಮಲಿನವಾಗುತ್ತಿರುವ ಸನ್ನಿವೇಶದಲ್ಲಿ ಇದು ಸಹಜವೇ ಆಗಿದೆ. ಇದಕ್ಕೆ ಪರ್ಯಾಯ ಮಾರ್ಗವೆಂದರೆ ಸಸ್ಯ ಸಮೃದ್ಧಿ. ಇದರಿಂದ ಪರಿಸರ ಮಾಲಿನ್ಯದ ಮೂಲಕ್ಕೇ ತಡೆಯನ್ನೊಡ್ಡಬಹುದು. ಕನ್ನಡ ಸಾಹಿತ್ಯವೂ ನಾಟಕ, ಲೇಖನ, ಕವಿತೆಗಳ ಮೂಲಕ ಇದಕ್ಕೆ ಸ್ಪಂದಿಸಿದೆ. ಇಂದು 'ಪರಿಸರ ವಿಜ್ಞಾನ' ಎಂಬ ಪ್ರತ್ಯೇಕ ಶಾಖೆಯೇ ತಲೆಯೆತ್ತಿರುವುದನ್ನು ಗಮನಿಸಿದರೆ, ಪರಿಸರ ಜಾಗೃತಿ ಇಂದು ಹಿಂದಿಗಿಂತ ಹೆಚ್ಚಿದೆಯೆಂಬುದು ತಿಳಿಯುತ್ತದೆ.

ಜಗತ್ತಿನ ಮೋಹಕ ಉದ್ಯಾನಗಳಲ್ಲೊಂದಾದ ಬೆಂಗಳೂರು ಲಾಲ್‌ಬಾಗ್‌ನ ಚೆಲುವನ್ನು ಹೀರಿ ಹೀರಿ ತಣಿಯದವರಾರು? ಆ ಹೆಸರನ್ನು ಹೇಳಿದೊಡನೆಯೇ ನಿಸರ್ಗ ಶಿವಾರಾಧಕರು ರಸಸಮಾಧಿಯಲ್ಲಿ ಮುಳುಗೇಳುತ್ತಾರೆ, ಪುಳಕಿತರಾಗುತ್ತಾರೆ. ಪ್ರತಿನಿತ್ಯವೂ ಸೂರ್ಯೋದಯ, ಸೂರ್ಯಾಸ್ತ ಸಮಯದಲ್ಲಿ ದೇವತೆಗಳು ಭೂಮಿಗಿಳಿದು ಬಂದು ಸೌಂದರ್ಯವಾರಾಶಿಯಲ್ಲಿ ಮಿಂದು, ಪುನೀತರಾಗುತ್ತಾರೆ. ಇಂಗ್ಲೆಂಡಿನ ರಾಣಿಯೇ ಆಗಲಿ, ರಷ್ಯಾದ ಅಧ್ಯಕ್ಷನೇ ಆಗಲಿ, ಲಾಲ್‌ಬಾಗ್‌ಗೆ ಭೇಟಿ ನೀಡಿ, ಅಲ್ಲಿಯ ಸೌಂದರ್ಯಾಮೃತಪಾನದಿಂದ ಸಂತೃಪ್ತರಾಗಿ ಮರಳುತ್ತಾರೆ. ಉದಯಾಸ್ತ ಸಮಯದ ಸೂರ್ಯಕಾಂತಿಗೆ, ಇರುಳಿನ ನಕ್ಷತ್ರಪುಂಜದ ತೇಜಸ್ಸಿಗೆ ಇಲ್ಲಿಯ ಪುಷ್ಪರಾಗವೇ ಕಾರಣವಾಗಿರಬಾರದೇಕೆ? ದೇಶ ವಿದೇಶಗಳ ತರುಲತಾ ಪುಷ್ಪಗಳು ವರ್ಣ, ಜಾತಿ, ಜನಾಂಗ, ವಾಯುಗುಣಗಳನ್ನು ಲೆಕ್ಕಿಸದೆ ಪರಸ್ಪರ ಸ್ನೇಹದಿಂದ ಒಮ್ಮೆ ಹರಿದ್ವರ್ಣ ರಂಜಿತವಾಗಿ, ಮತ್ತೊಮ್ಮೆ ನಗ್ನಸೌಂದರ್ಯ ಸಂಪನ್ನವಾಗಿ, ಜಗತ್ತಿನ ಕ್ಷೇಮಕ್ಕೆ ತಾವೇ ಕಾರಣವೆಂಬ ಹೆಮ್ಮೆಯಿಂದ ರಾರಾಜಿಸಿದವು. ಉದ್ಯಾನ ಸೌಂದರ್ಯಕ್ಕೆ ಸಮಸ್ಪರ್ಧಿಯಾಗಿ ಪಕ್ಷಿಕುಲ ಧ್ವನಿಸೌಂದರ್ಯವೂ ನೂರಾರು ಬಗೆಯಲ್ಲಿ ಹಾಸುಹೊಕ್ಕಾಗಿ ಶೋಭಿಸಿದುವು. ಈ ಕೆಂಪುತೋಟ ಕವಿಗಳಿಗೆ ಹುಚ್ಚು, ರಸಿಕರಿಗೆ ಮೆಚ್ಚು, ಜ್ಞಾನಿ ವಿಜ್ಞಾನಿಗಳಿಗೆ ನೆಚ್ಚು.

ಇದರ ಕಲ್ಪನೆ ಮೊದಲು ಮೂಡಿದ್ದು ಯಾರ ನಿರ್ಮಲ ಮನಸ್ಸಿನ ನಭೋಂಗಣದಲ್ಲಿ? ಇದನ್ನು ಬೆಳೆಸಿದವರ್ಯಾರು? ಇದನ್ನು ವಿಸ್ತರಿಸಿ ವೃದ್ಧಿಪಡಿಸಿ ಸುವರ್ಣ ಸಂಪತ್ತನ್ನು, ಅಕ್ಷಯಸೌಂದರ್ಯವನ್ನು ಕಾಣಿಸಿದವರಾರು? ಇದರ ಹುಟ್ಟು ಮತ್ತು

ಶೈಶವಾವಸ್ಥೆಗಳು ಇತಿಹಾಸಕಾರರ ಅವಜ್ಞೆಯಿಂದಾಗಿ ಭೂತಲೋಕದ ಗೋರಿಯಲ್ಲಿ ಹೂತುಹೋಗಿದೆ. ಆದರೂ ಅದು ಯಾವಾಗ ಪ್ರಾರಂಭವಾಗಿರಬೇಕು ಎಂಬುದನ್ನು ಊಹಿಸಬಹುದೆಂದು ತೋರುತ್ತದೆ. ಬೆಂಗಳೂರಿನಂತಹ ಉದ್ಯಾನನಗರಿಗೆ ಭದ್ರ ಬುನಾದಿಯನ್ನು ನಿರ್ಮಿಸಿದ ಅಂದಿನ ಪ್ರಜ್ಞಾವಂತನೂ, ಸೌಂದರ್ಯೋಪಾಸಕನೂ ಆದ ಹಿರಿಯ ಕೆಂಪೇಗೌಡನೇ ಲಾಲ್‌ಬಾಗ್‌ಗೆ ನಾಂದಿಯೆಂಬಂತೆ ತೋಟವನ್ನು ರೂಪಿಸಿಕೊಂಡಿರಬೇಕೆಂಬುದರಲ್ಲಿ ಸಂದೇಹವಿಲ್ಲ.

೧೮೩೬ರಲ್ಲಿ ಲಂಡನಿನ ಗಾಜಿನರಮನೆ ಅಗ್ನಿಗಾಹುತಿಯಾದ ನಂತರ ಲಾಲ್‌ಬಾಗಿನ ಗಾಜಿನ ಮನೆ ಅದರ ಪುನರುತ್ಥಾನವೆಂಬಂತೆ, ಉದ್ಯಾನ ವಿಕಾಸದ ಸಂಕೇತವೆಂಬಂತೆ, ಅದಕ್ಕೊಂದು ಸಾಕ್ಷಿಯೆಂಬಂತೆ, ಕೆಂಪುತೋಟದ ರತ್ನಕಿರೀಟವೆಂಬಂತೆ ಇಂದಿಗೂ ಕಂಗೊಳಿಸುತ್ತಿದೆ. ಜಗತ್ತಿಗೆಲ್ಲಾ ಒಂದೇ ಚಂದ್ರ, ಒಂದೇ ಗಾಜಿನಮನೆ. ಜಗತ್ತಿನ ಎಲ್ಲಾ ಮಹಾನಾಯಕರು ಇಂಡಿಯಾಕ್ಕೆ ಬಂದೇ ಬರುತ್ತಾರೆ, ಬಂದವರು ಬೆಂಗಳೂರಿಗೂ ಬರುತ್ತಾರೆ. ಬೆಂಗಳೂರಿಗೆ ಬಂದವರು ಲಾಲ್‌ಬಾಗಿಗೆ ಬಂದು ಗಾಜಿನಮನೆಯನ್ನು ವೀಕ್ಷಿಸಿ, ಹೆಮ್ಮೆಯಿಂದ ಗಿಡನೆಟ್ಟು, ಸಂತೋಷಪಟ್ಟು ಹೋಗುತ್ತಾರೆ. ಇದು ಅನೇಕ ದೇಶ ವಿದೇಶೀಯ ಸಸ್ಯತಳಿಗಳ ಉತ್ಪಾದನೆಗೆ ಆಶ್ರಯತಾಣವೂ ಆಗಿದೆ. ಅನೇಕ ರಾಷ್ಟ್ರೀಯ ಪ್ರದರ್ಶನ ಮತ್ತು ಸಮ್ಮೇಳನಗಳಿಗಿದು ಆಕರ್ಷಕ ಕೇಂದ್ರವಾಗಿದೆ. ಇತ್ತೀಚೆಗಿದು ರಾಜಕೀಯ ಸಭೆ ಸಮಾರಂಭಗಳ ಗದ್ದಲ, ಗೊಂದಲಗಳ ಅನುಭವವನ್ನು ಸಹ ಪಡೆಯುತ್ತಿದೆ.

ಲಾಲ್‌ಬಾಗಿನಲ್ಲಿ ಗಾಜಿನಮನೆಯಲ್ಲದೆ ಇನ್ನೂ ಕೆಲವು ಸುಂದರವಾದ ಕಟ್ಟಡಗಳೂ, ವಿಗ್ರಹಗಳೂ ಇವೆ. ಅವುಗಳಲ್ಲಿ ಕೆಂಪೇಗೌಡ ಗೋಪುರ ಅತ್ಯಂತ ಪ್ರಾಚೀನವಾದದ್ದು. ಬೆಂಗಳೂರು ನಗರದ ಭವಿಷ್ಯಕ್ಕೆ, ವಿಖ್ಯಾತಿ, ವಿಸ್ತಾರಗಳಿಗೆ ಸಂಕೇತವೆಂಬಂತೆ ನಗರನಿರ್ಮಾಪಕ ಕೆಂಪೇಗೌಡ ಹದಿನಾರನೆಯ ಶತಮಾನದಲ್ಲಿ ನಾಲ್ಕು ಗೋಪುರಗಳನ್ನು ಪ್ರತಿಷ್ಠಾಪಿಸಿದನು. ಅವನ ಮುಂಗಾಣ್ಕೆಯ ಫಲವೋ ಎಂಬಂತೆ ಬೆಂಗಳೂರು ಈಗ 'ನಗರಗಳ ರಾಣಿ' ಎಂದು ಹೆಸರಾಗಿದೆ.

ಲಾಲ್‌ಬಾಗನ್ನು ದರ್ಶಿಸಿದವರಿಗೆ ಅವರವರ ಮನೋಧರ್ಮ, ಸಂಸ್ಕಾರಗಳಿಗನುಗುಣವಾಗಿ ಅದು ಒಂದೊಂದು ವಿಧವಾಗಿ ಕಾಣಿಸಿಕೊಳ್ಳುವುದುಂಟಷ್ಟೆ. ಜಗದೀಶ್ವರನ ಚಿದ್ವಿಲಾಸವನ್ನು ನಿಸರ್ಗಶ್ರೀಯಲ್ಲಿ ದರ್ಶಿಸಬಹುದೆಂಬುದು ಅನುಭಾವಿ ಕುವೆಂಪು ಅವರ ಅಭಿಮತ ಮಾತ್ರವಲ್ಲ, ಅನುಭೂತಿಯೂ ಹೌದು.

ಗಿರಿವನ ಪ್ರೀತಿತಾಂ ದೈವಕೃಪೆದಲ್
ಜಗದೀಶ್ವರನ ಮಹಿಮೆ ಸಂವೇದ್ಯವಹುದಿಲ್ಲಿ
ಭವ್ಯ ಸೌಂದರ್ಯಶೀಲದ ವನ್ಯಶಾಂತಿಯಲಿ

ಲಾಲ್‌ಬಾಗನ್ನು ನೋಡಿದಾಗೆಲ್ಲ ಕುವೆಂಪು ಅವರ ಈ ಮಾತು ನೆನಪಿಗೆ ಬರುವುದು. ರಾಜ್ಯದ ಅನೇಕ ಉದ್ಯಾನಗಳಿಗೆ ಜನ್ಮವಿತ್ತ ಲಾಲ್‌ಬಾಗ್ 'ಉದ್ಯಾನರಾಣಿ' ಎಂಬ ಬಿರುದಿಗೆ ಪಾತ್ರವಾಗಿದೆ. ಅಂತೆಯೇ ಕರ್ನಾಟಕ ಭರತಖಂಡದ ಸರ್ವಶ್ರೇಷ್ಠ ಉದ್ಯಾನರಾಜ್ಯವಾಗಿದೆ. ಇಂತಹ ಉದ್ಯಾನರಾಜ್ಯವಾಗುವುದಕ್ಕೆ ಕಾರಣರಾದವರಾರು? ಅವರೇ ಸಸ್ಯವಿಜ್ಞಾನಿ ನಿಸರ್ಗಪ್ರೇಮಿ ಸದಾ ರೈತ ಹಿತಾಕಾಂಕ್ಷಿ ಡಾ. ಮಾರಗೊಂಡನಹಳ್ಳಿ ಹೊಂಬೇಗೌಡ ಮರಿಗೌಡ ಅವರು (ಎಂ. ಎಚ್. ಮರಿಗೌಡ).

ನೋಬೆಲ್ ಪ್ರಶಸ್ತಿ ವಿಜೇತರೂ ಜಗದ್ವಿಖ್ಯಾತ ವಿಜ್ಞಾನಿಗಳೂ ವಿಶಾಲ ಲೋಕಾನುಭವವುಳ್ಳವರೂ ಆದ ಡಾ. ಸಿ. ವಿ. ರಾಮನ್ ಅವರು ಲಾಲ್‌ಬಾಗ್‌ನ ಅತಿಶಯ ಸೌಂದರ್ಯಕ್ಕೆ ಮಾರುಹೋಗಿ ಅದಕ್ಕೆ ಕಾರಣರಾದ ಡಾ. ಮರಿಗೌಡರಿಗೆ ನಾಗರಿಕರು ಕೃತಜ್ಞರಾಗಿರಬೇಕೆಂದು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ರಾಷ್ಟ್ರದ ಬಂಜರು ಭೂಮಿಯ ಸಾಗುವಳಿ ಅತ್ಯಗತ್ಯವೆಂಬುದನ್ನು ಮೊತ್ತಮೊದಲಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟ ಕೀರ್ತಿಯು ಮರಿಗೌಡರಿಗೆ ಸಲ್ಲಬೇಕು. ಎಲ್ಲಕ್ಕಿಂತ ಮಿಗಿಲಾಗಿ ರೈತರ ಕ್ಷೇಮದ ಬಗೆಗಿನ ಅವರ ಕಳಕಳಿ ಅಸಾಧಾರಣವಾದದ್ದು. ಆರ್ಥಿಕ ಪ್ರಗತಿಗೆ ವಾಣಿಜ್ಯಾಭಿವೃದ್ಧಿಗೆ, ಅಂತಾರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ಹೊಸ ದಾಖಲೆಯನ್ನು ನಿರ್ಮಿಸಬೇಕೆಂಬುದು ಮರಿಗೌಡರ ಹೇರಾಸೆ. ಅವರ ಹಲವು ಸಾಧನೆಗಳಿಂದಾಗಿ ಅದರಲ್ಲಿಯೂ ಈ ನಾಲ್ಕು ಮುಖ್ಯ ಕಾರಣಗಳಿಂದಾಗಿ ಮರಿಗೌಡರು ಕರ್ನಾಟಕದ ಹಾಗೂ ಭರತ ಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ. ಕರ್ನಾಟಕದ ಕೀರ್ತಿಧ್ವಜವನ್ನು ನಭದೆತ್ತರಕ್ಕೆ ಎತ್ತಿಹಿಡಿದಿದ್ದಾರೆ.

ಗಿಡಗಳ ಸಮೃದ್ಧವಾದ ಬೆಳವಣಿಗೆಗೆ ನೀರು, ಗೊಬ್ಬರ ಮಾತ್ರ ಸಾಲವು, ಮಾನವನ ಪ್ರೀತಿಯ ವರ್ಷವೂ ಬೇಕು. ಇಂತಹ ಪ್ರೀತಿಯನ್ನು ವರ್ಷಿಸುವ, ತನ್ನ ಆತ್ಮವನ್ನೇ ನಿವೇದಿಸಿಕೊಳ್ಳುವ ವೃಕ್ಷಪ್ರೇಮಿಯ ಆಗಮನದಿಂದ ಇಡೀ ಲಾಲ್‌ಬಾಗೇ ಚೇತರಿಸಿಕೊಂಡಿದೆ; ಕನ್ನಡನಾಡಿನ ಮಣ್ಣು ಪುಳಕಗೊಂಡಿದೆ.

**ಲೇಖಕರ ಪರಿಚಯ**

'ದೇಜಗೌ' ಎಂಬುದು ಕನ್ನಡದ ಹಿರಿಯ ಲೇಖಕರಾದ ದೇ. ಜವರೇಗೌಡ ಅವರ ಕಾವ್ಯನಾಮ. ಇವರು ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಚಕ್ಕೆರೆ ಎಂಬಲ್ಲಿ ೧೯೧೮ರಲ್ಲಿ ಜನಿಸಿದರು. ಇವರು ಕನ್ನಡ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನಿವೃತ್ತರಾಗಿದ್ದಾರೆ. ಹೋರಾಟದ ಬದುಕು ಇವರ ಆತ್ಮಕಥನ. ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ, ಬೆಂಗಳೂರು ಕೆಂಪೇಗೌಡ, ಗೋಪಾಲಕೃಷ್ಣ ಗೋಖಲೆ, ಮೋತಿಲಾಲ್ ನೆಹರು ಇವರ ಕೃತಿಗಳು. ಅನ್ನ ಕರೆನಿನ, ಹಮ್ಮುಬಿಮ್ಮು, ಪುನರುತ್ಥಾನ, ನೆನಪು ಕಹಿಯಲ್ಲ ಮೊದಲಾದವು ಇವರ ಅನುವಾದಿತ ಕೃತಿಗಳು. ಇವರು ೧೯೭೦ರಲ್ಲಿ ಬೆಂಗಳೂರಿನಲ್ಲಿ ನಡೆದ ೪೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರಿಗೆ ಸೋವಿಯತ್ ಲ್ಯಾಂಡ್ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಇತ್ಯಾದಿ ಪ್ರಶಸ್ತಿಗಳು ಲಭಿಸಿವೆ.

ಪ್ರಸ್ತುತ ಲೇಖನವನ್ನು ಇವರ ರಾಷ್ಟ್ರೀಯ ಉದ್ಯಾನದ ಮಹಾಶಿಲ್ಪಿ ಕೃತಿಯಿಂದ ಆರಿಸಲಾಗಿದೆ.

**ಪೀಠಿಕೆ**

*ಮನುಷ್ಯನಿಗೆ ಮನಃಶಾಂತಿಯನ್ನು ದೊರಕಿಸುವ ತಾಣಗಳಲ್ಲಿ 'ಸಸ್ಯಕಾಶಿ' ಎನಿಸಿರುವ ಉದ್ಯಾನವೂ ಒಂದು. ಇದು ಮನಸ್ಸಿಗೆ ಆಹ್ಲಾದ ನೀಡುವುದರ ಜೊತೆಗೆ ದೇಹಕ್ಕೆ ಆರೋಗ್ಯವನ್ನೂ ನೀಡುತ್ತದೆ. ಗ್ರಾಮೀಣ ಪರಿಸರ ಹಸುರಿನಿಂದ ಕೂಡಿರುತ್ತದೆ. ಇದಕ್ಕೆ ಭಿನ್ನವಾಗಿ ನಗರದ ಯಾಂತ್ರಿಕ ಬದುಕಿನಲ್ಲಿ ಉದ್ಯಾನಗಳ ಪಾತ್ರ ಬಹು ಮುಖ್ಯವಾದುದು. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿರುವ ಲಾಲ್‌ಬಾಗ್‌ನ ಸ್ಥೂಲ ಪರಿಚಯವನ್ನು ಪ್ರಸ್ತುತ ಲೇಖನದಲ್ಲಿ ಮಾಡಿಕೊಡಲಾಗಿದೆ. ಲಾಲ್‌ಬಾಗನ್ನು ಪ್ರಮುಖ ಪ್ರವಾಸಿ ತಾಣವಾಗಿ ಅಭಿವೃದ್ಧಿಗೊಳಿಸುವಲ್ಲಿ ಡಾ.ಎಂ.ಎಚ್. ಮರಿಗೌಡರು ನಿರ್ವಹಿಸಿದ ಪಾತ್ರವನ್ನೂ ಇಲ್ಲಿ ಸ್ಮರಿಸಲಾಗಿದೆ.*

**ಶಬ್ದಾರ್ಥ :**

ನಿಸರ್ಗ - ಪ್ರಕೃತಿ; **ಪುಳಕ** - ರೋಮಾಂಚನ; **ವಾರಾಶಿ** - ಸಮುದ್ರ; **ಮೀ** - ಸ್ನಾನಮಾಡು; **ಪುನೀತ** - ಪವಿತ್ರ; **ಪುಂಜ** - ಸಮೂಹ; **ಪುಷ್ಪರಾಗ** - ಹೂಬಣ್ಣ; **ನಗ್ನ** - ಬೆತ್ತಲೆ; **ರಾರಾಜಿಸು** - ಶೋಭಿಸು; **ರಸಿಕ** - ನವರಸಗಳನ್ನು ಬಲ್ಲವನು; **ಅವಜ್ಞೆ** - ಅಲಕ್ಷ್ಯ; **ಉತ್ಥಾನ** - ಉದಯ; **ಸಾಕ್ಷಿ** - ರುಜುವಾತು; **ತಳಿ** - ವಂಶ ; **ವಿಖ್ಯಾತಿ** - ಕೀರ್ತಿ; **ಸಂಕೇತ** - ಗುರುತು; **ಮುಂಗಾಣ್ಕೆ** - ಮುನ್ನೋಟ; **ಸಂಸ್ಕಾರ** - ಸಹಜಪ್ರವೃತ್ತಿ; **ಅನುಭಾವಿ** - ಆತ್ಮಾನುಭವ ಉಳ್ಳವನು; **ಅಭಿಮತ** - ಅಭಿಪ್ರಾಯ; **ಅನುಭೂತಿ** - ಸ್ವಂತ ಅನುಭವಕ್ಕೆ ಬಂದಿರುವ ತಿಳಿವು; **ಶ್ಲಾಘನೆ** - ಹೊಗಳಿಕೆ; **ಹೇರಾಸೆ** - ದೊಡ್ಡ ಆಸೆ; **ಅಜರಾಮರ** - ಶಾಶ್ವತ; **ವರ್ಷ** - ಮಳೆ.

ಟಿಪ್ಪಣಿ :

೧. ಲಾಲ್‌ಬಾಗ್ = ಕೆಂಪುತೋಟ

೨. ಗೋಪುರ = ನಗರ ಅಥವಾ ದೇವಸ್ಥಾನಗಳ ಮಹಾದ್ವಾರಗಳ ಮೇಲಿನ ಗುಮ್ಮಟ ಅಥವಾ ಶಿಖರ.

## ಅಭ್ಯಾಸ

ಪ್ರಶ್ನೆಗಳು :

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:

೧. ನಿಸರ್ಗಾರಾಧಕರಿಗೆ ಲಾಲ್‌ಬಾಗ್ ಹೆಸರು ಕೇಳಿದಾಗ ಆಗುವ ಅನುಭವವೇನು?

೨. ಲಾಲ್‌ಬಾಗ್ ಯಾವುದರ ಪುನರುತ್ಥಾನವಾಗಿದೆ?

೩. ಯಾವುದರ ಉತ್ಪಾದನೆಗೆ ಲಾಲ್‌ಬಾಗ್ ಆಶ್ರಯತಾಣವಾಗಿದೆ?

೪. ಬೆಂಗಳೂರು ನಗರನಿರ್ಮಾಪಕ ಯಾರು?

೫. ಗೋಪುರಗಳು ಯಾವುದರ ಸಂಕೇತವಾಗಿವೆ?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಸೌಂದರ್ಯವಾರಾಶಿ ಮತ್ತು ಸೌಂದರ್ಯಾಮೃತ ಸವಿಯುವವರು ಯಾರು?

೨. ಲಾಲ್‌ಬಾಗಿನ ಹುಟ್ಟು - ಶೈಶವದ ಬಗ್ಗೆ ಲೇಖಕರ ಅಭಿಪ್ರಾಯವೇನು?

೩. ಮರಿಗೌಡರ ಕಳಕಳಿ ಮತ್ತು ಹೇರಾಸೆ ಏನು?

೫. ಲೇಖಕರು 'ವೃಕ್ಷಪ್ರೇಮಿ'ಯ ಆಗಮನವನ್ನು ಕುರಿತು ಹೇಳಿರುವ ಮಾತುಗಳೇನು?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಲೇಖಕರು ವರ್ಣಿಸಿರುವಂತೆ ಲಾಲ್‌ಬಾಗಿನ ಚೆಲುವನ್ನು ತಿಳಿಸಿರಿ.

೨. ಲಾಲ್‌ಬಾಗಿನಲ್ಲಿರುವ ಸ್ಮಾರಕಗಳು ಯಾವುವು?

೩. ಮರಿಗೌಡರ ಸಾಧನೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿರಿ.

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯಸಹಿತ ವಿವರಿಸಿರಿ.

೧. ಸೌಂದರ್ಯಾಮೃತಪಾನದಿಂದ ಸಂತೃಪ್ತರಾಗಿ ಮರಳುತ್ತಾರೆ.

೨. ಈಗ ನಗರಗಳ ರಾಣಿ ಎಂದು ಹೆಸರಾಗಿದೆ.

೩. ಕರ್ನಾಟಕದ ಕೀರ್ತಿಧ್ವಜವನ್ನು ನಭದೆತ್ತರಕ್ಕೆ ಎತ್ತಿಹಿಡಿದಿದ್ದಾರೆ.

ಉ. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

೧. ಇಂಗ್ಲೆಂಡ್ : ರಾಣಿ :: ರಷ್ಯಾ : ...............

೨. ರಸಿಕರಿಗೆ : ಮೆಚ್ಚು :: ವಿಜ್ಞಾನಿಗಳಿಗೆ : ...............

೩. ಗಾಜಿನ ಮನೆ : ಬೆಂಗಳೂರು :: ಗಾಜಿನರಮನೆ : ...............

೪. ಉದ್ಯಾನರಾಣಿ : ಲಾಲ್‌ಬಾಗ್ :: ಉದ್ಯಾನರಾಜ್ಯ : ...............

೫. ಅನುಭಾವಿ : ಕುವೆಂಪು :: ಸಸ್ಯವಿಜ್ಞಾನಿ : ...............

ಊ. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.

೧. ಗೋಪುರ, ಗಾಜಿನಮನೆ, ಶಾಲೆ, ವಿಗ್ರಹ

೨. ರನ್ನ, ಲೋಗ, ನಿತ್ಯ, ತಾಣ

೩. ಪುಷ್ಪ, ಹೂ, ಕಂಪು, ಕುಸುಮ

೪. ನೀರು, ತೋಟ, ಗೊಬ್ಬರ, ಗಾಜು

## ಭಾಷಾಭ್ಯಾಸ

ಅ. ಕೆಳಗಿನ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ಬರೆಯಿರಿ.

ಭೂಮಿಗಿಳಿದು, ಸೌಂದರ್ಯಾಮೃತ, ಸೌಂದರ್ಯೋಪಾಸಕ, ಅತ್ಯಂತ, ಜಗದೀಶ್ವರ

ಆ. ಕೆಳಗಿನ ಪದಗಳ ತದ್ಭವ ರೂಪ ಬರೆಯಿರಿ.

ಪ್ರತಿ, ವರ್ಣ, ವಿಸ್ತಾರ, ಆಶ್ರಯ, ಕೀರ್ತಿ, ಶ್ರೀ, ಅಗ್ನಿ

ಇ. ಇವುಗಳ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಅಕ್ಷಯ, ಸಂದೇಹ, ಆಕರ್ಷಣೆ, ಕೀರ್ತಿ

ಈ. ಈ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.

ಹಾಸುಹೊಕ್ಕು, ಭದ್ರ ಬುನಾದಿ, ಪುನರುತ್ಥಾನ, ಮುಂಗಾಣ್ಕೆ

ಉ. ಇವುಗಳ ಅನ್ಯಲಿಂಗ ರೂಪ ಬರೆಯಿರಿ.

ರಾಣಿ, ಕವಿ, ಇತಿಹಾಸಕಾರ, ಪ್ರಜ್ಞಾವಂತ, ನಾಯಕ

ಊ. ಇವುಗಳ ಬಹುವಚನರೂಪ ಬರೆಯಿರಿ.

ಅಧ್ಯಕ್ಷ, ರಾಣಿ, ನಿರ್ಮಾಪಕ, ನಾಗರಿಕ, ರೈತ

೩. ಈ ಕೆಳಗಿನ ಹೇಳಿಕೆಗಳನ್ನು ಎಂಟು / ಹತ್ತು ವಾಕ್ಯಗಳಲ್ಲಿ ವಿಸ್ತರಿಸಿ ಬರೆಯಿರಿ.

೧. 'ಹಸಿರೇ ಉಸಿರು'

೨. 'ಉಳಿದರೆ ಕಾಡು; ಅಳಿಯದು ನಾಡು'.

ಎ. ಕೆಳಗಿನ ಪದಗಳ ಅರ್ಥವ್ಯತ್ಯಾಸವನ್ನು ನಿಮ್ಮ ಗುರುಗಳ ಸಹಾಯದಿಂದ ತಿಳಿಯಿರಿ.

೧. ರಸಿಕ - ರಸಿಕತೆ

೨. ಜಾತಿ - ಜನಾಂಗ

೩. ಸಾಕ್ಷಿ - ಮನಸ್ಸಾಕ್ಷಿ

೪. ಅನುಭವ - ಅನುಭಾವ

## ಚಟುವಟಿಕೆ

೧. ನೀವು ನೋಡಿದ ಉದ್ಯಾನವನ್ನು ವರ್ಣಿಸಿ ನಿಮ್ಮ ಗೆಳೆಯನಿಗೆ ಒಂದು ಪತ್ರ ಬರೆಯಿರಿ.

೨. ಬೆಂಗಳೂರಿನ ಲಾಲ್‌ಬಾಗಿಗೆ ಭೇಟಿ ನೀಡಿರಿ.

೩. ಪೂರಕ ಓದು :

ಮರ ಉಳಿದರೆ ಬೆಳೆ
ಮರ ಉಳಿದರೆ ಹೊಳೆ
ಮರ ಉಳಿದರಳಲು
ಹೊಲವೆಲ್ಲಾ ಬೆಳೆ

ಮರವಿದ್ದರೆ ಜನ
ಮರವಿದ್ದರೆ ದನ
ಕರು ಕುರಿ, ಹಸಿರಾ
ಗಿರುವುದಿಳೆ

ಕಡಿದೂ ಕಡಿದು
ಕಾನನ ಬರಿದು
ನೆಲ ಜಲ ಗಾಳಿಗೆ
ನೆಲೆಯಿರದು.

- ಶಂಪಾ ದೈತೋಟ

# ೮. ಮಳೆಕೊಯ್ಲು

ಶ್ರೀಪಡ್ರೆ

> **ಆಶಯ**
>
> ಪಂಚ ಮಹಾಭೂತಗಳಿಂದಾದ ಶರೀರಕ್ಕೆ ನೀರು ಅತ್ಯವಶ್ಯ. ಹೇಗೆ ನೆರಳು ನಮ್ಮನ್ನು ಬಿಟ್ಟಿರಲಾರವೋ ಹಾಗೆಯೇ ನೀರನ್ನು ಬಿಟ್ಟು ನಾವಿರಲಾರೆವು. ನೀರಿನ ಕೊರತೆ ಎಲ್ಲೆಡೆ ಹಾಹಾಕಾರವನ್ನೆಬ್ಬಿಸಿದೆ. 'ನೀರು ಬೇಕು, ನೀರು ಬೇಕು' ಎಂದು ಕೇಳುವ ಹಕ್ಕಿನ ಹೋರಾಟದ ಜೊತೆಗೆ ಅಂತರ್ಜಲವನ್ನು ಹೆಚ್ಚಿಸುವ ಬಾಧ್ಯತೆಯ ಬಗ್ಗೆಯೂ ಯೋಚಿಸಿ ನಾವು ಕಾರ್ಯಪ್ರವೃತ್ತರಾಗಬೇಕು.

ಬೇಸಿಗೆ ರಜೆಗೆಂದು ಶೇಖರ ಊರಿಗೆ ಬಂದು ಸೇರಿದ್ದ. ಮನೆ ಹೊಕ್ಕಾಗ ಅಪ್ಪ ರಾಘಣ್ಣ ತಲೆಗೆ ಕೈಹೊತ್ತು ಕುಳಿತದ್ದು ಕಂಡಿತು. ಚಿಂತೆಯ ಕಾರಣ ಅಮ್ಮನಿಂದ ತಿಳಿಯಿತು. ಅವರ ತೆರೆದಬಾವಿ ಬತ್ತಿತ್ತು. ಶೇಖರ ಅಪ್ಪನ ಬಳಿ ಕೇಳಿದ:

"ಅಪ್ಪಾ, ಅದಕ್ಕಿಷ್ಟು ಚಿಂತೆ ಯಾಕೆ ಮಾಡ್ತೀರಾ?" "ನೆರೆಮನೆಯಿಂದ ನೀರು ತಂದು ಹೇಗೋ ಈ ಬೇಸಿಗೆಯನ್ನು ಹೊರಹಾಕಬಹುದು; ಆದರೆ ಬರುವ ವರ್ಷ ಕೊಳವೆ ಬಾವಿ ಕೊರೆಸಲೇಬೇಕು. ಎಲ್ಲಿಂದ ಅಷ್ಟೊಂದು ಹಣ ತರೋಣ ಹೇಳು?" ರಾಘಣ್ಣನ ಮರುಪ್ರಶ್ನೆ.

"ಕಾಲೇಜಿನಿಂದ ಟೂರ್ ಹೋಗಿದ್ದೆವಲ್ಲಾ ಚೆನ್ನೈಗೆ, ಅಲ್ಲಿಂದ ನಾವೆಲ್ಲಾ ಮಳೆಕೊಯ್ಲು ಎಂಬ ವಿದ್ಯೆ ಕಲಿತುಕೊಂಡು ಬಂದಿದ್ದೇವೆ. ಹೆದರಬೇಕಾಗಿಲ್ಲ ಅಪ್ಪ, ಅತಿ ಕಡಿಮೆ ಖರ್ಚಿನಲ್ಲಿ ನಾವು ಬಾವಿಯಲ್ಲಿ ನೀರು ಹೆಚ್ಚಾಗುವ ಹಾಗೆ ಮಾಡಬಹುದು."

"ಮಳೆಕೊಯ್ಲು! ಅದೇನಪ್ಪಾ? ಈ ವರೆಗೆ ಹಾಗೊಂದು ವಿಚಾರಾನೇ! ಕೇಳಿಲ್ಲವಲ್ಲಾ?"

"ನಮ್ಮ ಅಜ್ಜ ಮುತ್ತಜ್ಜಂದಿರು ದೇಶದುದ್ದಗಲದಲ್ಲೂ ಅನುಸರಿಸಿದ ವಿದ್ಯೆ ಇದು. ರಾಳೆಗಾಮ್ ಸಿದ್ದಿ, ರಾಜಸ್ಥಾನ ಮೊದಲಾದೆಡೆ ಈ ವಿದ್ಯೆಯಿಂದ ತುಂಬಾ ಪ್ರಯೋಜನ ಪಡೆದಿದ್ದಾರೆ. ರಾಜಸ್ಥಾನದಂತಹ ಮರಳುಗಾಡಿನಲ್ಲಿ ಮಳೆಗಾಲಾನಂತರ ಕೆಲವೇ ತಿಂಗಳು ಹರಿಯುತ್ತಿದ್ದ ಐದು ನದಿಗಳನ್ನು ಅಲ್ಲಿನ ಜನ ಈಗ ವರ್ಷವಿಡೀ ಹರಿಯುವಂತೆ ಮಾಡಿದ್ದಾರೆ."

"ಏನೊ! ಇದನ್ನೆಲ್ಲಾ ನನಗೆ ನಂಬಲಿಕ್ಕೆ ಆಗ್ತೀಲ್ಲಾಪ್ಪ"

"ನಮಗೂ, ನಮ್ಮ ಪ್ರಾಧ್ಯಾಪಕರಿಗೂ ಮೊದಮೊದಲು ಹಾಗೇ ಆಗಿತ್ತು. ಆದರೆ ಚೆನ್ನೈಯಲ್ಲಿ ನಾವು ಹೀಗೆ 'ಮಳೆ ಹಿಡಕೊಳ್ಳುವ' ಹತ್ತಾರು ಮನೆಗಳಿಗೆ ಹೋಗಿ ಅವರ

ಅನುಭವ ಕೇಳಿದೆವು. ಅಲ್ಲಿನ ರೈನ್‌ಸೆಂಟರ್‌ನಲ್ಲಿ ನಮಗೆ ರಾಜಸ್ಥಾನ, ರಾಳೆಗಾಮ್ಸ್‌ಗಳ ವೀಡಿಯೊ ತೋರಿಸಿದರು. ನನಗಂತೂ ಈಗ ಮನಸ್ಸಿಗೆ ಧೈರ್ಯ ಬಂದಿದೆ."

"ಎಲ್ಲಾ ಸರಿ, ಈ ಕೆಲಸ ಮಾಡುವುದು ಹೇಗೆ? ಅದರಿಂದ ಪ್ರಯೋಜನ ಆಗುತ್ತಾ?"

"ತತ್ವ ತುಂಬಾ ಸರಳ ಅಪ್ಪ. ನಮ್ಮ ನಮ್ಮ ಭೂಮಿಯಲ್ಲಿ ಎಲ್ಲಿ ಮಳೆ ಸುರಿಯುತ್ತದೋ ಅಲ್ಲೇ ಇದನ್ನು ಇಂಗಿಸಬೇಕು. ಬೀಳುವ ಮಳೆಯನ್ನು ಅದರ ಪಾಡಿಗೆ ಓಡಲು ಬಿಡದೆ ನಮ್ಮ ಭವಿಷ್ಯದ ಉಪಯೋಗಕ್ಕಾಗಿ ತಡೆಹಿಡಿಯುವುದೇ ಮಳೆಕೊಯ್ಲು (rain harvesting). ಓಡೋ ನೀರನ್ನು ನಡೆಯೋ ಹಾಗೆ ಮಾಡಿ, ನಡೆಯುವ ನೀರನ್ನು ಇಂಗಿಸಿ ಅಂತ ಅವರು ಬಣ್ಣಿಸುತ್ತಾರೆ. ನೀರಿಂಗಿಸುವುದು, ಅಂತರ್ಜಲ ಮರುಪೂರಣ (ground water recharge), ಮಳೆನೀರ ಸಂಗ್ರಹ - ಇವೆಲ್ಲಾ ಹೆಚ್ಚುಕಮ್ಮಿ ಒಂದೇ."

"ಅಲ್ಲ ಶೇಖರ, ಮಳೆ ಬಂದು ನಮ್ಮಲ್ಲಿಂದ ನೀರು ಹರಿದು ಹೋಗುತ್ತಲ್ಲಾ, ಆಗ ಬೇಕಾದಷ್ಟು ನೀರು ಇಂಗುತ್ತಲ್ಲಾ? ಮತ್ತೆ ಯಾಕೆ ನಾವು ಇಂತಹ ಕೆಲಸ ಮಾಡ್ಬೇಕು ಹೇಳು?"

"ನೋಡಿ ಅಪ್ಪಾ, ಅರಣ್ಯನಾಶ, ನೀರಿನ ಪೋಲು, ಅತಿಯಾದ ಕೊಳವೆಬಾವಿ ಕೊರೆತ, ನಗರಗಳಲ್ಲಿ ಕಾಂಕ್ರಿಟೀಕರಣ - ಇವೆಲ್ಲದರಿಂದಾಗಿ ಬಿದ್ದ ಮಳೆನೀರು ಭೂಮಿಯೊಳಕ್ಕೆ ಇಂಗುವುದು ವರ್ಷದಿಂದ ವರ್ಷಕ್ಕೆ ಕಡಿಮೆ ಆಗುತ್ತಿದೆ. ಭೂಮಿ ಒಂದು ಜಲಪಾತ್ರೆ ಮಾತ್ರ. ಅದುವೇ ನೀರಿನ ಮೂಲ ಅಲ್ಲ. ಬಿದ್ದ ಮಳೆನೀರು ಈ ಪಾತ್ರೆಯಲ್ಲಿ ಚೆನ್ನಾಗಿ ತುಂಬಿದರೆ ಮುಂದಿನ ಬೇಸಿಗೆಗೂ ತೊಂದರೆ ಇರದು. ಹೀಗಾಗಬೇಕಾದರೆ ಮಳೆಯನ್ನು ತಡೆಯುವ ತಡೆಗಳು ಬೇಕು. ಕಾಡು ಒಂದು ಅತ್ಯುತ್ತಮ ನೈಸರ್ಗಿಕ ಬಹುಹಂತಗಳ ತಡೆ. ಕಾಡೇ ನದಿಗಳ ತಾಯಿ. ಇಂತಹ ಪ್ರಾಕೃತಿಕ ಮತ್ತು ಪೂರ್ವಜರು ಮಾಡಿಟ್ಟ ಕೆರೆ, ಮದಕ, ಒಡ್ಡುಗಳಂತಹ ತಡೆಗಳನ್ನು ನಾವಿಂದು ನಾಶಗೊಳಿಸಿದ ಕಾರಣ ಮಳೆಗಾಲದಲ್ಲಿ ಭೂಮಿಯ ಒಡಲು ತುಂಬುವುದಿಲ್ಲ. ಬಿದ್ದ ಮಳೆನೀರು ಅತ್ಯಮೂಲ್ಯವಾದ ಮೇಲ್ಮಣ್ಣನ್ನು ಕೊಚ್ಚಿಕೊಂಡು ಹೋಗಿ ನಮ್ಮ ಜಲಮೂಲಗಳಿಗೆ ತುಂಬುತ್ತಿದೆಯಲ್ಲ. ಅಲ್ಲಿ ಅದು ಹೂಳಾಗಿ ತಳದಲ್ಲಿ ಉಳಿದಾಗ ಬಿದ್ದ ಮಳೆನೀರಿನ ಶೇಖರಣೆ ಮತ್ತು ಭೂಗರ್ಭಕ್ಕೆ ಇಳಿಸುವ ಕಾರ್ಯಕ್ಕೆ - ಅಂತರ್ಜಲ ಮರುಪೂರಣ - ಕುಂದು ಬರುತ್ತದೆ. ಜಲಮಟ್ಟ (Water table) ಪ್ರತಿವರ್ಷ ಕುಸಿಯುತ್ತದೆ."

"ಪರವಾಗಿಲ್ವೇ, ಈ ಹೊಸ ವಿಚಾರವನ್ನು ಹೀಗೆ ಪಟಪಟಾಂತ ಹೇಳಲು ಹೇಗೆ ಕಲಿತುಕೊಂಡೆ?"

"ಚೆನ್ನೈಯ ರೈನ್‌ಸೆಂಟರ್‌ನಲ್ಲಿ ನಮ್ಮನ್ನುದ್ದೇಶಿಸಿ ಮಳೆಕೊಯ್ಲಿನ ಅನುಭವಿ ಒಬ್ಬರು ಒಂದು ಘಂಟೆ ಮಾತಾಡಿದರು. ಚಿತ್ರಗಳನ್ನು ತೋರಿಸಿದರು. ನಾನು ಇವನ್ನೆಲ್ಲಾ ಟಿಪ್ಪಣಿ ಮಾಡಿಕೊಂಡಿದ್ದೆ. ಪದ್ಮನಾಭನಗರ ಎಂಬ ಬಡಾವಣೆಗೆ ನಮ್ಮನ್ನು ಕರೆದುಕೊಂಡು ಹೋಗಿ ತೋರಿಸಿದರು. ಅಲ್ಲಿ ಹೆಚ್ಚಿನ ಮನೆಗಳಲ್ಲೂ ಅವರು ಮಳೆಕೊಯ್ಲು ಮಾಡುವ ಕಾರಣ ಅಂತರ್ಜಲ ಮಟ್ಟ ಎರಡೇ ಋತುಗಳಲ್ಲಿ ೧೦-೧೫ ಅಡಿ ಮೇಲಕ್ಕೆ ಬಂದಿದೆ."

"ಆದರೂ ಇಲ್ಲಿ ನಮ್ಮ ಸುತ್ತಮುತ್ತಲಿನವರೆಲ್ಲಾ, ಬಾವಿ ಬತ್ತಿದರೆ ಕೊಳವೆ ಬಾವಿ ತೋಡುವುದೊಂದೇ ದಾರಿ ಎನ್ನುತ್ತಿದ್ದಾರೆ."

"ಅದು ಸರಿಯಲ್ಲ, ಹಾಗೆ ನೋಡಿದರೆ, ಕೊಳವೆ ಬಾವಿ ಕೊರೆಯುವುದರಲ್ಲಿ ಸಾಮಾಜಿಕ ನ್ಯಾಯ ಇಲ್ಲ. ಅದು ಕೆಲವೊಮ್ಮೆ ಸುತ್ತುಮುತ್ತಲಿನ ಇತರರಿಗೆ ತೊಂದರೆ ಮಾಡುವುದಿದೆ. ಕೊಳವೆ ಬಾವಿ ಕೊರೆಯುವುದು ನಮ್ಮ ಕಟ್ಟಕಡೆಯ ಮಾರ್ಗವಾಗಬೇಕು. ಬೇರೆ ಕಡಿಮೆ ವೆಚ್ಚದ, ಹೆಚ್ಚು ಕಾಲ ಬಾಳುವ, ನಮ್ಮ ಮಕ್ಕಳ ಕಾಲಕ್ಕೂ ನೀರು ಉಳಿಸಬಲ್ಲ ಮಳೆಕೊಯ್ಲಿನಂತಹ ಉಪಾಯಗಳನ್ನು ನಾವು ಪ್ರಯೋಗಿಸಿ ನೋಡಬೇಕು."

"ಆದರೆ ನೀನು ಹೇಳುವ ಈ ನೀರಿಂಗಿಸುವ ಕೆಲಸದಿಂದ ಪ್ರಯೋಜನ ಆಗೋದು ಹೇಗೆ ಅಂತ ಸ್ವಲ್ಪ ನನಗೆ ಅರ[illegible]ಗುವ ಹಾಗೆ ಹೇಳು ನೋಡೋಣ."

"ನೋಡಿ ಅಪ್ಪಾ, ಈ ಮಳೆ ನೀರೇ ಇಂಗಿ ಭೂಮಿಯೊಳಕ್ಕೆ ಹೋಗಿ ಅಂತರ್ಜಲವಾಗೋದು. ಅಂದರೆ ಹಿಂದಿನ ವರ್ಷಗಳಲ್ಲಿ ಆಕಾಶದಿಂದ ಇಳಿದ ನೀರನ್ನೇ ಈಗ ನಾವು ಅಲ್ಲಿಂದ ಮೇಲೆತ್ತಿ ಬಳಸುತ್ತೇವೆ. ಅರಣ್ಯ ನಾಶದಂತಹ ತಪ್ಪು ಮಾಡಿದ ಕಾರಣ ನಾವೇ ಇಂದು ಪ್ರಜ್ಞಾಪೂರ್ವಕವಾಗಿ ಮಳೆಕೊಯ್ಲು ಮಾಡಬೇಕಿದೆ. ನಮ್ಮ ಮಣ್ಣು ಒಂದು ಸ್ಪಂಜಿನಂತೆ ಅಂತ ಕಲ್ಪಿಸಿಕೊಳ್ಳಿ. ಮಳೆಗಾಲದಲ್ಲಿ ಬಿದ್ದ ಮಳೆಯೆಲ್ಲಾ ಭೂಮಿಯ ಮೇಲಿನಿಂದಲೇ ಹರಿದೋಡುತ್ತದೆ. ಅದನ್ನು ನಾವು ಬೇರೆ ಬೇರೆ ಕ್ರಮದಿಂದ ಮಣ್ಣಿನೊಳಕ್ಕೆ ಇಳಿಸಿಬಿಟ್ಟರೆ ಈ ಸ್ಪಂಜು ಒದ್ದೆಯಾಗುತ್ತದೆ. ಅದು ನಿಧಾನವಾಗಿ ತಾನು ಹೀರಿಕೊಂಡದ್ದರ ಸ್ವಲ್ಪಾಂಶ ನೀರನ್ನು ಬಿಟ್ಟುಕೊಡುತ್ತದೆ. ಹೀಗೆ ಬಿಟ್ಟುಕೊಟ್ಟ ನೀರು ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತದೆ. ನಮ್ಮ ಜಲಮೂಲದಲ್ಲೂ ನೀರು ಜಾಸ್ತಿಯಾಗುತ್ತದೆ."

"ಸರಿ ಹಾಗಾದರೆ, ಎರಡು ತಿಂಗಳು ರಜೆಯಲ್ಲಿ ಇಲ್ಲೇ ಇರ್ತೀಯಲ್ಲಾ ನಿನ್ನ ನೇತೃತ್ವದಲ್ಲೇ ಕೆಲಸ ನಡೆಯಲಿ. ಪೇಟೆಯಿಂದ ಏನೇನು ಸಾಮಾನು ತರಬೇಕು ಹೇಳು; ನಾಳೆ ಹೇಗೂ ಹೋಗೋದಿದೆ."

"ಪೇಟೆಯಿಂದ ಏನೂ ಬೇಡಪ್ಪಾ. ತಾರಸಿ ಮನೆ ಅಥವಾ ಹಂಚಿನ ಮನೆಯ ಚಾವಣಿ ಮೇಲೆ ಬೀಳೋ ನೀರನ್ನು ಸೋಸಿ ಬಾವಿಗೆ ಬಿಡುವ ಒಂದು ಕ್ರಮ ಇದೆ. ಅದಕ್ಕಾದರೆ ಪೈಪುಗಳು ಬೇಕು. ನಾವು ಅಷ್ಟು ಖರ್ಚು ಹಾಕೋದು ಕಷ್ಟ; ನಾವು ಒಂದಷ್ಟು ಇಂಗುಗುಂಡಿ ತೋಡಿದರೆ ಸಾಕು. ನಮ್ಮ ಮನೆ ಆವರಣದಲ್ಲಿ ಬೀಳೋ ಮಳೆಯನ್ನು ಹೊರಕ್ಕೆ ಹೋಗಲು ಬಿಡದಿದ್ದರೆ ಸೈ. ಚೆನ್ನೈಯಲ್ಲಿ ಅವರು ಹೇಳಿದ ಮಾತು ಈಗಲೂ ಮನಸ್ಸಿನಲ್ಲಿದೆ. ಮಳೆ ಒಂದು ಖಾಲಿ ಚೆಕ್ಕಿನ ಹಾಳೆ (blank cheque). ಅವರವರ ಭೂಮಿಯ ಮಣ್ಣಿನೊಳಕ್ಕೆ ಅದನ್ನು ಹಾಕಿಬಿಟ್ಟರೆ ಬೇಸಿಗೆಯಲ್ಲಿ ತನ್ನಿಂದ ತಾನೇ ನಗದಾಗುತ್ತದೆ ಅಂತ."

"ಒಂದು ವೇಳೆ ಶೇಖರ, ನಿನ್ನ ಈ ಪ್ರಯೋಗ ಸಫಲವಾದರೆ ನಾನೇ ಮುಂದೆ ನಿಂತು ಊರಲ್ಲೆಲ್ಲಾ ಪ್ರಚಾರ ಮಾಡ್ತೀನಿ."

"ಆದರೆ ಅಪ್ಪಾ, ಮಳೆಕೊಯ್ಲಿನ ಕ್ರಮಗಳನ್ನು ಆಯಾಯ ಜಾಗದ ಮಳೆಯ ಪ್ರಮಾಣ, ಮಣ್ಣಿನ ಗುಣ, ಇಳಿಜಾರು - ಹೀಗೆ ಹತ್ತು ಹಲವು ವಿಷಯಗಳನ್ನು ಅವಲಂಬಿಸಿ ನಿರ್ಧರಿಸಬೇಕಾಗುತ್ತದೆ. ಒಂದೆಡೆ ಮಾಡಿದ ವಿಧಾನಗಳನ್ನು ಇನ್ನೊಂದೆಡೆ ನೊಣಪ್ರತಿ ಮಾಡಿದರೆ ಫಲ ಸಿಗುತ್ತದೆ ಎನ್ನಲಾಗದು."

"ಓ! ಹಾಗೂ ಇದೆಯಾ; ಅಂದರೆ ನಾವು ಈ ಬಗ್ಗೆ ತಿಳಿದುಕೊಳ್ಳುವಂಥದ್ದು ಸಾಕಷ್ಟು ಇದೆ ಅಂತ ಆಯಿತು. ಆದರೂ ಎಲ್ಲಾ ಕಡೆ ಈಗ ಮಾಡಬೇಕಾದ ಕೆಲಸ ಇಂಗುಗುಂಡಿ ತೋಡುವುದೊಂದೇ ತಾನೇ?"

"ಉಹ್ಞೂಂ. ಇಂಗುಗುಂಡಿ ಒಂದು ವಿಧಾನ. ಸಮತಳ ಬದು, ಸಮತಳ ಅಗಳು, ತುಂಡುಅಗಳು, ಇಂಗುಕೊಳ - ಹೀಗೆ ಹಲವು ಕ್ರಮಗಳಿವೆ. ಇದರ ಜತೆ ಆಯಾಯ ಊರುಗಳಲ್ಲಿ ಹಿಂದಿನವರು ಮಾಡಿಕೊಂಡು ಬಂದಂತಹ ಪಾರಂಪರಿಕ ಜಲಸಂರಕ್ಷಣಾ ವ್ಯವಸ್ಥೆಗಳಿವೆ. ಇವುಗಳ ದುರಸ್ತಿ ಇಲ್ಲವೇ ಪುನಾರಚನೆಯಿಂದ ಸಾಕಷ್ಟು ಉಪಯೋಗವಿದೆ."

"ಆದರೆ ಒಡ್ಡು ಅಂಥವು, ಅಲ್ಲವೇ?"

"ಬಯಲುಸೀಮೆಯಲ್ಲಿ ಕಲ್ಲೊಡ್ಡು, ಬದು, ಗೋಕುಂಟೆಗಳೂ ಇದೇ ಕೆಲಸ ಮಾಡುತ್ತವೆ. ಇವುಗಳೆಲ್ಲಾ ಇಂದು ಹಾಳಾಗಿ ಬಿಟ್ಟಿವೆ."

"ಏನೇ ಇರಲಿ, ನೀನು ಹೇಳುವ ಈ ಮಳೆಕೊಯ್ಲಿನ ಕೆಲವು ಯಶೋಗಾಥೆಗಳನ್ನು ನನಗೆ ನೋಡಬೇಕೆನಿಸಿದೆ. ನಮ್ಮ ರಾಜ್ಯದಲ್ಲೆಲ್ಲಾದರೂ ಇಂಥವು ನಡೆದಿವೆಯೇ?"

"ಸರಕಾರಿ ಮತ್ತು ಸರಕಾರೇತರ ರಂಗದಲ್ಲಿಂದು ಸಾವಿರಾರು ಮಂದಿ ನಮ್ಮ ರಾಜ್ಯದಲ್ಲೂ ನೀರಿಂಗಿಸುತ್ತಿದ್ದಾರೆ. ಸಾಕಷ್ಟು ಪ್ರಯೋಜನ ಪಡೆದವರೂ ಇದ್ದಾರೆ. ನಮ್ಮ ಮೇಷ್ಟ್ರಿಗೆ ಇಂತಹ ಹಲವರ ಬಗ್ಗೆ ಗೊತ್ತು. ನಾನು ನಾಳೆಯೇ ಅವರನ್ನು ಫೋನ್ ಮೂಲಕ ಸಂಪರ್ಕಿಸಿ ವಿವರ ಪಡೆಯುವೆ."

"ಅಷ್ಟರೊಳಗೆ ನಾನು ನಮ್ಮೂರಿನ ಒಂದಷ್ಟು ಜನರನ್ನು ಸೇರಿಸಿ ನೀರಿಂಗಿಸಿ ಗೆದ್ದವರ ಜಾಗಗಳಿಗೆ ಒಂದು 'ಜಲಯಾತ್ರೆ' ಏರ್ಪಡಿಸುವಂತೆ ಪಂಚಾಯತ್ ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ; ಆಗದು ಅನ್ನಲಿಕ್ಕಿಲ್ಲ. ಊರಿಡೀ ನೀರಿನ ಕೊರತೆ ಇದೆ; ದಾರಿ ಕಾಣದವರು ತುಂಬಾ ಮಂದಿ ಇದ್ದಾರೆ."

**ಲೇಖಕರ ಪರಿಚಯ**

ಗಡಿನಾಡಾದ ಕಾಸರಗೋಡು ಜಿಲ್ಲೆಯ ಪಡ್ರೆ ಎಂಬಲ್ಲಿ ೧೯-೧೧-೧೯೫೫ರಂದು ಜನಿಸಿದ ಶ್ರೀಪಡ್ರೆಯವರು ಮೂಲತಃ ಕೃಷಿಕ ಮನೆತನದವರು. 'ಅಡಿಕೆ ಪತ್ರಿಕೆ' ಎಂಬ ಕೃಷಿಕರಿಗಾಗಿಯೇ ಇರುವ ಪತ್ರಿಕೆಯೊಂದನ್ನು ಪ್ರಾರಂಭಿಸಿ ರಾಜ್ಯಾದ್ಯಂತ ಸುದ್ದಿ ಮಾಡಿದ ಶ್ರೀಪಡ್ರೆಯವರು ಪತ್ರಿಕೋದ್ಯಮವನ್ನು ಬಹುವಾಗಿ ನೆಚ್ಚಿಕೊಂಡವರು. ಅಂಕಣಕಾರರು, ಸಂಪನ್ಮೂಲ ವ್ಯಕ್ತಿ. ಜಲಸಂರಕ್ಷಣೆ ಇಂದಿನ ಹಾಗೂ ಎಂದೆಂದಿನ ಅಗತ್ಯ ಎಂಬುದನ್ನು ಮನಗಂಡ ಅವರು ಆ ಕಾಯಕವನ್ನು ಬದುಕಿನ ಮೂಲ ಉದ್ದೇಶವನ್ನಾಗಿಸಿಕೊಂಡವರು. ನೆಲಜಲ ಉಳಿಸಿ, ಮತ್ತೆ ರೂಪಾರೆಲ್ ಬತ್ತಲಿಲ್ಲ. ಹನಿಗೂಡಿಸುವ ಹಾದಿಯಲ್ಲಿ, ಗುಜರಾತಿನ ನೀರತಿಜೋರಿ ಟ[illegible], ನೆಮ್ಮದಿಗೆ ನೂರಾರು ಹಾದಿ - ಇತ್ಯಾದಿ ಅವರ ಪ್ರಮುಖ ಕೃತಿಗಳು.

ಪ್ರಸ್ತುತ ಪಾಠವನ್ನು ಶ್ರೀಪಡ್ರೆಯವರು ಈ ಪತ್ರಕ್ಕೆ ವಿಶೇಷವಾಗಿ ರಚಿಸಿಕೊಟ್ಟಿದ್ದಾರೆ.

**ಆಶಯ**

*ಬೆಳೆಕೊಯ್ಲು ಮಾಡಿದ್ದೇವೆ. ಆದರೆ ಮಳೆಕೊಯ್ಲು? ಇದೊಂದು ಅಪೂರ್ವ ಪದಬಳಕೆಯಂತೆ ಕಂಡರೂ ಓದುತ್ತಾ ಹೋದಂತೆ ಎಲ್ಲಾ ಕೊಯ್ಲುಗಳಿಗೂ ಮಳೆಕೊಯ್ಲೇ ಮೂಲ ಎಂಬುದು ಮನದಟ್ಟಾಗುತ್ತದೆ. ಲೇಖಕರು ಇಲ್ಲಿ ಮಳೆಕೊಯ್ಲಿನ ಆವಶ್ಯಕತೆಯನ್ನು ತಿಳಿಸುತ್ತಾ, ಅದು ಎಲ್ಲೆಲ್ಲಿ ಹೇಗೆ, ಏಕೆ ಮಾಡುತ್ತಿದ್ದಾರೆ ಎಂಬುದನ್ನೂ ಸಾದರಪಡಿಸಿದ್ದಾರೆ. ಮಳೆಕೊಯ್ಲು ಮಾಡದಿದ್ದರೆ ಆಗುವ ಭಯಾನಕತೆಯ ಅನುಭವವನ್ನು ಮೂಡಿಸುತ್ತಾ, ಈಗಲೇ ಕಾರ್ಯಪ್ರವೃತ್ತರಾಗುವಂತಹ ಅತಿ ಸುಲಭದ, ಕಡಿಮೆ ಖರ್ಚಿನ ಉಪಾಯವನ್ನೂ ತಿಳಿಸಿದ್ದಾರೆ. ಅಂತರ್ಜಲ ಇಲ್ಲ ಎನ್ನುವ ರೋದನವನ್ನು ತಡೆಹಿಡಿಯುವ ಹಾಗೂ ಅಂತರ್ಜಲವನ್ನು ಹೆಚ್ಚಿಸುವ ದಾರಿಯನ್ನು ತಿಳಿಹೇಳುವುದು ಈ ಲೇಖನದ ಆಶಯವಾಗಿದೆ.*

**ಶಬ್ದಾರ್ಥ :**

ಹೊಕ್ಕಾಗ - ಸೇರಿದಾಗ; ಬತ್ತು - ಒಣಗು; ನೀರಿಲ್ಲದಾಗು; ಪ್ರಯೋಜನ - ಲಾಭ, ಉಪಯೋಗ; ಇಂಗಿಸು - ಹೀರುವಂತೆ ಮಾಡು; ಪೋಲು - ದುರ್ಬಳಕೆ; ತಡೆ - ಒಡ್ಡು;

ಪ್ರಾಕೃತಿಕ - ಪ್ರಕೃತಿಗೆ ಸಂಬಂಧಿಸಿದ; ಪೂರ್ವಜರು - ಹಿಂದಿನವರು; ನೈಸರ್ಗಿಕ - ಸ್ವಾಭಾವಿಕ; ಶೇಖರಣೆ - ಸಂಗ್ರಹ; ಭೂಗರ್ಭ - ಭೂಮಿಯ ಒಳವೈ; ಕುಸಿ - ಕುಗ್ಗು; ಬಡಾವಣೆ - ವಿಸ್ತರಣ; ಋತು - ವರ್ಷದ ಎರಡೆರಡು ತಿಂಗಳುಗಳ ಅವಧಿ; ಪ್ರಜ್ಞಾಪೂರ್ವಕ - ತಿಳಿವಳಿಕೆಯಿಂದ; ಗುಂಡಿ - ತಗ್ಗು, ಕುಳಿ; ಸೈ - ಸರಿ; ನಗದು - ಕೈಯಲ್ಲಿರುವ ಹಣ; ದುರಸ್ತಿ - ರಿಪೇರಿ; ಮಂದಿ - ಜನ; ಪಾರಂಪರಿಕ - ಪರಂಪರೆಯಿಂದ ಬಂದುದು.

ಟಿಪ್ಪಣಿ :

| | |
|---|---|
| ಅಂತರ್ಜಲ | - ಭೂಮಿಯ ಒಳಗಿರುವ ನೀರು |
| ಕಾಂಕ್ರೀಟೀಕರಣ | - ರಸ್ತೆಗಳಿಗೆ ಹಾಗೂ ಕಟ್ಟಡಗಳಿಗೆ ಕಾಂಕ್ರೀಟು ಹಾಕುವುದು. |
| ಸಮತಲ ಬದು | - ಸಮುದ್ರ ಮಟ್ಟಕ್ಕೆ ಸಮಾಂತರವಾದ ಉಬ್ಬು ರಚನೆ. |
| ತುಂಡು ಅಗಳು | - ಎಡೆಬಿಟ್ಟು ಎಡೆಬಿಟ್ಟು ತೆರೆದ ಕಣಿ. |
| ನೊಣಪ್ರತಿ | - ಇದ್ದದ್ದನ್ನು ಇದ್ದಂತೆಯೇ ನಕಲು ಮಾಡುವುದು. |
| ಇಂಗುಕೊಳ | - ನೀರನ್ನು ನೆಲದೊಳಕ್ಕೆ ಇಂಗಿಸಿ ಸಂಗ್ರಹಿಸುವ ವಿಧಾನ |
| ಸ್ಪಂಜು | - ನೀರನ್ನು ಹೀರಿ ಇಟ್ಟುಕೊಳ್ಳಬಲ್ಲ ಮೃದುವಸ್ತು. (sponge) |
| ಗೋಕುಂಟೆ | - ಬಯಲು ಸೀಮೆಯಲ್ಲಿ ದನ[illegible]ಗಾಗಿ ಮಾಡುವ ಪುಟ್ಟಕೆರೆ. |
| ಮದಕ (ಗ) | - ಮಳೆಗಾಲದಲ್ಲಿ ನೀರು ಸಂಗ್ರಹಗೊಳ್ಳುವ ತಗ್ಗು ಪ್ರದೇಶ. |
| ಯಶೋಗಾಥೆ | - ಯಶಸ್ಸಿನ ಬಗ್ಗೆ ಹೇಳಿಕೊಳ್ಳುವ ಘಟನೆಗಳು. |
| ಹೂಳು | - ಜಲಾಶಯದ ತಳದಲ್ಲಿ ತುಂಬಿಕೊಳ್ಳುವ ದಟ್ಟವಾದ ಕೆಸರು. |

## ಅಭ್ಯಾಸ

ಪ್ರಶ್ನೆಗಳು :

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ರಾಘಣ್ಣ ತಲೆಗೆ ಕೈಹೊತ್ತು ಕುಳಿತುಕೊಳ್ಳಲು ಕಾರಣವೇನು?

೨. ಟೂರ್ ಹೋದಾಗ ಏನು ಕಲಿತು ಬಂದಿದ್ದೇನೆಂದು ಶೇಖರ ಹೇಳಿದ?

೩. ಬಾವಿ ಬತ್ತಿದರೆ ಏನು ಮಾಡಬೇಕು ಎಂದು ಸುತ್ತಮುತ್ತಲಿನವರು ಹೇಳುತ್ತಾರೆ?

೪. ನೀರಿಂಗಿಸುವ ಪ್ರಯೋಗ ಸಫಲವಾದರೆ ಏನು ಮಾಡುತ್ತೇನೆಂದು ರಾಘಣ್ಣ ಹೇಳಿದ?

೫. ಬಯಲುಸೀಮೆಯಲ್ಲಿ ಯಾವುದು ಹಾಳಾಗಿದೆ ಎಂದು ಶೇಖರ ಹೇಳಿದ?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಮಳೆಕೊಯ್ಲಿನ ಉಪಯೋಗ ಯಾರ್‍ಯಾರು ಹೇಗೆ ಪಡೆದಿದ್ದಾರೆ ಎಂದು ಶೇಖರ ಹೇಳಿದ?

೨. ಮಳೆನೀರು ಭೂಮಿಯೊಳಕ್ಕೆ ಇಳಿಯುವುದು ಕಡಿಮೆಯಾಗುತ್ತಿದೆ ಏಕೆ?

೩. ಮಳೆಕೊಯ್ಲಿನ ಕ್ರಮಗಳಾವುವು?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಜಲಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯಲು ಕಾರಣವೇನು?

೨. ನೀರಿಂಗಿಸಲು ಹಣದ ಖರ್ಚೇ ಇಲ್ಲ, ಏಕೆ?

ಈ. ಕೆಳಗಿನವುಗಳಿಗೆ ಟಿಪ್ಪಣಿ ಬರೆಯಿರಿ.

೧. ಮಳೆಕೊಯ್ಲು೨. ನೀರಿಂಗಿಸುವುದರಿಂದ ಪ್ರಯೋಜನ

ಉ. ಕೆಳಗಿನ ವಾಕ್ಯಗಳ ಸಂದರ್ಭ ಸ್ವಾರಸ್ಯ ವಿವರಿಸಿರಿ.

೧. ಕೊಳವೆ ಬಾವಿ ಕೊರೆಯುವುದರಲ್ಲಿ ಸಾಮಾಜಿಕ ನ್ಯಾಯ ಇಲ್ಲ.

೨. ಮಳೆ ಒಂದು ಖಾಲಿ ಚೆಕ್ಕಿನ ಹಾಗೆ

೩. ದಾರಿ ಕಾಣದವರು ತುಂಬಾ ಮಂದಿ ಇದ್ದಾರೆ.

## ಭಾಷಾಭ್ಯಾಸ

ಅ. ಕೆಳಗೆ ಕೆಲವು ಇಂಗ್ಲಿಷ್ ಪದಗಳನ್ನು ಕನ್ನಡೀಕರಿಸಿ ಕೊಡಲಾಗಿದೆ. ಇಂತಹ ಹತ್ತು ಪದಗಳನ್ನು ಬರೆಯಿರಿ.

ಟೂರು, ರೈನ್‌ಸೆಂಟರು, ಸ್ಪಂಜು, ಚೆಕ್ಕು, ಫೋನು

ಆ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಅತ್ಯುತ್ತಮ, ಸ್ವಲ್ಪಾಂಶ, ದೇಶದುದ್ದಗಲ, ಮಳೆಗಾಲ

ಇ. ಕೆಳಗಿನ ಪದಗಳ ನಾನಾರ್ಥ ಬರೆಯಿರಿ.

ಬಳಿ, ಮರಳು, ಸರಿ, ಕಾಡು, ಪಡೆ

ಈ. 'ಪಟಪಟನೆ' - ಇಂತಹ ಐದು ಅನುಕರಣಾವ್ಯಯ ಪದಗಳನ್ನು ಬರೆಯಿರಿ.

ಉ. ಕೆಳಗಿನ ನುಡಿಗಟ್ಟುಗಳ ಅರ್ಥ ಬರೆದು ಸ್ವಂತ ವಾಕ್ಯ ಮಾಡಿರಿ.

ತಲೆಗೆ ಕೈಹೊತ್ತು ಕುಳಿತುಕೊ, ಹೊರಹಾಕು, ದಾರಿ ಕಾಣದವರು, ಕಟ್ಟಕಡೆ

## ಚಟುವಟಿಕೆ

೧. 'ನೆಲದ ಗುಣ ನೀರಿಗೆ; ನಾಡಿನ ಗುಣ ಜನರಿಗೆ' - ಈ ಗಾದೆಯನ್ನು ವಿಸ್ತರಿಸಿ ಬರೆಯಿರಿ.

೨. 'ಮಳೆಕೊಯ್ಲಿ'ನ ವ್ಯವಸ್ಥೆಯ ಬಗ್ಗೆ ನಿಮ್ಮ ಗೆಳೆಯನಿಗೊಂದು ಪತ್ರ ಬರೆಯಿರಿ.

# ೯. ಮಗುವಿನ ಕರೆ

ದತ್ತಾತ್ರೇಯ ರಾಮಚಂದ್ರ ಬೇಂದ್ರೆ

**ಆಶಯ**

ಮಾನವತೆಯ ಹಿರಿಮೆ, ಬಾಳಿನ ಮೌಲ್ಯ ಇತ್ಯಾದಿಗಳನ್ನು ಬೆಳಗಿಸಲು ಸಣ್ಣಕಥಾ ಮಾಧ್ಯಮವನ್ನು ಬಳಸಲಾಯಿತು. ಧ್ವನಿ, ಪ್ರತಿಮೆ ಮತ್ತು ಸಂಕೇತಗಳ ಮೂಲಕವೂ ಅನುಭವಕ್ಕೆ ಮಾತಿನ ಶರೀರ ಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಸಣ್ಣಕತೆಯ ವಸ್ತು ಮಾನವ ಸಮಾಜದಲ್ಲೇ ಇರುವಂಥದ್ದು ಹಾಗೂ ವಾಸ್ತವಕ್ಕೆ ಹತ್ತಿರವಾದುದು.

ಪಾಶ್ಚಾತ್ಯ ಸಾಹಿತ್ಯ ಪ್ರಭಾವಗಳಿಂದ ಸಣ್ಣಕತೆಯು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ಬೆಳೆಯಿತು.

ಮಟಮಟ ಮಧ್ಯಾಹ್ನ. ಅಂಥ ಬಿಸಿಲಿನಲ್ಲಿ ಆ ಹಳ್ಳಿಯಲ್ಲಿ ಕೂಡ ಯಾರೂ ಮನೆಯಿಂದ ಹೊರಬೀಳಲಾರರು. ಆದರೆ ಶಾಸ್ತ್ರಿಗಳ ಸೊಸೆಯು ಮಧ್ಯಾಹ್ನ ಕುಡಿಯುವ ನೀರು ತರಲು ಊರ ಹೊರಗಿನ ಬಾವಿಗೆ ಹೊರಟಳು. ಏನು ದಿವ್ಯ ಮಾಡಿದಳು? ಎಂದು ಯಾರಾದರೂ ಕೇಳಬಹುದು. ಬಾವಿಯಿಂದ ಹಳ್ಳಿಯ ಕೊನೆಯ ಮನೆ ಅರ್ಧ ಮೈಲು ದೂರವಿತ್ತು. ಆಲದ ಹಾಗೂ ಹುಣಸೆಯ ಎರಡು ದೆವ್ವದಂಥ ಮರಗಳ ಹೊರತು ಆ ಬಾವಿಯ ಸಮೀಪಕ್ಕೆ ಬೇರೆ ಉಲಿವು ಯಾವುದೂ ಇರಲಿಲ್ಲ. ಹಳೆಯ ಕೋಟೆಯ ಹಾಗೂ ಕಂದಕದೊಳಗಿಂದ ಹೊರಬೀಳುವ ಕಾಡುಮಿಕಗಳು ಹಳ್ಳಕ್ಕೆ ನೀರು ಕುಡಿಯಲು ಹೊರಟಿದ್ದವೇನೋ. ಅದೇ ಸದ್ದು ಬಾವಿಯ ಬಳಿ ಕೇಳಿಸಿರಬೇಕು. ಆದರೆ ಆ ಸದ್ದು ಎಂಥ ಸದ್ದು! ಹೆದರಿಸುವ ಸದ್ದು. ಮರಗಳ ನೆರೆಯಾದರೂ ಆ ಬಾವಿಯ ಭಯಾನಕತೆಯನ್ನೆ ಹೆಚ್ಚಿಸುತ್ತಿದ್ದವು. ಕುಡಿಯುವ ನೀರಿನ ಬಾವಿಯು ಆ ಊರಿಗೆ ಅದೊಂದೆ. ಎಲ್ಲರಂತೆ ಶಾಸ್ತ್ರಿಗಳ ಮನೆಯವರೂ ಪ್ರಾತಃಕಾಲಕ್ಕೆ ತಮಗೆ ಬೇಕಾಗುವ ನೀರು-ನಿಡಿ ತಂದುಕೊಂಡಿದ್ದರು. ಆದರೆ ಮಡಿಯೊಳಗೆ ಇದ್ದ ಒಂದೇ ಒಂದು ಕೊಡವು ಶಾಸ್ತ್ರಿಗಳ ಮನೆಯ ಸಂದಿಯ ಸಮಾರಾಧನೆಯಲ್ಲಿ ಉರುಳಿತ್ತು. ಅದರಿಂದ ಅಡುಗೆಯ ಮನೆಯಲ್ಲಿಯೇ ಆದ ತೊಂದರೆ ಇರಲಿ, ಶಾಸ್ತ್ರಿಗಳ ಸೊಸೆ ನೀರಿಗೆ ಹೊರಡಬೇಕಾಯಿತು.

ಶಾಸ್ತ್ರಿಗಳ ಮನೆಯ ತೊಂದರೆಯನ್ನು ಅದನ್ನು ನೋಡಿದವರೆ ತಿಳಿಯಬಲ್ಲರು. ಪುರಾತನ ಕಾಲದಲ್ಲಿ ಬಹಳ ದೊಡ್ಡ ಮನೆಯಂತೆ. ಈಗ ಅಣ್ಣ ತಮ್ಮಂದಿರಲ್ಲಿ ನಿಜವಾಗಿಯೆ ನೂರಾರು ಪಾಲಾಗಿ ಅವರ ಪಾಲಿಗೆ ಎರಡೂವರೆ ಗೇಣಿನ ತುಂಡೊಂದು ಬಂದಿತ್ತು. ಅಷ್ಟರಲ್ಲಿ ಅವರು, ಅವರ ಕುಟುಂಬ, ಹಿರಿಯ ಮಗ, ಸೊಸೆ, ವಿಧವೆಯಾಗಿ

ಮನೆಗೆ ಬಂದ ತರುಣ ಮಗಳೊಬ್ಬಳು, ಇಷ್ಟು ಜನರು ಮಾನದಿಂದ ಬದುಕು ಮಾಡುತ್ತಿದ್ದರು. ಶಾಸ್ತ್ರಿಗಳ ದುರ್ದೈವದಿಂದ ಅವರ ಹಿರಿಯ ಮಗನು ವ್ಯಾಧಿಯಿಂದಲೋ ಬಾಧೆಯಿಂದಲೋ ಮನೆಯ ಒಂದು ಭಾಗವನ್ನು (ಇದ್ದ ಒಂದು ಅಡಕಲಕೋಣೆ) ಹಿಡಿದು ನರಳುತ್ತಿದ್ದ. ಚೊಚ್ಚಿಲ ಮೊಮ್ಮಗನು ಮೊನ್ನೆ ಮೊನ್ನೆ ಬಂದು ಅಡಿಗೆ ಮನೆಯ ಒಂದು ಭಾಗವನ್ನು ಕಟ್ಟಿಕೊಂಡಿದ್ದ. ಪಡಸಾಲೆಯೆಂಬ ಹೆಸರಿನ ಭಾಗವು (ಆ ಮನೆಗೆ ನಡುಮನೆಯೇ ಇರಲಿಲ್ಲ) ಶಾಸ್ತ್ರಿಗಳ ಅಧ್ಯಯನ - ಅಧ್ಯಾಪನ - ಶಯನ - ವಿಶ್ರಾಂತಿ ಇವೆಲ್ಲಕ್ಕೂ ಆಶ್ರಯವಾಗಿತ್ತು. ಮಡಿಯ ಸಾಮ್ರಾಜ್ಯವೆಲ್ಲ ಅಡಿಗೆಮನೆಯನ್ನು ಸೇರಿತ್ತು. ಅಲ್ಲಿಯೇ ಮೊಮ್ಮಗನು ಬಿಡಾರ ಬಿಟ್ಟಿದ್ದನು. ಅಡಿಗೆಯ ಒಲೆಯ ಉರಿಯನ್ನೇ ಧೂಪ-ದೀಪವೆಂದೂ, ಅದೇ ಅಡಿಗೆಯನ್ನೇ ನೈವೇದ್ಯ ಎಂದೂ ತೋರಿಸುವಷ್ಟು ಸಮೀಪ, ದೇವರ ಸಾನ್ನಿಧ್ಯವಿತ್ತು. ಮೀಸಲು ನೀರು ಈ ಸಂದಿಯಲ್ಲಿಯೇ ತನ್ನ ಪ್ರತ್ಯೇಕ ಪ್ರತಿಷ್ಠೆಯನ್ನು ಸಾರಿತ್ತು. ಶಾಸ್ತ್ರಿಗಳ ಸೊಸೆಯು ಮಡಿಯ ನುಸುಳಾಟದಲ್ಲಿ ಇಣಚಿಗಿಂತ ಹೆಚ್ಚಿನ ಚಪಲತೆಯನ್ನು ತೋರಿಸುತ್ತಿದ್ದಳು. ಆದರೂ ಅವಳ ಕಾಲುತಾಕಿ ಕೊಡ ಉರುಳಿ ಅಗ್ನಿದೇವರು ಶಾಂತರಾಗಿ, ದೇವರು ಜಲಸಮಾಧಿ ಹೊಂದಿದರು. ಪೂಜೆಯು ಆಗಿತ್ತು, ಅಡಿಗೆಯೂ ತೀರುತ್ತ ಬಂದಿತ್ತು. ಊಟಕ್ಕೆ ಕೂತ ಕಾಲಕ್ಕೆ ಕಳ್ಳ ಬಂದಂತೆ ಈ ಅನಾಹುತವಾಗಿ, ಶಾಸ್ತ್ರಿಗಳ ಮುಖದಲ್ಲಿ ಬೆಂಕಿ ಕಾಣದಿದ್ದರೂ ಹೊಗೆ ಮುಸುಕಿತು. ಅವರು ತಮ್ಮ ಹೆಂಡತಿಯನ್ನೆ ಸಿಟ್ಟಿನ ಅಸಮಾಧಾನದಿಂದ ನೋಡಿದರು. ಶಾಸ್ತ್ರಿಗಳ ಪತ್ನಿ ಶಾಂತ ಸ್ವಭಾವದವರಾದರೂ "ಮಹಾರಾಯತೀ, ಏನು ಮಾಡಿಟ್ಟೇ! ಎಲ್ಲಿಯಾದರೂ ನೀರು ತಂದು ನಮ್ಮ ಇಲ್ಲಿಯ ಸೆರೆ ಬಿಡಿಸು. ಮುಂಜಾವಿನಿಂದ ಒಲೆ ಹಿಡಿದು ಕೂತಿದ್ದೇನೆ. ಹೊಗೆಯಾಗದೆ ಉರಿಯಾಗಬೇಕು. ಬಿಸಿ ಹತ್ತದೆ ಬೆಂಕಿ ಇರಬೇಕು. ಇಷ್ಟಾಗಿ ಎಲ್ಲರಿಗೂ ಬೇಗನೆ ಪ್ರಸಾದ ಸಿಗಬೇಕು. ನಾನಾದರೂ ಏನು ಸಾಯಲಿ!" ಎಂದು ತುಸು ರಂಬಾಟವನ್ನೇ ಮಾಡಿದರು. ಸೊಸೆ ಪಿಟ್ಟನ್ನದೆ ಕೂಡಲೇ ಕೊಡ, ಹಗ್ಗ ತಕ್ಕೊಂಡು ನೀರಿಗೆ ಹೊರಟಳು.

ನಾದಿನಿ ಅತ್ತಿಗೆಯ ಕೂಡ ಹೊರಡಲಿಲ್ಲ, ಏನೋ ಮುಸುಗುಟ್ಟಿದಳು. ಶಾಸ್ತ್ರಿಗಳ ಸೊಸೆಗೆ ತಾನು ಚೊಚ್ಚಲ ಗಂಡು ಹಡೆದು ಬಂದ ಸುಖ ಇರಲಿ, ಹಡದದ್ದೇ ಮಹಾಪರಾಧವಾಗಿದೆಯೇನೋ ಎನಿಸಿತ್ತು. ಅತ್ತೆಯ ಮನೆಗೆ ಬಂದಂದಿನಿಂದ, ಹುಡುಗನ ಕಾಲಗುಣ ಕೆಟ್ಟ ಎಂದು ಯಾರೋ ಅಂದಿದ್ದರು ಬೇರೆ. ಯಾಕಂದರೆ ಹುಡುಗನ ತಂದೆಗೆ ಭ್ರಮೆ ಹಿಡಿದಂತಾಗಿತ್ತು. ಎರಡು ತಿಂಗಳಿಂದ ಶಾಸ್ತ್ರಿಗಳ ಹೆಂಡತಿಗೆ ತಮ್ಮ ಮಗನ ಕಷ್ಟದಿದಿರು ಮೊಮ್ಮಗನ ಸುಖ ಮಸುಕಾಗಿತ್ತು. ಬಡವರ ಸೊಸೆಗೆ ನಾಲಿಗೆ ಸಡಿಲು ಬಿಡಬಲ್ಲವರೆಲ್ಲ ಅತ್ತೆಗಳೇ! ನೆರೆಮನೆಯ ಗುಬ್ಬೆಯೊಬ್ಬಳು "ಅವಳಿಗೆ ಹುಚ್ಚಗಂಡ

ಬೇಕಾಗಿದ್ದನೆಲ್ಲಿ?" ಎಂದು ಇವಳ ಕಿವಿಗೆ ಬೀಳುವಂತೆ ಆಡಿದ್ದಳು. ಊರ ಅತ್ತೆಯೊಬ್ಬಳು "ಹುಡುಗನ ಮುಖ ಅತ್ತೆಯ ಮನೆಯವರಾರಂತೆಯೂ ಇಲ್ಲ. ಅಜ್ಜನಂತೆ ಇಲ್ಲ?" ಎಂದು ಪ್ರಕಟನೆ ಹೊರಡಿಸಿದ್ದಳು. ಹಾಳುಗುಡಿಯ ಒಕ್ಕಣ್ಣ ಪೂಜಾರಿಯೊಬ್ಬ ಈಕೆಯನ್ನು ಕಂಡಾಗ್ಗೆ ಪಿಸಿ ಪಿಸಿ ನಕ್ಕಿದ್ದ. ಯಾರಾರೋ ಏನೇನೋ ಅಂದಿದ್ದರು. ಮಟಮಟ ಮಧ್ಯಾಹ್ನದಲ್ಲಿ ಮಸಣದ ನಾಲ್ಕು ಭೂತಗಳು ಕವಕ್ಕೆಂದು ಬಂದಂತೆ ಅವಳ ಜೀವ ಹೆದರಿಕೊಂಡಿತು. ನೆನೆಸಿದಂತೆ ರೋಸಿಗಿಟ್ಟಿತು. ತಾನು ಯಾರಿಗೆ ಬೇಕಾಗಿದ್ದೇನೆ? ನನ್ನ ತಾಯಿಗೆ? ಅಯ್ಯೋ ಪಾಪ, ಅವಳಿಗೆ ತಾನೊಂದು ಭಾರ. ಮದುವೆಯಾಗುವ ಮುಂಚೆ ಒಂದು ರೀತಿ; ಆದಮೇಲೆ ಇನ್ನೊಂದು ರೀತಿ. ತನ್ನ ತಾಯಿಗೆ ತಾನಲ್ಲದೆ ಯಾರಿದ್ದಾರೆ? ಹೌದು, ಅಂತೆಯೇ ತಾನು ಭಾರ. ಸಂಸಾರ ಸುಖವಾಗಿ ಇದ್ದರೆ ಅದೆಲ್ಲ ಸರಿಯಿತ್ತು. ಈಗ? ತಾನು ಅವಳೆದೆಗೆ ಹುಣ್ಣು. ತನ್ನ ಗಂಡನಿಗೆ ತಾನು ಬೇಡವಾಗಿರುವೆನೆ? ಇಲ್ಲ. ಬೇಕಾಗಿರುವೆನೆ? ಅದೂ ಇಲ್ಲ. ಅವರಿಗೆ ಅವರ ಜೀವ ಸಾಕಾಗಿದೆ. ಕೂಸು ಬಂದು ತಿಂಗಳಾಗಿ, ಅವರು ಅದರ ಹೆಸರನ್ನೆತ್ತಿಲ್ಲ. ಕಣ್ಣೆತ್ತಿ ನೋಡಿರುವರೋ ಇಲ್ಲವೋ, ಪಾಪ! ಅವರೆಚ್ಚರ ಅವರಿಗಿಲ್ಲ. ಹೌದು. ನಾನು ಹೆಂಗಸು. ಊರವರೂ ಮನೆಯವರೂ ಕೂಡಿಯೇ ಹರಿದು ತಿಂದರೆ ನಾನೇನು ಮಾಡಬೇಕು? ಅತ್ತೆ- ಮಾವಂದಿರಿಗೆ ನಾನಾರು? ಮಗ ಬೇಕಾದರೆ ಜಗ ಬೇಕು. ತಾನಾರಿಗೂ ಬೇಕಾಗಿಲ್ಲ. ತನಗಾರಾದರೂ ಕರುಣೆ ನೀಡುವರೇ? ಎಂದು ಆಕೆ ಸುತ್ತುಮುತ್ತು ನೋಡಿದಳು. ಹುಣಿಸೆಮರ, ಹಾಳುಗೋಡೆ, ಬೀಳುಹೊಲ - ನೀನು ಹಾಳು ಬಾವಿ ಬಿದ್ದರೆ ನಮಗೇನು - ಎನ್ನುವವರಂತೆ ತಟಸ್ಥ ಭಾವದಿಂದಿದ್ದವು. ಬಾವಿಯಲ್ಲಿ ಗೂಡು ಮಾಡಿದ ಹಕ್ಕಿಗಳು ಜಕ್ಕಣಿ - ಕರೆದಂತೆ ಗುಬ್ಬಳಿಸಿದವು. "ನೀರಿನ ತಳವೇ ನಿನಗೆ ತವರು, ಬಾ" ಎನ್ನುವಂತೆ ತಣ್ಣನೆಯ ನೀರು ಕಣ್ಣ ಸೆಳೆದಿತು. ಈಕೆ ಬಾವಿಯನ್ನು ಹಣಿಕಿ ಹಾಕಿದಾಗ ಬಿದ್ದ ಕಣ್ಣೀರಿಗೆ ನೀರು ನಡುಗಿತು. ಈಗಾಗಲೇ ತನ್ನ ಜೀವ ನೀರಿನ ತಳಕ್ಕೆ ಹೋಗಿ ಕುಳಿತಂತೆ ತನ್ನ ಪ್ರತಿಬಿಂಬ ತೋರಿತು. ಹೌದು ತಾನು ಅಲ್ಲಿಗೆ ಹೋಗಬೇಕು. ಅಲ್ಲಿ ಬಯ್ಯುವವರಿಲ್ಲ, ಬಾರಿಸುವವರಿಲ್ಲ. ಎಲ್ಲವೂ ತಣಿವು, ತಣ್ಣಗೆ; ಅವಳ ಪ್ರೇತವು ಅವಳನ್ನು ಈಗಲೇ ಪಾಣಿಗ್ರಹಣ ಮಾಡಿ ಎಳೆಯುತ್ತಿತ್ತು.

ತಾನು ನೀರಿಗೆ ಬಂದವಳು, ಎಷ್ಟು ಹೊತ್ತಾಯಿತು, ಏನು ಮಾಡುತ್ತಿರುವಳೆಂಬ ಅರಿವು ಅವಳಿಗಿರಲಿಲ್ಲ. ಒಂದು ಲೋಕದ ಗುರುತ್ವಾಕರ್ಷಣದ ತಕ್ಕೆಯನ್ನು ತಪ್ಪಿಸಿಕೊಂಡ ಧೂಮಕೇತುವೊಂದು ಅಧೋಲೋಕಕ್ಕೆ ಧುಮುಕಲು ಹೊರಟಂತೆ ಅವಳ ಜೀವದ ಚಿಕ್ಕೆಯು ತನ್ನ ಬಂಧುಗಳನ್ನೆಲ್ಲ ತಟತಟನೆ ಹರಿದುಕೊಂಡು ಬೇರೆ ಸೆಳವಿಗೆ ಬಿದ್ದಿತ್ತು. ಕೊಡಕ್ಕೆ ಕಟ್ಟಬೇಕಾದ ಉಕ್ಕಡವನ್ನು ಅವಳು ತನ್ನ ಕೊರಳಿಗೆ ಕಟ್ಟಿಕೊಂಡಳು. ನೆರೆಯ

ಹುಣಸೆಯ ಮರದಿಂದ ಹಾಲಕ್ಕಿಗಳೆರಡು ಚಿಲಿಪಿಲಿಗುಟ್ಟಿದವು. ಈಕೆ ತಾನಿದೇನು ಮಾಡುತ್ತೇನೆಂದು ಕೊರಳಿನ ಕುಣಿಕೆಯನ್ನು ನಡುವಿಗೆ ಬಿಗಿದು ಸರಿ ಮಾಡಿದಳು. ಅವಳ ಕೆಲಸವೆಲ್ಲ ಮೈದುಂಬಿದಂತೆ ಆವೇಶದಿಂದ ಸಾಗಿತ್ತು. ಹಗ್ಗದ ಒಂದು ತುದಿಯನ್ನು ಅವಳು ಮೇಲಿನ ತೊಲೆಯ ಅಡ್ಡಗಂಬಕ್ಕೆ ಬಿಗಿದಳು. ಬಾವಿಗೆ ನಮಸ್ಕಾರ ಮಾಡಿದಳು. ಸೂರ್ಯನಿಗೆ ನಮಸ್ಕಾರ ಮಾಡಿದಳು. ತನ್ನ ಸೆರಗು, ಕೂದಲು ಸಾವರಿಸಿಕೊಂಡಳು. ಬಾವಿಯ ತುದಿಗೆ ತನ್ನ ಪಾದ ಇಟ್ಟಳು.

ಹಿಂದೆ ಯಾರದೋ ಕಾಲ ಸಪ್ಪಳವಾಯಿತು. ಹಿಂದಿರುಗಿ ನೋಡಿದಳು. ಯಾರೂ ಇರಲಿಲ್ಲ. ಅವಳು ಹಗ್ಗವನ್ನು ಮೈಗೆ ಸುತ್ತಿಕೊಂಡಳು. ಭಾವಿಯಲ್ಲಿ ಇಳಿಯಲು ಸಿದ್ಧಳಾದಳು. ಯಾರೋ ಅತ್ತಂತಾಯಿತು. ಅದಾರು? ಯಾರ ಗೊಡವೆ ಇವಳಿಗೇನು? ಇವಳಿಗಾರಿದ್ದಾರೆ? ಅವಳು ಹಗ್ಗವನ್ನು ನಮಸ್ಕರಿಸಿದಳು. ಯಾರೋ ಕೂಗಿದರೇನು? ಕೂಗಿದರೋ? - ಅತ್ತರೋ? ತನ್ನ ಕೂಸೇನು? ಕುಡಿದು ಮಲಗಿ ಬಹಳ ಹೊತ್ತಾಯಿತು. ಎದ್ದಿರಬಹುದು. ಹಸಿದಿದ್ದೀತು. ಏಕೆ ಅತ್ತಿರಲಾರದು?

ಅವಳು ತನ್ನ ಹಗ್ಗದ ಸುತ್ತನ್ನು ಬಿಡಿಸಿದಳು, ಉಕ್ಕಡವನ್ನು ಉಚ್ಚಿದಳು. ಬರಿ ಕೊಡವನ್ನು ಬಗಲಿಗೆತ್ತಿ ಹೊರಟಳು. ಎಲ್ಲಿಗೆ? ಎಲ್ಲಿ ಮನೆ? ಎಲ್ಲಿ ಬಾವಿ? ಕೂಗುವವರಾರು? ಕೇಳಿಸಿದ್ದೇನು? ಈಗಾರೂ ಅಳುತ್ತಿಲ್ಲ, ಕರೆಯುತ್ತಿಲ್ಲ. ತಾನು ಹುಚ್ಚಿ, ತನ್ನ ಭ್ರಮೆ ಇದು. ಆಕೆ ಮತ್ತೆ ಬಾವಿಯತ್ತ ಹೊರಳಿದಳು. ಅಗೋ ಕಾಳ್ ಕಾಳ್ ಎಂದು ಮಗುವಿನ ಅಳುವು, ಕರೆ! ಆಕೆ ಮತ್ತೆ ಮನೆಯತ್ತ ಹೊರಳಿದಳು. ಅತ್ತ ನೋಡಿದಳು, ಇತ್ತ ನೋಡಿದಳು; ಮಟಮಟ ಮಧ್ಯಾಹ್ನ! ಬಾವಿಯಲ್ಲಿ ಗೂಡು ಮಾಡಿದ ಹಕ್ಕಿಗಳೆರಡು ಕೂಜಿಸುತ್ತ ಅತ್ತ ಹೋದವು. ತನ್ನ ಕೊಡ ಬರಿದು. ತಾನು ಬಂದು ಎಷ್ಟು ಹೊತ್ತಾಯಿತು! ಆಕಾಶವಾಣಿ ಬಂದಂತೆ ಇನ್ನೂ ಕೂಸು ಕರೆಯುತ್ತಿದೆ. ಪಾಪ, ಅದಕ್ಕೆ ತಾನಲ್ಲದೇ ಯಾರು? ಅತ್ತೆಯವರಿಗೆ ಮಾವನವರಿದ್ದಾರೆ. ಮಾವನವರಿಗೆ ಅವರ ಮಗನಿದ್ದಾನೆ. ಅವರಿಗೆ ತಾನಿಲ್ಲದಿದ್ದರೆ ಇನ್ನೊಬ್ಬಳು ಮಾಲೆ ಹಿಡಿದು ಕುಳಿತಿದ್ದಾಳು! ತನ್ನ ಮಗುವಿಗೆ ತಾನಲ್ಲದೆ ಯಾರು? ಹೌದು, ತನ್ನ ತಾಯಿಗೆ ತಾನಲ್ಲದೆ ಯಾರು? ಬರುವವಳು ಬಂದಾಗ ಬರಲಿ, ಭ್ರಮೆ ಹಿಡಿದವರ ಕೈ ಬಿಡುವದೇ? ಅವರು ತನಗೆ ಏನೂ ಅಂದಿಲ್ಲವಲ್ಲ! ತನ್ನನ್ನು ಕಣ್ಣೀರ್ಣಿಂದು ನೋಡುತ್ತಾರೆ. ಹೌದು, ಅವರೂ ಹಸಿದಿದ್ದಾರೆ. ಮಾವನವರು ಏನಂದಾರು? ಅತ್ತೆಯವರು ಏನೆಂದುಕೊಂಡಿರಬಹುದು? ಏನು ನೊಂದುಕೊಂಡಿರಬಹುದು!

ವಾತ್ಸಲ್ಯ, ಪತಿಭಕ್ತಿ, ಕೃತಜ್ಞತೆ, ಆದರ, ಇವೆಲ್ಲ ನಾಲ್ಕೆಳೆಯ ಹಗ್ಗವಾಗಿ ಹೊಸೆದು ಆಕೆಯನ್ನು ಮನೆಯತ್ತ ಎಳೆಯಹತ್ತಿದವು. ಆಕೆ ಬಾವಿಗೆ ಬಂದು ಕೊಡ ಸೇದಿದಳು.

ಬಿರಬಿರನೆ ಮನೆಗೆ ಹೊರಟಳು. ಕೂಸಿನ ದನಿ ಕಿವಿದುಂಬಿತ್ತು. ವಾತ್ಸಲ್ಯವು ಎದೆದುಂಬಿ ಬಂದಿತ್ತು.

ಹಾದಿಯಲ್ಲಿ ಒಬ್ಬ ಮುತ್ತೈದೆ ಎಷ್ಟೊತ್ತಿಗವ್ವಾ ನೀರಿಗೆ ಹೋಗೋದು ಎಂದಳು. ಗುಡಿಯ ಹತ್ತಿರ ಬೆಕ್ಕೊಂದು ಬಲಕ್ಕೆ ಹೋಯಿತು. ಈಕೆ ದೇವರಿಗೆ ತಲೆ ಬಾಗಿಸಿದಳು. ಕೈಜೋಡಿಸುವ ಸನ್ನೆ ಮಾಡಿದಳು. ಮನೆಗೆ ಬಂದಾಗ ಮಾವನವರು ತಾಂಬೂಲ ಮೆಲ್ಲುತ್ತಿದ್ದರು. ಕೂಸು ಯಜಮಾನರ ತೊಡೆಯ ಮೇಲಿತ್ತು. ಅತ್ತೆ "ಬಾ, ತಾಯಿ, ಬಿಸಿಲಲ್ಲಿ ಹೋಗಿದ್ದಿ, ಬಾವಿಯ ಮೇಲೆ ಯಾರಿರತಾರ? ನಾನೇ ಕಳಿಸಬಾರದಿತ್ತು" ಎಂದು ಮರುಗಿದಳು.

ಕೊಡವನ್ನು ದೇವರ ಬದಿಗಿಟ್ಟು ಮೈಯ ಮುಖದ ಬೆವರೊರೆಸುವಾಗ ನಾದಿನಿ ಮಗುವನ್ನು ತಂದು ಮಡಿಲಲ್ಲಿಟ್ಟಳು. ಅದು ಆಗ ಅಳಹತ್ತಿತು. ತನಗಾಗಿ ಒಂದು ಜೀವಂತ ಜಗತ್ತು ಅಳುತ್ತಿರುವಾಗ, ಯಾರದೋ ಮಾತಿಗಾಗಿ, ಮಧ್ಯಾಹ್ನದ ಬೇಸರಕ್ಕೆ, ತಾನು ಜೀವಕ್ಕೆರವಾಗುತ್ತಿದ್ದೆನಲ್ಲಾ ಎಂದು ಆಕೆಗೆ ಎನಿಸಿತು. ತಾಯಿಯ ನೆನಪಾಗಿ ಕಣ್ಣೀರು ಬಂತು. ಅದನ್ನೊರಸಿ ತಮ್ಮ ಕುಲದೇವರಿಗೆ ಮನದಲ್ಲಿಯೇ ಆಕೆ ಬಾಗಿದಳು.

ಅತ್ತೆ, ಅತ್ತಿಗೆ, ನಾದಿನಿಯರು ಊಟಕ್ಕೆ ಕುಳಿತಾಗ ಮಗುವೂ, ಮನೆಯೂ ನಲಿಯುತ್ತಿತ್ತು.

**ಲೇಖಕರ ಪರಿಚಯ**

'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ದಿವಂಗತ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಹುಟ್ಟಿದ್ದು ೧೮೯೬ರಲ್ಲಿ. ಧಾರವಾಡ ಇವರ ಸ್ಥಳ. ಇವರು ಗರಿ, ಉಯ್ಯಾಲೆ, ಸಖೀಗೀತ, ಗಂಗಾವತರಣ, ನಾಕುತಂತಿ, ಅರಳು ಮರಳು ಮೊದಲಾದ ಕವನ ಸಂಕಲನಗಳನ್ನು ಬರೆದಿದ್ದಾರೆ. ಜಾತ್ರೆ, ಸಾಯೋ ಆಟ, ಗೋಲ್ ಮುಂತಾದ ನಾಟಕಗಳನ್ನು ಬರೆದಿದ್ದಾರೆ. ಸಂಶೋಧನೆ, ಸಾಹಿತ್ಯವಿಮರ್ಶೆ ಮತ್ತು ಕಾವ್ಯಮೀಮಾಂಸೆಗಳಿಗೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಇವರ ಅರಳು ಮರಳು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಕು ತಂತಿ ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ದೊರೆತಿವೆ. ಇವರಿಗೆ ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ. ಇವರು ೧೯೮೧ರಲ್ಲಿ ನಿಧನರಾದರು.

ಕವಿ ಎಂದೇ ನಾಡಿನಾದ್ಯಂತ ಪ್ರಖ್ಯಾತರಾಗಿರುವ ಬೇಂದ್ರೆಯವರು ಆರಂಭದಲ್ಲಿ ಕೆಲವು ಸಣ್ಣಕತೆಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ ಪ್ರಸ್ತುತ ಕತೆ ಕಾವ್ಯ ಗುಣಗಳನ್ನು ಪ್ರಧಾನವಾಗಿ ಹೊಂದಿದೆ.

ಪ್ರಸ್ತುತ ಕತೆಯನ್ನು ಬೇಂದ್ರೆಯವರ ನಿರಾಭರಣ ಸುಂದರಿ ಕಥಾಸಂಕಲನದಿಂದ ಆರಿಸಲಾಗಿದೆ.

**ಆಶಯ**

*ಕ್ಷುಲ್ಲಕ ಕಾರಣಗಳಿಗೆ ಕಿರಿ-ಹಿರಿಯರೆನ್ನದೆ ಆತ್ಮಹತ್ಯೆಗೆ ಶರಣಾಗುತ್ತಿರುವ ಸನ್ನಿವೇಶವನ್ನು ಇಂದು ಕಾಣುತ್ತೇವೆ. ಆದರೆ ಎಂಥ ಸಂದರ್ಭದಲ್ಲೂ ಬದುಕಿರುವವನು ಶುಭವನ್ನು ಕಾಣುತ್ತಾನೆ. ಅದಕ್ಕೆ ಜೀವನವನ್ನು ಕಾಣುವ ಕಣ್ಣು - ಮನಸ್ಸು ಬೇಕು, ಎನ್ನುವುದನ್ನು ತಿಳಿಸುವುದರ ಜೊತೆಗೆ ತಾಯಿ ಮಗುವಿನ ಆಕರ್ಷಣೆ ಎಷ್ಟು ಸಾಂದ್ರವಾದುದು ಎಂಬುದನ್ನು ಇಲ್ಲಿ ಕಾಣಬಹುದಾಗಿದೆ.*

*ಇಲ್ಲಿಯ ನಾಯಕಿ ಜೀವನದ ಒತ್ತಡಗಳಿಂದ ಬೇಸತ್ತು, ಆತ್ಮಹತ್ಯೆಗೆ ಮನಸ್ಸು ಕೊಟ್ಟು, ಅದಕ್ಕಾಗಿ ಪ್ರಯತ್ನಿಸುತ್ತಿರುವಾಗ - ಅರ್ಭುತನ ಬಾಯಿಗೆ ಹೋಗುವ ಸಂದರ್ಭದಲ್ಲಿ ತನ್ನ ಕಂದನನ್ನು ನೆನೆದ ಪುಣ್ಯಕೋಟಿಯಂತೆ ತನ್ನ ಮಗುವಿನ ನೆನಪು ಆಕೆಯ ಮನದಲ್ಲಿ ಮೂಡುತ್ತದೆ; ಕರೆದಂತೆ ಭಾಸವಾಗುತ್ತದೆ. ಕ್ಷಣದ ಹಿಂದೆ ತಾನು ಒಂಟಿ ಎನಿಸಿದ್ದವಳಿಗೆ, ಜಗತ್ತಿನ ಜೊತೆ ಸಂಬಂಧ ಕಳೆದುಕೊಳ್ಳಬೇಕೆಂದು ನಿರ್ಧರಿಸಿದ್ದವಳಿಗೆ, ಒಮ್ಮೆಲೇ ಕೊಂಡಿಯೊಂದು ಸಿಕ್ಕಂತಾಗುತ್ತದೆ. ತಾನು ಒಂಟಿಯಲ್ಲ ಎನಿಸುತ್ತದೆ. ಮಗು ಅವಳನ್ನು ಜಗತ್ತಿನೊಂದಿಗೆ ಮತ್ತೆ ಬೆಸೆಯುತ್ತದೆ.*

*ಇಲ್ಲಿ ನಾಯಕಿಯ ಮನಸ್ಸಿನ ತುಮುಲ, ಏರಿಳಿತ, ತಿರುವುಗಳು, ಆಲೋಚನೆಯ ಲಯ ಇತ್ಯಾದಿಗಳನ್ನು ಕಥೆ ಸಮರ್ಥವಾಗಿ ಸೆರೆಹಿಡಿದಿದೆ. ಮಮತೆ, ವಾತ್ಸಲ್ಯ ಮತ್ತು ಜೀವನ ಪ್ರೀತಿಗಳು ಇಲ್ಲಿನ ಮುಖ್ಯ ಆಶಯಗಳಾಗಿವೆ.*

ಶಬ್ದಾರ್ಥ :

**ಉಲಿವು** - ಸದ್ದು, ಮಾತು; **ಕಾಡುಮಿಕ** - ಕಾಡುಪ್ರಾಣಿ; **ನೆರೆ** - ಗುಂಪುಸೇರು; **ಪ್ರಾತಃಕಾಲ** - ಮುಂಜಾನೆ; **ಕೊಡ** - ಬಿಂದಿಗೆ; **ಸಂದಿ** - ಓಣಿ; **ಕುಟುಂಬ** - ಹೆಂಡತಿ, ಸಂಸಾರ; **ವ್ಯಾಧಿ** - ಕಾಯಿಲೆ; **ಬಾಧೆ** - ನೋವು; **ಅಡಕಲಕೋಣೆ** - ಅಡುಗೆಮನೆ; **ಚೊಚ್ಚಲ** - ಮೊದಲ; **ಪಡಸಾಲೆ** - ಜಗುಲಿ; **ಶಯನ** - ಮಲಗುವಿಕೆ; **ಮಡಿ** - ಶುಭ್ರ ಆಚಾರ; **ಬಿಡಾರ** - ತಂಗುವ ಸ್ಥಳ; **ಸಾನ್ನಿಧ್ಯ** - ಹತ್ತಿರ; **ಮೀಸಲು ನೀರು** - ಮಡಿ ನೀರು; **ಪ್ರತಿಷ್ಠೆ**- ಘನತೆ, ಸ್ಥಾಪನೆ; **ಇಣಚಿ** - ಅಳಿಲು; **ಚಪಲತೆ** - ಚಂಚಲತೆ; **ಹಳ್ಳ** - ಸಣ್ಣ ಹೊಳೆ; **ಅನಾಹುತ** - ತೊಂದರೆ; **ಸೆರೆ** - ಬಂಧನ; **ರಂಬಾಟ** - ಕೋಲಾಹಲ, ಗದ್ದಲ; **ರೋಸು** - ಅಸಹ್ಯಪಡು; **ತಟಸ್ಥ** - ಚಲಿಸದ; **ಹಣಕು** - ಇಣುಕಿನೋಡು, ಕದ್ದುನೋಡು; **ಪಾಣಿಗ್ರಹಣ** - ಮದುವೆ; **ಸೆಳೆವು** - ಸೆಳೆತ; **ಆವೇಶ** - ರೋಷ; **ಸಾವರಿಸು** - ಚೇತರಿಸಿಕೊಳ್ಳು; **ಉಕ್ಕಡವನ್ನು ಉಚ್ಚು** - ಕುಣಿಕೆಯನ್ನು ಬಿಚ್ಚು; **ಕೂಜಿಸು** - ಹಕ್ಕಿಗಳ ಧ್ವನಿ, ಕೂಗು; **ಆಕಾಶವಾಣಿ** - ಅಶರೀರವಾಣಿ; **ಎರವಾಗು** - ಹಾನಿಯಾಗು, ಮುಳುವಾಗು.

ಟಿಪ್ಪಣಿ

ದಿವ್ಯ : ಸರಿಯಾದ ಸಾಕ್ಷಿ ಆಧಾರಗಳು ದೊರೆಯದಿದ್ದಾಗ ಅಪರಾಧವನ್ನು ನಿರ್ಣಯಿಸಲು ಕೈಗೊಳ್ಳುತ್ತಿದ್ದ ಪ್ರಾಚೀನ ಕಾಲದ ಉಗ್ರ ಪರೀಕ್ಷೆ.

ಕಂದಕ : ಕೋಟೆಯ ಸುತ್ತಲಿನ ಅಗಳು, ಕೋಟೆಯ ಸುತ್ತ ನೀರಿರುವ ತೋಡುಗಾಲುವೆ.

ಗೇಣು: ಒಂಬತ್ತು ಅಂಗುಲಗಳ ಅಳತೆ; ರೂಢಿಯಲ್ಲಿ : ಒಬ್ಬ ವ್ಯಕ್ತಿಯ ಹಸ್ತದ ಕಿರುಬೆರಳು ಮತ್ತು ಹೆಬ್ಬೆರಳನ್ನು ವಿರುದ್ಧ ದಿಕ್ಕಿನಲ್ಲಿ ನೇರವಾಗಿ ಚಾಚಿದಾಗ ಕಿರುಬೆರಳಿನ ತುತ್ತತುದಿಯಿಂದ ಹೆಬ್ಬೆರಳಿನ ತುದಿಯವರೆಗಿನ ಉದ್ದ.

(ಪ್ರಸ್ತುತ ಪಾಠದಲ್ಲಿ ಎರಡೂವರೆ ಗೇಣಿನ ತುಂಡು ಎಂದರೆ ಕಡಿಮೆ ಭೂಮಿ ಎಂದರ್ಥ)

ಧೂಪ : ಸಾಮ್ರಾಣಿ ಮೊದಲಾದ ಸುವಾಸನೆಯ ವಸ್ತುಗಳನ್ನು ಕೆಂಡದ ಮೇಲೆ ಹಾಕಿದಾಗ ಹೊರಡುವ ಹೊಗೆ.

ನೈವೇದ್ಯ : ಭೋಜ್ಯ ಪದಾರ್ಥಗಳನ್ನು ದೇವರಿಗೆ ಅರ್ಪಿಸುವಿಕೆ; ನಿವೇದಿಸುವಿಕೆ.

ಅಗ್ನಿದೇವರು ಶಾಂತರಾಗಿ, ದೇವರು ಜಲಸಮಾಧಿ ಹೊಂದಿದರು: ಬೆಂಕಿ ನಂದಿತು, ವಿಗ್ರಹಗಳು ನೀರಿನಿಂದ ತೊಯ್ದುವು.

ಬೀಳು ಹೊಲ: ಪಾಳುಬಿದ್ದ ಹೊಲ; ಬಂಜರು ಭೂಮಿ.

## ಅಭ್ಯಾಸ

**ಪ್ರಶ್ನೆಗಳು :**

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಶಾಸ್ತ್ರಿಗಳ ಸೊಸೆ ಮಧ್ಯಾಹ್ನ ಎಲ್ಲಿಗೆ ಹೊರಟಳು?

೨. ಬಾವಿಯ ಸಮೀಪವಿದ್ದ ಎರಡು ಮರಗಳಾವುವು?

೩. ಕಾಡುಮಿಕಗಳು ಹಳ್ಳದ ಬಳಿ ಏಕೆ ಬಂದವು?

೪. ಬಾವಿಯ ಭಯಾನಕತೆಯನ್ನು ಯಾವುದು ಹೆಚ್ಚಿಸಿತ್ತು?

೫. ಪಡಸಾಲೆ ಯಾವುದಕ್ಕೆ ಆಶ್ರಯವಾಗಿತ್ತು?

೬. ಸೊಸೆಯನ್ನು ಮನೆಯತ್ತ ಸೆಳೆದ ಭಾವಗಳು ಯಾವುವು?

೭. ಮನೆ ಯಾವಾಗ ನಲಿಯುತ್ತಿತ್ತು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಶಾಸ್ತ್ರಿಗಳ ಸೊಸೆ ಏಕೆ ನೀರಿಗೆ ಹೊರಡಬೇಕಾಯಿತು?

೨. ಅಡಿಗೆ ಮನೆ ಮತ್ತು ದೇವರ ಸಾನ್ನಿಧ್ಯ ಹೇಗಿತ್ತು?

೩. ಶಾಸ್ತ್ರಿಗಳ ಮುಖದಲ್ಲಿ ಹೊಗೆ ಮುಸುಕಲು ಕಾರಣವೇನು?

೪. ಶಾಸ್ತ್ರಿಗಳ ಹೆಂಡತಿ ಏನು ರಂಬಾಟ ಮಾಡಿದರು?

೫. ಶಾಸ್ತ್ರಿಗಳ ಹೆಂಡತಿಗೆ ಮೊಮ್ಮಗನ ಸುಖ ಮಸುಕಾಗಿ ಕಾಣಲು ಕಾರಣವೇನು?

ಇ. ಇವುಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಬಾವಿಯ ಪರಿಸರ ಏಕೆ ಭಯಾನಕವಾಗಿತ್ತು?

೨. ಸೊಸೆಯ ಬಗ್ಗೆ ಊರವರು ಆಡಿದ ಮಾತುಗಳೇನು?

೩. ಬಾವಿಯ ಬಳಿ ಸೊಸೆ ಸಾವಿಗೆ ಸಿದ್ಧಳಾದ ಬಗೆ ಹೇಗೆ?

೪. ಸೊಸೆ ಹಿಂದಿರುಗಿದಾಗ ಮನೆಯವರು ಏನು ಮಾಡುತ್ತಿದ್ದರು?

೫. ಮಗುವಿನ ಕರೆ ತಾಯಿಯಲ್ಲಿ ಜೀವನಪ್ರೀತಿಯನ್ನು ಹೇಗೆ ಮೂಡಿಸಿತು?

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.

೧. ಹೊಗೆಯಾಗದೆ ಉರಿಯಾಗಬೇಕು. ಬಿಸಿಹತ್ತದೆ ಬೆಂಕಿ ಇರಬೇಕು.

೨. ಅವಳಿಗೆ ಹುಚ್ಚಗಂಡ ಬೇಕಾಗಿದ್ದನಲ್ಲಿ?

೩. ತಾನು ಅವಳೆದೆಗೆ ಹುಣ್ಣು.

೪. ನೀರಿನ ತಳವೇ ನಿನ್ನ ತವರು, ಬಾ.

೫. ಬಾ ತಾಯಿ, ಬಿಸಲಲ್ಲಿ ಹೋಗಿದ್ದಿ.

ಉ. ಬಿಟ್ಟ ಸ್ಥಳಗಳನ್ನು ಸೂಕ್ತಪದಗಳಿಂದ ತುಂಬಿರಿ.

೧. ಬಾವಿಯಿಂದ ಹಳ್ಳಿಯ ಕೊನೆಯ ಮನೆ ......... ದೂರವಿತ್ತು.

೨. ಊಟಕ್ಕೆ ಕೂತ ಕಾಲಕ್ಕೆ .......... ಬಂದಂತಾಯಿತು.

೩. ಬಡವರ ಸೊಸೆಗೆ ನಾಲಿಗೆ ಸಡಿಲು ಬಿಡಬಲ್ಲವರೆಲ್ಲ ............

೪. ಮಡಿಯ ನುಸುಳಾಟದಲ್ಲಿ ಸೊಸೆಯು ..........ಗಿಂತ ಹೆಚ್ಚಿನ ಚಪಲತೆ ತೋರುತ್ತಿದ್ದಳು.

## ಭಾಷಾಭ್ಯಾಸ

ಅ. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.

೧. ದೆವ್ವ, ಭೂತ, ಆತ್ಮ, ಪ್ರೇತ

೨. ಕೊಡ, ಹಗ್ಗ, ಹಂಡೆ, ಬಾವಿ

೩. ಹುಣಸೆಮರ, ಬೇವಿನಮರ, ಹಾಳುಗೋಡೆ, ಬೀಳುಹೊಲ

೪. ಮಟಮಟ, ಪಿಸಿಪಿಸಿ, ಸುತ್ತುಮುತ್ತು, ಬಿರಬಿರ

ಆ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಆರಿಸಿ ಬರೆಯಿರಿ.

೧. ಚಪಲ : ಚಪಲತೆ :: ಚಂಚಲ : ............

೨. ಅತ್ತೆ : ಮಾವ :: ಸೊಸೆ : ............

೩. ಕೂಸಿನ ದನಿ : ಕಿವಿದುಂಬಿತ್ತು :: ವಾತ್ಸಲ್ಯವು : ............

೪. ಯಕ್ಷಿಣಿ : ಜಕ್ಕಿಣಿ :: ಅಗ್ನಿ : ............

ಇ. 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ಅ | ಬ |
|---|---|
| ೧. ನೀರುನಿಡಿ | ಅನುಕರಣಾವ್ಯಯ |
| ೨. ಮೊನ್ನೆಮೊನ್ನೆ | ಪರಿಮಾಣ ವಾಚಕ |
| ೩. ತಟ ತಟ | ಜೋಡಿ ಪದ |
| ೪. ಅಯ್ಯೋ | ಕ್ರಿಯಾಪದ |
| ೫. ಎಷ್ಟೊತ್ತು | ದ್ವಿರುಕ್ತಿ |
| | ಉದ್ಗಾರವಾಚಕ |

ಈ. ಇವುಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

ಮಾದರಿ : ಮನೆ + ಇಂದ

ಮಡಿಯೊಳಗೆ, ನೂರಾರು, ತುಂಡೊಂದು, ಮೈದುಂಬು, ಅಡ್ಡಗಂಬ

ಉ. ಇವುಗಳ ತದ್ಭವ ರೂಪ ಬರೆಯಿರಿ.

ಸೊಸೆ, ಆಶ್ರಯ, ಪ್ರಸಾದ, ಭ್ರಮೆ, ಪ್ರತಿ, ಶ್ಮಶಾನ, ಸ್ತಂಭ, ಸುಖ, ದಿವ್ಯ

ಊ. ಇವುಗಳ ಅನ್ಯಲಿಂಗ ರೂಪ ಬರೆಯಿರಿ.

ಅಣ್ಣ, ವಿಧವೆ, ತರುಣ, ಪತ್ನಿ, ಮೊಮ್ಮಗ

ಋ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.

ಜಲಸಮಾಧಿ, ಅನಾಹುತ, ರಂಪಾಟ, ಮುಸುಗುಟ್ಟು, ಕಾಲಗುಣ

ಎ. ಸಾಮಾನ್ಯ, ಮಿಶ್ರ, ಮತ್ತು ಸಂಯೋಜಿತ ವಾಕ್ಯಗಳು

ಅ) ಅಲ್ಲಿಯೇ ಮೊಮ್ಮಗನು ಬಿಡಾರ ಬಿಟ್ಟಿದ್ದನು. (ಸಾಮಾನ್ಯ ವಾಕ್ಯ)

ಆ) ಅತ್ತೆ, ಅತ್ತಿಗೆ, ನಾದಿನಿಯರು ಊಟಕ್ಕೆ ಕುಳಿತಾಗ. ಮಗುವೂ ಮನೆಯೂ ನಲಿಯುತ್ತಿತ್ತು. (ಮಿಶ್ರವಾಕ್ಯ)

ಇ) ಹೊಗೆಯಾಗದೆ ಉರಿಯಾಗಬೇಕು ಬಿಸಿ ಹತ್ತದೆ ಬೆಂಕಿ ಇರಬೇಕು; ಇಷ್ಟಾಗಿ ಎಲ್ಲರಿಗೂ ಪ್ರಸಾದ ಸಿಗಬೇಕು. (ಸಂಯೋಜಿತ ವಾಕ್ಯ)

ಅ) ಒಂದು ಪೂರ್ಣ ಕ್ರಿಯಾಪದದಿಂದ ಕೂಡಿದ್ದು ಸ್ವತಂತ್ರವಾಗಿರುವ ವಾಕ್ಯವೇ **ಸಾಮಾನ್ಯ ವಾಕ್ಯ.**

ಆ) ಇಲ್ಲಿ 'ಕುಳಿತಾಗ, ನಲಿಯುತ್ತಿತ್ತು' ಎಂಬ ಎರಡು ಕ್ರಿಯಾಪದಗಳಿವೆ. 'ನಲಿಯುತ್ತಿತ್ತು' ಎಂಬುದು ಪ್ರಧಾನ ಕ್ರಿಯಾಪದ. 'ಕುಳಿತಾಗ' ಎಂಬುದು ಅಧೀನ ಕ್ರಿಯಾಪದ. ಮಗುವೂ ಮನೆಯೂ ನಲಿಯುತ್ತಿತ್ತು ಎಂಬುದೇ ಪ್ರಧಾನ. ಅತ್ತೆ ಅತ್ತಿಗೆ ನಾದಿನಿಯರು ಊಟಕ್ಕೆ ಕುಳಿತಾಗ ಎಂಬುದು ಅಧೀನ ವಾಕ್ಯ. ಇಂತಹ ವಾಕ್ಯವನ್ನು ಮಿಶ್ರವಾಕ್ಯ ಎನ್ನುತ್ತಾರೆ.

ಇ) ಇಲ್ಲಿ ಮೂರು ಬೇರೆ ಬೇರೆ ವಾಕ್ಯಗಳಿವೆ. ಆದರೆ ಈ ವಾಕ್ಯಗಳು ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣವಾದ ವಾಕ್ಯವಾಗಿದೆ. ಇಂತಹ ವಾಕ್ಯವನ್ನು **ಸಂಯೋಜಿತ ವಾಕ್ಯ** ಎನ್ನುತ್ತಾರೆ.

## ಚಟುವಟಿಕೆ

ಅ. 'ಆತ್ಮಹತ್ಯೆ ಮಹಾಪಾಪ' ಎಂಬ ವಿಷಯವನ್ನು ಕುರಿತು ೧೦-೧೨ ವಾಕ್ಯಗಳಲ್ಲಿ ಪ್ರಬಂಧ ಬರೆಯಿರಿ.

ಆ. 'ಗ್ಲೋವಿನ ಹಾಡು' ಕವಿತೆಯನ್ನು ಸಂಗ್ರಹಿಸಿ ಓದಿರಿ.

# ೧೦. ಕನ್ನಡ ಎನುವುದು ಜೀವನದಿ

ಎಚ್. ಎಸ್. ವೆಂಕಟೇಶಮೂರ್ತಿ

ಪ್ರವೇಶ

ಕನ್ನಡ ಕವಿಗಳು ನಾಡು - ನುಡಿ - ಸಂಸ್ಕೃತಿ - ಪ್ರಕೃತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ತಮ್ಮ ಕವಿತೆಗಳಲ್ಲಿ ತಂದಿದ್ದಾರೆ. ನಾಡುನುಡಿಗಳ ಕಾವ್ಯ ಪರಂಪರೆಯೇ ನಮ್ಮ ಮುಂದಿದೆ. ಒಂದಕ್ಕಿಂತ ಇನ್ನೊಂದು ಭಿನ್ನ. ಇಂಥ ಗೀತೆಗಳನ್ನು ಓದಿದಾಗ ನಮ್ಮ ಹೃದಯತುಂಬಿ ಬರುತ್ತದೆ. ನಮ್ಮ ನಾಡುನುಡಿಯ ಬಗ್ಗೆ ಆದರಭಾವ ಮೂಡುತ್ತದೆ.

ನಾಡಗೀತೆಗಳಲ್ಲಿ ಕನ್ನಡ ಕಾವ್ಯ ಪರಂಪರೆ, ನಾಡಿನ ಪ್ರಕೃತಿ ವೈಭವ, ಕವಿಗಳ ಪ್ರಾದೇಶಿಕ ಆಲೋಚನಾ ವಿಧಾನ ಹಾಗೂ ಸ್ವಭಾವಗಳನ್ನು ಮುಖ್ಯವಾಗಿ ಗಮನಿಸಲಾಗುತ್ತದೆ. ಜೀವನದಿಯಾದ ಕನ್ನಡ ತನ್ನ ಸಾಹಿತ್ಯವಾಹಿನಿಯಲ್ಲಿ ತಳೆದ ಪರಿಳಿತಗಳನ್ನು ಪ್ರಸ್ತುತ ಕವನದಲ್ಲಿ ಸಮರ್ಥವಾಗಿ ಚಿತ್ರಿಸಲಾಗಿದೆ.

ಕನ್ನಡ ಎನುವುದು ಜೀವನದಿ
ಗಿರಿವನ ಸಂಪದ ಎರಡು ಬದಿ ||

ಪಂಪ ಮಹಾಚಲ ಜೋಡಿ ಶಿಖರಗಳು
ರನ್ನನ ಉನ್ನತ ಧವಳಗಿರಿ
ಶಿವಶರಣರ ವಿಸ್ತಾರದ ಬಯಲು
ಧುಮ್ಮಿಕ್ಕುವ ಹರಿಹರನ ಝರಿ ||

ಸುಳಿಮಿಂಚಿನ ಸೆಳೆ ಮುಂಗಾರಿನ ಮಳೆ
ಕುಮಾರವ್ಯಾಸನ ರಸಧಾರೆ
ಎದೆಯಗಲಕು ಕೆಂದಾವರೆ ಅರಳಿದ
ಕವಿವರ ರತ್ನಾಕರನ ಕೆರೆ ||

ಸಹ್ಯಾದ್ರಿಯ ಮಲೆ, ಧಾರಾಪುರಿ ಹೊಳೆ
ಕಡಲ ತಡಿಯ ಘನ ವಿಸ್ತಾರ
ಮಲೆಘಟ್ಟದ ಕುದಿಗಡಲಿನ ಅಬ್ಬರ
ಮೈಸೂರಿನ ಮಲ್ಲಿಗೆ ಹಾರ! ||

ಯದುಗಿರಿ ಕಣಿವೆಯ ನಿಶ್ಚಲ ಮೌನ
ನವರಾತ್ರಿಯ ಕಥನದ ಮೋಡಿ
ಬಿರುಗಾಳಿಗು ಆರದ ಕಿರುಹಣತೆ
ಬೆಂಬಲಕಿದೆ ಇರುಳಿನ ಜೋಡಿ ||

**ಕವಿ ಪರಿಚಯ**

ನಾರಾಯಣ ಭಟ್ಟ ಮತ್ತು ನಾಗರತ್ನಮ್ಮನವರ ಮಗನಾಗಿ ೧೯೪೪ರಲ್ಲಿ ಜನಿಸಿದ ವೆಂಕಟೇಶಮೂರ್ತಿಯವರು ಕವಿ ಮತ್ತು ನಾಟಕಕಾರರಾಗಿದ್ದಾರೆ. ಇವರ ಸ್ಥಳ ಚನ್ನಗಿರಿ ತಾಲೂಕಿನ ಹೋದಿಗ್ಗೆರೆ. ಕನ್ನಡ ಪ್ರಾಧ್ಯಾಪಕರಾಗಿದ್ದ ಇವರು ಬಹುಮುಖ ಪ್ರತಿಭೆಯ ಸಾಹಿತಿ. ಇವರು ಪರಿವೃತ್ತ, ಬಾಗಿಲು ಬಡಿವ ಜನ, ಒಣಮರದ ಗಿಳಿಗಳು, ಇಂದುಮುಖಿ, ಹರಿಗೋಲು, ಎಲೆಗಳು ನೂರಾರು, ಎಷ್ಟೊಂದು ಮುಗಿಲು ಮೊದಲಾದ ಕವನ ಸಂಕಲನಗಳನ್ನು ಬರೆದಿದ್ದಾರೆ. ಹೆಜ್ಜೆಗಳು, ಒಂದು ಸೈನಿಕ ವೃತ್ತಾಂತ, ಕತ್ತಲೆಗೆ ಎಷ್ಟು ಮುಖ, ಅಳಿಲು ರಾಮಾಯಣ, ಸುಣ್ಣದ ಸುತ್ತು, ಹೂವಿ ಮತ್ತು ಸಂಧಾನ, ಚಿತ್ರಪಟ, ಅಗ್ನಿವರ್ಣ ಮೊದಲಾದ ನಾಟಕಗಳನ್ನು ಬರೆದಿದ್ದಾರೆ. ಮಕ್ಕಳ ಸಾಹಿತ್ಯದಲ್ಲೂ ಸಾಕಷ್ಟು ಹೆಸರಾಗಿರುವ ಡಾ. ಎಚ್.ಎಸ್. ವೆಂಕಟೇಶಮೂರ್ತಿ ಅವರ 'ಸಿಂದಾಬಾದನ ಆತ್ಮಕಥೆ' ನಾಟಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, 'ತಾಪಿ' ಕಾದಂಬರಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ, 'ಋತು ವಿಲಾಸ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪುರಸ್ಕಾರ ಲಭಿಸಿವೆ. ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಇವರು ಪ್ರಸ್ತುತ ಬೆಂಗಳೂರಿನಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಪ್ರಸ್ತುತ ಕವನವನ್ನು ಶ್ರೀಯುತರ ಗೀತ ಸಂಪುಟ ಕವನಸಂಕಲನದಿಂದ ಆರಿಸಲಾಗಿದೆ.

**ಆಶಯ**

*ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ತನ್ನದೇ ಆದ ಇತಿಹಾಸವಿದೆ. ಅದು ಸಾವಿರಾರು ವರ್ಷಗಳಿಂದ ತನ್ನತನವನ್ನು ಉಳಿಸಿಕೊಂಡು ಬಂದಿದೆ. ಹಲವು ರೂಪಗಳನ್ನು ಧರಿಸಿದರೂ ತನ್ನ ನಿರಂತರ ಬೆಳವಣಿಗೆಯಿಂದ ಜೀವನದಿ ಎನಿಸಿದೆ. ಕನ್ನಡದ ಮಹಾನ್ ಕವಿಗಳು ಅವರ ವಾಹಿನಿಗೆ ತಮ್ಮ ಕೃತಿಗಳ ಧಾರೆ ಎರೆದಿದ್ದಾರೆ. ಕನ್ನಡ ಸಾಹಿತ್ಯ ವಾಹಿನಿಯು ಕೆಲವೊಮ್ಮೆ ಇಂಥ ಸಾಹಿತ್ಯ ಕೃತಿಗಳಿಂದ ಪುಷ್ಟಿಗೊಂಡು, ಕೆಲವೊಮ್ಮೆ ಜಲಪಾತವಾಗಿ ಧುಮುಕಿ, ಬಯಲಿನಲ್ಲಿ ವಿಸ್ತಾರವಾಗಿ ಹರಿದು, ಮಿಂಚಿನಲ್ಲಿ ಹೊಳೆದು, ಮುಂಗಾರಿನಲ್ಲಿ ರಭಸವಾಗಿ ಸಾಗಿ ಕನ್ನಡ ನೆಲದ ನಿಸರ್ಗವನ್ನು ಮೈಗೂಡಿಸಿಕೊಂಡು, ರಮಣೀಯುವಾಗಿ ಸದಾಕಾಲ ಹರಿಯುತ್ತಿದೆ. ಇದು ನಿರಂತರವಾಗಿರಲಿ ಎಂಬುದು ಕವಿಯ ಆಶಯವಾಗಿದೆ.*

**ಶಬ್ದಾರ್ಥ :**

ಸಂಪದ - ಸಂಪತ್ತು, ಐಶ್ವರ್ಯ; ಬದಿ - ಪಕ್ಕ; ಅಚಲ - ಪರ್ವತ; ಶಿಖರ - ಬೆಟ್ಟದ ತುದಿ; ಉನ್ನತ - ಎತ್ತರವಾದ; ಧವಳ - ಬಿಳಿ, ಶ್ವೇತ; ಝರಿ - ಬೆಟ್ಟದ ಕೊರಕಲಲ್ಲಿ ಹರಿವ ನೀರಧಾರೆ; ಸೆಳೆ - ಆಕರ್ಷಣೆ; ಮಲೆ - ಬೆಟ್ಟ; ಘನ - ಗಟ್ಟಿಯಾದುದು, ಶಕ್ತಿಯುತವಾದ; ಮೋಡಿ - ಸೊಗಸು; ಹಣತೆ - ದೀಪ.

**ಟಿಪ್ಪಣಿ :**

ಜೀವನದಿ: ಸದಾಕಾಲ ಹರಿವ ನದಿ (ಇಲ್ಲಿ, ಕನ್ನಡ ಭಾಷೆಯ, ಸಾಹಿತ್ಯದ ನಿರಂತರವಾಹಿನಿ)

ಗಿರಿವನ ಸಂಪದ: ಹಸುರಿನ ಕಾಡು ಬೆಟ್ಟಗಳು (ಸಮೃದ್ಧಿಯ ಸಂಕೇತ)

**ಜೋಡಿ ಶಿಖರಗಳು:** ಸಾಹಿತ್ಯದ ಎರಡು ಶಿಖರಗಳು (ಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ)

**ರನ್ನನ ಉನ್ನತ ಧವಳಗಿರಿ:** ರನ್ನನ ಮೇರುಕೃತಿ 'ಸಾಹಸಭೀಮ ವಿಜಯಂ'.

**ಶಿವಶರಣರ ವಿಸ್ತಾರದ ಬಯಲು:** ವಚನ ಸಾಹಿತ್ಯದ ಹುಲುಸಾದ ಬೆಳೆ.

**ಹರಿಹರನ ಝರಿ:** ಪರಿಹರನ ರಗಳೆಗಳ ಸೊಬಗು, ಹರಿಯುವಿಕೆ.

**ಕುಮಾರವ್ಯಾಸನ ರಸಧಾರೆ:** 'ಕುಮಾರವ್ಯಾಸ ಭಾರತ'ದ ಸತ್ವ.

**ರತ್ನಾಕರನ ಕೆರೆ:** 'ಭರತೇಶವ ವೈಭವ'ದ ಚೆಲುವು ಎಂಬ ಸರೋವರ.

**ಸಹ್ಯಾದ್ರಿಯ ಮಲೆ:** ಮಲೆನಾಡಿನ ಸೊಬಗಿನ ಚಿತ್ರ (ಕುವೆಂಪು ಸಾಹಿತ್ಯ)

**ಧಾರಾಪುರಿ ಹೊಳೆ:** ಧಾರವಾಡ ಸೀಮೆಯ ನಿಸರ್ಗದ ಹೊಳಪು (ಬೇಂದ್ರೆ ಸಾಹಿತ್ಯ)

**ಕಡಲತಡಿಯ ಘನ ವಿಸ್ತಾರ:** ಕಡಲ ತೀರದ ಭಾರ್ಗವ - (ಕಾರಂತರ ಸಾಹಿತ್ಯ ಸಾಧನೆ)

**ಮಲೆಘಟ್ಟದ ಕುದಿಗಡಲು:** ನವ್ಯಕಾವ್ಯ (ಅಡಿಗರ ಕೊಡುಗೆ)

**ಮೈಸೂರಿನ ಮಲ್ಲಿಗೆ:** ಒಲುಮೆಯ ಕವಿತೆಗಳು (ಕೆ.ಎಸ್.ನ. - ಕೊಡುಗೆ)

**ಯದುಗಿರಿ ಕಣಿವೆ:** ಯದುಗಿರಿಯ ಮೌನದಲ್ಲಿ ಬರುವ ಸೌಮ್ಯತೆ (ಪು.ತಿ.ನ. ಕಾವ್ಯ)

**ನವರಾತ್ರಿಯ ಕಥನ:** 'ನವರಾತ್ರಿ' ಕಥನ ಕವನ (ಮಾಸ್ತಿ ಸಾಹಿತ್ಯ)

**ಕಿರುಹಣತೆ:** ಮೇಲಿನ ಕವಿಪರಂಪರೆಯಲ್ಲಿ ಕಿರಿಯರು, 'ಹಣತೆ'ಯ ಕರ್ತೃ. (ಜಿ.ಎಸ್. ಶಿವರುದ್ರಪ್ಪನವರ ಕೊಡುಗೆ)

(ಮಹಾಕವಿ ಪಂಪನಿಂದ ಜಿ.ಎಸ್. ಶಿವರುದ್ರಪ್ಪನವರವರೆಗೆ ಕನ್ನಡದ ಪ್ರಮುಖ ಕವಿಗಳು, ಅವರ ಕೃತಿಗಳು ಹಾಗೂ ಅವುಗಳ ಪ್ರಾದೇಶಿಕ ಸೊಗಡಿನ ಸೊಬಗನ್ನು ಕನ್ನಡ ವಾಹಿನಿಯಲ್ಲಿ ಧ್ವನಿಯುಕ್ತವಾಗಿ ಚಿತ್ರಿಸಲಾಗಿದೆ.)

## ಅಭ್ಯಾಸ

**ಪ್ರಶ್ನೆಗಳು :**

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಜೀವನದಿಯ ಎರಡು ಬದಿಗೆ ಏನಿದೆ?

೨. ಪಂಪ ಮಹಾಚಲದ ಜೋಡಿ ಶಿಖರಗಳಾವುವು?

೩. ಕುಮಾರವ್ಯಾಸನ ಕಾವ್ಯಧಾರೆ ಹೇಗಿದೆ?

೪. ರತ್ನಾಕರನ ಕಾವ್ಯವನ್ನು ಯಾವುದಕ್ಕೆ ಹೋಲಿಸಲಾಗಿದೆ?

೫. ಸಹ್ಯಾದ್ರಿ ಹಾಗೂ ಧಾರಾಪುರಿಗಳ ಮಹಾಕವಿಗಳು ಯಾರು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಪ್ರಾಚೀನ ಕವಿಗಳನ್ನು ಜೀವನದಿ ಪದ್ಯದಲ್ಲಿ ಯಾವ ಹೋಲಿಕೆಯೊಂದಿಗೆ ಪರಿಚಯಿಸಲಾಗಿದೆ?

೨. ಆಧುನಿಕ ಕವಿಗಳನ್ನು ಪ್ರಕೃತಿಯೊಂದಿಗೆ ಹೇಗೆ ಸಮ್ಮಿಲನಗೊಳಿಸಲಾಗಿದೆ?

ಇ. ಕೆಳಗಿನ ಪ್ರಶ್ನೆಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

ಕವಿ - ಕಾವ್ಯ ಸ್ವಭಾವಗಳು ಜೀವನದಿ ಪದ್ಯದಲ್ಲಿ ಹೇಗೆ ಮೂಡಿಬಂದಿವೆ? ವಿವರಿಸಿರಿ.

ಈ. ಕೆಳಗಿನ ವಾಕ್ಯಗಳ ಸಂದರ್ಭಗಳನ್ನು ಸ್ವಾರಸ್ಯದೊಡನೆ ವಿವರಿಸಿರಿ.

೧. ಪಂಪ ಮಹಾಚಲ ಜೋಡಿ ಶಿಖರಗಳು

೨. ಮೈಸೂರಿನ ಮಲ್ಲಿಗೆ ಹಾರ!

೩. ಯದುಗಿರಿ ಕಣಿವೆಯ ನಿಶ್ಚಲ ಮೌನ

## ಭಾಷಾಭ್ಯಾಸ

ಅ. ಮೊದಲೆರಡು ಪದಗಳಿಗಿರುವ ಸಂಬಂಧ ನೋಡಿಕೊಂಡು, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

| | | | |
|---|---|---|---|
| ೧. ಸುಳಿಮಿಂಚಿನ | : ಸೆಳೆ | :: | ಮುಂಗಾರಿನ : ............ |
| ೨. ಸಹ್ಯಾದ್ರಿಯ | : ಮಲೆ | :: | ಧಾರಾಪುರಿ : ............ |
| ೩. ಮೈಸೂರು ಮಲ್ಲಿಗೆ | : ಕೆ.ಎಸ್.ನ. | :: | ನವರಾತ್ರಿ : ............ |
| ೪. ಕಾರ + ಮುಂದು | : ಮುಂಗಾರು | :: | ಕೆಂಪಾದ + ತಾವರೆ : ........ |

ಆ. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.

೧. ಪಂಪ, ರನ್ನ, ಬೇಂದ್ರೆ, ಹರಿಹರ

೨. ಕೆಂದಾವರೆ, ಬಿರುಗಾಳಿ, ಮಹಾಚಲ, ಮುಂಗಾರು

೩. ಪು.ತಿ.ನ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಸವಣ್ಣ, ಜಿ.ಎಸ್. ಶಿವರುದ್ರಪ್ಪ

೪. ಘಟ್ಟ, ಶಿಖರ, ಗಿರಿ, ಅಚಲ

೫. ಹೊಳೆ, ನದಿ, ಕೆರೆ, ತೊರೆ

ಇ. ನಾನಾರ್ಥ ಬರೆಯಿರಿ.

ಮಲೆ, ಹೊಳೆ, ಅರಳು, ಕವಿ.

ಈ. 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| 'ಅ' | 'ಬ' |
|---|---|
| ೧. ಪಂಪ | ಸಾಹಸಭೀಮ ವಿಜಯಂ |
| ೨. ಕುಮಾರ ವ್ಯಾಸ | ಕಿರಾತಾರ್ಜುನೀಯ |
| ೩. ರತ್ನಾಕರ | ರಗಳೆ ಕವಿ |
| ೪. ಹರಿಹರ | ಭರತೇಶ ವೈಭವ |
| ೫. ರನ್ನ | ಆದಿಕವಿ |
| | ನಾರಣಪ್ಪ |

ಉ. ಇವುಗಳಿಗೆ ತದ್ಭವ ಪದಗಳನ್ನು ಬರೆಯಿರಿ.

೧. ವನ ೨. ರತ್ನ ೩. ಕವಿ ೪. ಕುಮಾರ

ಊ. ಇವುಗಳ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಜೀವ, ಮುಂಗಾರು, ಚಲ, ವಿಸ್ತಾರ

## ಚಟುವಟಿಕೆ

೧. ಈ ಪದ್ಯದ ೧ ಮತ್ತು ೨ನೆಯ ಪದ್ಯಭಾಗವನ್ನು ಕಂಠಪಾಠ ಮಾಡಿರಿ.

೨. ಈ ಪದ್ಯದಲ್ಲಿ ಬಂದಿರುವ ಹೊಸಗನ್ನಡ ಕವಿಗಳ ಭಾವಚಿತ್ರ ಸಂಗ್ರಹಿಸಿರಿ.

೩. ಕೆ.ಎಸ್. ನರಸಿಂಹಸ್ವಾಮಿಯವರ ಭಾವಗೀತೆಗಳನ್ನು ಹಾಡಲು ಕಲಿಯಿರಿ.

೪. ಕುವೆಂಪು ಅವರ 'ಜಯಹೇ ಕರ್ನಾಟಕ ಮಾತೆ'ಯಲ್ಲಿ ಬಂದಿರುವ ನಾಡು-ನುಡಿಯ ಬಗೆಗಿನ ಅಂಶಗಳನ್ನು ಓದಿ ತಿಳಿಯಿರಿ.

# ೧೧. ಗಾಂಧಿ

ತೀ. ನಂ. ಶ್ರೀಕಂಠಯ್ಯ

ಆಶಯ: ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಆಧುನಿಕ ಸಾಹಿತ್ಯ ಸಂದರ್ಭ ಅನನ್ಯವಾದುದು. ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಚಳುವಳಿಗಳ ಮೂಲಕ ಇಂದಿನ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ. ನವೋದಯ ಕಾಲಘಟ್ಟ ವಸ್ತುನಿಷ್ಠವಾದ ಮಹಾಕಾವ್ಯ ಪದ್ಧತಿಯಿಂದ ವ್ಯಕ್ತಿನಿಷ್ಠವಾದ ಭಾವಗೀತೆಯ ಪದ್ಧತಿಗೆ ಹರಿದು ಬಂತು.

ರಮಣೀಯವಾದ ಅಚ್ಚುಕಟ್ಟಾದ ರಚನೆಯಿಂದ ಕೂಡಿದ ಸಾಹಿತ್ಯ ಈ ಕಾಲಘಟ್ಟದಲ್ಲಿ ರಚಿತವಾದುವು. ನವೋದಯ ಕಾಲದಲ್ಲಿ ನಿಸರ್ಗದ ರಮಣೀಯತೆ, ಸಾಮಾಜಿಕ ಕಳಕಳಿ, ರಂಜಕ ಬದುಕು, ದೇಶಪ್ರೇಮ ಪ್ರಮುಖ ನೆಲೆಗಳಾಗಿ ಕಾಣಿಸಿಕೊಂಡವು. ನವೋದಯ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವವರಲ್ಲಿ 'ಕುವೆಂಪು', ಬೇಂದ್ರೆ, ಮಾಸ್ತಿ, ಕೆ.ಎಸ್.ನ., ತೀ.ನಂ.ಶ್ರೀ ಮೊದಲಾದವರದು ಪ್ರಮುಖ ಹೆಸರುಗಳು.

ಇಳೆಗಹಿಂಸೆಯ ಪರಮ ತತ್ತ್ವವನು ತೋಳೆತ್ತಿ
ಉಸಿರ ಬಲವುಳ್ಳನಕ ಸಾರಿದ ಗುರು;

ದರ್ಪವನು ಧೈರ್ಯದಲಿ, ಶಸ್ತ್ರವನು ಸಹನೆಯಲಿ,
ಶಠತೆಯನು ಸತ್ಯದಲಿ ಜಯಿಸಿದ ಕಲಿ;

ಹುಡಿಯ ಹುಳುಗಳನೆತ್ತಿ ವಜ್ರ ಹೃದಯವ ಬಿತ್ತಿ
ವೀರ ಜನ್ಮವನಿತ್ತ ಹಿರಿಯ ತಂದೆ;

ನೆಲದ ನಡೆವಳಿಕೆಯಲಿ ನಾಕದೌನ್ನತ್ಯವನು
ಮೇಳವಿಸಿ ತೋರಿದ ಪವಾಡಪುರುಷ;

ಪ್ರೇಮ ಸಂಸ್ಥಾಪನೆಯ ವಿಶ್ವಜಿದ್ಯಜ್ಞದಲಿ
ಪ್ರಾಣ ಪೂರ್ಣಾಹುತಿಯನಿತ್ತ ದಾನಿ;

ಭಾರತದ ಭಾಗ್ಯರವಿ ದೀನದಲಿತರ ರಕ್ಷೆ;
ವಿಮಲ ಧರ್ಮದ ವಾಣಿ ಜನತೆಯಂತಃಸಾಕ್ಷಿ;

ಸರ್ವೋದಯದ ಸೂತ್ರಧಾರ ಗಾಂಧಿ!

**ಕವಿ ಪರಿಚಯ**

ತೀ.ನಂ.ಶ್ರೀಕಂಠಯ್ಯನವರು 'ತೀ.ನಂ.ಶ್ರೀ' ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿದ್ದಾರೆ. ಇವರು ತುಮಕೂರು ಜಿಲ್ಲೆಯ ತೀರ್ಥಪುರದಲ್ಲಿ ೧೯೦೬ರಲ್ಲಿ ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಜೀವನ ಪ್ರಾರಂಭಿಸಿದ ಇವರು, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ಹಾಗೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಕರ್ನಾಟಕ ವಿಶ್ವವಿದ್ಯಾಲಯ ಪ್ರಾರಂಭವಾದಾಗ ಅಲ್ಲಿನ ಕನ್ನಡ ಅಧ್ಯಯನ ಪೀಠದ ಮೊದಲ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಮಿತಿಯ ಅಧ್ಯಕ್ಷರೂ ಆಗಿದ್ದರು.

ತೀ.ನಂ.ಶ್ರೀ ಕವಿ, ವಿಮರ್ಶಕ, ನಾಟಕಕಾರ, ಪ್ರಬಂಧಕಾರರಾಗಿ ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಇವರ ಕೃತಿಗಳಲ್ಲಿ ನಂಟರು, ಸಮಾಲೋಕನ, ಕಾವ್ಯ ಸಮೀಕ್ಷೆ, ಭಾರತೀಯ ಕಾವ್ಯ ಮೀಮಾಂಸೆ - ಈ ಮುಂತಾದವು ಪ್ರಸಿದ್ಧವಾಗಿವೆ. ಇವರ ಭಾರತೀಯ ಕಾವ್ಯಮೀಮಾಂಸೆಗೆ ೧೯೮೮ರಲ್ಲಿ ಕರ್ನಾಟಕ ಸರ್ಕಾರ 'ಪಂಪ ಪ್ರಶಸ್ತಿ' ನೀಡಿ ಗೌರವಿಸಿದೆ. ಇವರು ೧೯೬೬ರಲ್ಲಿ ಕೊಲ್ಕೊತದಲ್ಲಿ ನಿಧನ ಹೊಂದಿದರು.

ಪ್ರಸ್ತುತ ಕವನವನ್ನು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರು ಪ್ರಕಟಿಸಿರುವ ಗಾಂಧಿ ಎಂಬುವ ಹೆಸರು (ಸಂ.: ಚಂದ್ರಶೇಖರ ಪಾಟೀಲ) ಕೃತಿಯಿಂದ ಆರಿಸಲಾಗಿದೆ.

**ಆಶಯ**

*ಈ ಶತಮಾನದ ಮಹಾಮಾನವರಾದ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಮಹೋನ್ನತ ವ್ಯಕ್ತಿತ್ವ ಈ ಕವಿತೆಯಲ್ಲಿ ಕೆನೆಗಟ್ಟಿದೆ. ಅವರು ಅಹಿಂಸಾ ಮಾರ್ಗದಿಂದಲೇ ಬ್ರಿಟಿಷರ ವಿರುದ್ಧ ಹೋರಾಡಿ ಭಾರತದೇಶವನ್ನು ಬಂಧಮುಕ್ತಗೊಳಿಸಿದರು. ಸಮಾಜದಲ್ಲಿ ನಿಕೃಷ್ಟರಾದವರಲ್ಲಿಯೂ ಭರವಸೆ ತುಂಬಿ, ತಲೆ ಎತ್ತಿ ನಿಲ್ಲುವಂತೆ ಮಾಡಿದ ಗಾಂಧಿಯವರ ಹಿರಿಮೆಯನ್ನು ವರ್ಣಿಸುವುದೇ ಈ ಕವಿತೆಯ ಆಶಯವಾಗಿದೆ.*

**ಶಬ್ದಾರ್ಥ :**

ಇಳೆ - ಭೂಮಿ, ತಿರೆ; ಪರಮ - ಶ್ರೇಷ್ಠ; ದರ್ಪ - ಅಹಂಕಾರ, ಗರ್ವ; ಶಠತೆ - ಮೂರ್ಖತನ; ಕಲಿ - ವೀರ; ವಜ್ರಹೃದಯ - ದೃಢಮನಸ್ಸು, ಕೆಚ್ಚೆದೆ; ನಾಕ - ಸ್ವರ್ಗ; ಔನ್ನತ್ಯ - ಏಳಿಗೆ; ಮೇಳವಿಸಿ - ಒಂದುಗೂಡಿಸಿ; ಪವಾಡ - ಅದ್ಭುತಕಾರ್ಯ; ದೀನ - ಬಡವ; ವಿಮಲ - ಸ್ವಚ್ಛ, ಶುದ್ಧ.

**ಟಿಪ್ಪಣಿ :**

**ಹುಡಿಯ ಹುಳುಗಳು :** ಸಮಾಜದಲ್ಲಿ ನಿಕೃಷ್ಟರಾಗಿದ್ದವರು ಹಾಗೂ ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ಹೇಡಿಗಳಾಗಿದ್ದ ಭಾರತೀಯರು.

**ಪೂರ್ಣಾಹುತಿ :** ಯಜ್ಞದಲ್ಲಿ ಕೊಡುವ ಕೊನೆಯ ಹವಿಸ್ಸು.

**ವಿಶ್ವಜಿದ್ಯಜ್ಞ :** ವಿಶ್ವವನ್ನು ಜಯಿಸಲು ಮಾಡುವ ಯಾಗ.

## ಅಭ್ಯಾಸ

ಪ್ರಶ್ನೆಗಳು :

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಗಾಂಧಿಯವರು ಇಳೆಗೆ ಯಾವ ತತ್ವವನ್ನು ಬೋಧಿಸಿದರು?

೨. ಗಾಂಧಿಯವರು ದರ್ಪವನ್ನು ಯಾವುದರಿಂದ ಜಯಿಸಿದರು?

೩. ಗಾಂಧೀಜಿ ಯಾರಿಗೆ ಭಾಗ್ಯರವಿಯಾಗಿದ್ದರು?

೪. ಗಾಂಧೀಜಿ ಯಾವುದರ ಸೂತ್ರಧಾರ?

**ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕವಿ ಗಾಂಧಿಯವರನ್ನು ಪವಾಡಪುರುಷರೆಂದು ಕರೆಯಲು ಕಾರಣವೇನು?

೨. ಗಾಂಧೀಜಿಯನ್ನು 'ಹಿರಿಯ ತಂದೆ' ಎಂದು ಏಕೆ ಕರೆಯಲಾಗಿದೆ?

**ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ಗಾಂಧೀಜಿ ಸರ್ವೋದಯದ ಸೂತ್ರಧಾರ' - ಈ ಮಾತಿನ ಹಿನ್ನೆಲೆ ತಿಳಿಸಿರಿ.

೨. 'ಗಾಂಧಿ' ಕವನದ ಸಾರಾಂಶವನ್ನು ಸಂಗ್ರಹವಾಗಿ ಬರೆಯಿರಿ.

**ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯಸಹಿತ ವಿವರಿಸಿರಿ.**

೧. ಶಠತೆಯನು ಸತ್ಯದಲಿ ಜಯಿಸಿದ ಕಲಿ

೨. ವಿಮಲ ಧರ್ಮದ ವಾಣಿ ಜನತೆಯಂತಃಸಾಕ್ಷಿ

## ಭಾಷಾಭ್ಯಾಸ

**ಅ. ಕೆಳಗಿನವುಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.**

ಹುಳುಗಳನೆತ್ತಿ, ಪೂರ್ಣಾಹುತಿ, ಸರ್ವೋದಯ

**ಆ. ಕೆಳಗಿನ ಪದಗಳ ತದ್ಭವಗಳನ್ನು ಬರೆಯಿರಿ.**


ವಜ್ರ, ವೀರ, ಜನ್ಮ, ಪ್ರಾಣ, ಯಜ್ಞ, ಧರ್ಮ, ಸಂಸ್ಥಾ

**ಇ. ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಬಲ, ಸತ್ಯ, ಅಹಿಂಸೆ, ಸಹನೆ, ಧೈರ್ಯ

**ಈ. 'ದೀನದಲಿತ' - ಇಂಥ ಐದು ಜೋಡುನುಡಿಗಳನ್ನು ಬರೆಯಿರಿ.**

ಉ. ಈ ಕವನದಲ್ಲಿ 'ಗಾಂಧಿ' ಯವರಿಗೆ ಬಳಸಲಾದ ವಿಶೇಷಣಗಳನ್ನು ಪಟ್ಟಿ ಮಾಡಿರಿ.




## ಚಟುವಟಿಕೆ

೧. ಗಾಂಧೀಜಿ ಕುರಿತು ಬರೆದಿರುವ ಇನ್ನಿತರ ಕವನಗಳನ್ನು ಸಂಗ್ರಹಿಸಿ ಓದಿರಿ.

೨. ಗಾಂಧೀಜಿಯ ಮಹತ್ವವನ್ನು ಎತ್ತಿಹಿಡಿಯುವ ಕವನ ರಚಿಸಿರಿ.

೩. ಪೂರಕ ಓದು

ತಳರು ಭರತ ಕುಮಾರ
ಕೊಳುಗುಳದೊಳತಿವೀರ
ಸೆಳೆಮಿಂಚನೆಸೆಯೆ ತೆಗೆ
ರಣಕೆ ಬಳಿ ಸಂದು
ಮಳೆರಕ್ತದಲಿ ಬೀಳೆ,
ಬೆಳೆಕಲಿಗಳಿಂದೇಳೆ,
ಭಳಿರೆ ಭಾರತವರ್ಷ
ಸೌಭಾಗ್ಯವಂದು.

- ಪಂಜೆ ಮಂಗೇಶರಾವ್

# ೧೨. ಭಾಗ್ಯದ ಬಳೆಗಾರ

ಆಶಯ

ಕನ್ನಡ ಸಾಹಿತ್ಯಕ್ಕೆ ಜಾನಪದ ಸಾಹಿತ್ಯದ ಕೊಡುಗೆ ಅಪಾರ. ಇದು ಜನಸಾಮಾನ್ಯರು ರಚಿಸಿದ ಸಾಹಿತ್ಯ. ಗ್ರಂಥಸ್ಥ ಸಾಹಿತ್ಯವಲ್ಲ. ಹಳ್ಳಿಗರು ತಮ್ಮ ದಿನದಿನದ ಜೀವನ ನಿರ್ವಹಣೆಯಲ್ಲಿ ನಿರತರಾಗಿ, ಆಸೆ ಆಕಾಂಕ್ಷೆಗಳನ್ನು, ಏರುಪೇರುಗಳನ್ನು, ತಮ್ಮೆಲ್ಲ ಅನುಭವಗಳನ್ನು ಈ ಸಾಹಿತ್ಯದ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಅವರ ಸಮಗ್ರ ಬದುಕಿನ ಸಂಗಾತಿ ಈ ಜನಪದ ಸಾಹಿತ್ಯ. ಇಡೀ ಜನಾಂಗದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವ್ಯಾಪಕತೆ ಇದಕ್ಕಿದೆ.

ಭಾಗ್ಯಾದ ಬಳೆಗಾರ ಹೋಗಿ ಬಾ ತವರೀಗೆ

ಇನ್ನೆಲ್ಲಿ ನೋಡಲಿಂಥ ಬಳೆಗಾರ ಸೆಟ್ಟಿ
ನಮ್ಮ ನಾಡಲ್ಲಿ ಬಳೆಯಿಲ್ಲ | ಬಳೆಗಾರ
ಹೋಗಿ ಬಾರಯ್ಯ ನನ್ನ ತವರಿಗೆ ||

ನಿನ್ನ ತವರೂರ ನಾನೇನು ಬಲ್ಲೇನು
ಗೊತ್ತಿಲ್ಲ ಎನಗೆ ಗುರಿಯಿಲ್ಲ | ಎಲೆ ಬಾಲೆ
ತೋರಿಸು ಬಾರೆ ತವರೂರ ||

ಬಾಳೆ ಬಲಕ್ಕೆ ಬಿಡು ಸೀಬೆ ಎಡಕ್ಕೆ ಬಿಡು
ನಟ್ಟನಡುವೇನೆ ನೀ ಹೋಗು | ಬಳೆಗಾರ
ಅಲ್ಲಿಹುದೆನ್ನ ತವರೂರು ||

ಮುತ್ತೈದೆ ಎಲೆ ಹೆಣ್ಣೆ ತೋರು ಬಾ ನಿನ್ ತವರೂರ

ಹಂಚಿನ ಮನೆ ಕಾಣೊ ಕಂಚಿನ ಕದ ಕಾಣೊ
ನಿಂತಾವು ಎರಡು ಗಿಳಿಕಾಣೋ | ಬಳೆಗಾರ
ಅಲ್ಲಿಹುದೆನ್ನ ತವರೂರು ||

ಮುತ್ತೈದೆ ಹಟ್ಟೀಲಿ ಮುತ್ತೀನ ಚಪ್ಪರ ಹಾಕಿ
ನಟ್ಟನಡುವೇನೆ ಪಗಡೆಯ| ಆಡುತಾಳೆ
ಅವ್ವೆ ಕಣೊ ನನ್ನ ಹಡದವ್ವ ||

ಅಚ್ಚ ಕೆಂಪಿನ ಬಳೆ ಹಸಿರು ಗೀರಿನ ಬಳೆ
ನನ್ನ ಹಡೆದವ್ವೆ ಬಲು ಆಸೆ | ಬಳೆಗಾರ
ಕೊಂಡ್ಹೋಗೊ ಎನ್ನ ತವರೀಗೆ ||

ನಿನ್ನ ತವರೂರ ನಾನೀಗ ಬಲ್ಲೆನು
ಗೊತ್ತಾಯ್ತು ಎನಗೆ ಗುರಿಯಾಯ್ತು | ಎಲೆ ಹೆಣ್ಣೆ
ಹೋಗಿ ಬರುತೀನಿ ತವರೀಗೆ ||

ಜನಪದ ಗೀತೆ

**ಕವಿ ಪರಿಚಯ**

ಹಳ್ಳಿಯ ಅನಕ್ಷರಸ್ಥ ಸ್ತ್ರೀಪುರುಷರಿಂದ ರಚಿತವಾದುದು ಜನಪದ ಸಾಹಿತ್ಯ. ಅವರ ತುಂಬು ಅನುಭವವೇ ಸುಂದರ ಗೀತೆಗಳಾಗಿವೆ. ಅವುಗಳನ್ನು ಹಾಡಿದವರು ಯಾರೆಂಬುದು ತಿಳಿದಿಲ್ಲ. ಜನರ ಬಾಯಿಂದ ಬಾಯಿಗೆ ಹರಿಯುತ್ತಾ ಅವು ಉಳಿದು ಬಂದಿವೆ. ಈ ಸಾಹಿತ್ಯ ಒಬ್ಬಿಬ್ಬರ ಕೃತಿಯಲ್ಲ. ಇಡೀ ಸಮಾಜದ ಸಮಷ್ಟಿ ಮನಸ್ಸಿನ ಸಂಸ್ಕೃತಿಯ ಪ್ರತಿಬಿಂಬ. 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ಕವಿರಾಜಮಾರ್ಗಕಾರನು ಕನ್ನಡ ಜನರ ಕಾವ್ಯಶಕ್ತಿಯನ್ನು ಹೊಗಳುವಲ್ಲಿ ಈ ಜನಪದ ಸಾಹಿತ್ಯ ಆತನ ಮನಸ್ಸಿನಲ್ಲಿ ಇದ್ದಿರಬೇಕು. ಪ್ರಸ್ತುತ ಗೀತೆಯನ್ನು ಶ್ರೀಮತಿ ಎನ್. ಪ್ರಭಾ ಅವರು ಸಂಪಾದಿಸಿದ ಜನಪದ ಗೀತೆಗಳು ಗ್ರಂಥದಿಂದ ಆರಿಸಲಾಗಿದೆ.

**ಆಶಯ**

*ಹೆಣ್ಣು ಮಕ್ಕಳಿಗೆ ತವರಿನ, ತಾಯಿಯ ಮೇಲಣ ಆಸೆ ಬಲು ಹಿರಿದು. ಎಲ್ಲ ಸುಖ ದುಃಖಗಳನ್ನೂ ನೋವು ನಲಿವುಗಳನ್ನೂ ನುಂಗಿ ನಗುವ ಆಕರ್ಷಣೆಯ ತಾಣ ತೌರೂರು. 'ಬಳೆ' ಸೌಭಾಗ್ಯದ ಸಂಕೇತ. ಮನೆಗೆ ಬಂದ ಬಳೆಗಾರನಿಗೆ ಹೆಣ್ಣು ಮಗಳು 'ತನ್ನ ತವರೂರಿಗೂ ಹೋಗಿ ಬಾ' ಎಂದು ಹೇಳುವಳು. ತವರೂರಿನ ಸೌಭಾಗ್ಯ ಸದಾ ಹಸಿರಾಗಿರಲಿ ಎನ್ನುವ ಭಾವನೆಯೂ ಇದೆ. ಅಲ್ಲಿಗೆ ಹೋಗಲಿರುವ ದಾರಿಯ ಪರಿಚಯವೂ ಅದೆಷ್ಟು ಸಹಜ ಸುಂದರ! ಜೊತೆಗೆ ಪರಿಸರ ಸಂಪತ್ತನ್ನೂ ತೋರ್ಪಡಿಸುತ್ತದೆ. ಒಟ್ಟಾರೆ -*

*ಯಾರು ಆದರೂ ಹೆತ್ತ ತಾಯಂತೆ ಆದಾರೋ*
*ಸಾವಿರ ಸೌದೆ ಒಲೆಯಲ್ಲಿ | ಉರಿದಾರು*
*ದೀವಿಗೆಯಂತೆ ಬೆಳಕುಂಟೊ || - ಎಂಬುದು ಹೆಣ್ಣುಮಗಳ ಮಹದಾಸೆ.*

**ಶಬ್ದಾರ್ಥ :**

ಬಲ್ಲೆ - ತಿಳಿದಿರುವೆ; ಬಾಲೆ - ಹೆಣ್ಣುಮಗಳು; ನಟ್ಟನಡುವೆ - ಮಧ್ಯಭಾಗದಲ್ಲಿ;
ಕದ - ಬಾಗಿಲು; ಮುತ್ತೈದೆ - ಗಂಡನನ್ನುಳ್ಳವಳು, ಸುಮಂಗಲಿ; ಹಟ್ಟಿ - ಮನೆ.

**ಟಿಪ್ಪಣಿ :**

ಭಾಗ್ಯದ ಬಳೆಗಾರ - ಭಾಗ್ಯದ ಎನ್ನುವುದು ಬಳೆಗಾರನಿಗೆ ಸಂದ ವಿಶೇಷಣ.
ಪಗಡೆಯಾಟ - ಜೂಜಾಟ, ದಾಳಗಳನ್ನು ಉರುಳಿಸಿ ಆಡುವ ಆಟ

## ಅಭ್ಯಾಸ

ಪ್ರಶ್ನೆಗಳು :

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ತವರಿಗೆ ಹೋಗಿ ಬಾ ಎಂದು ಬಾಲೆ ಯಾರಿಗೆ ಹೇಳಿದಳು?

೨. ತವರಿಗೆ ಬಳೆ ತೆಗೆದುಕೊಂಡು ಹೋಗು ಎಂದು ಹೇಳಲು ಕಾರಣವೇನು?

೩. ಹಂಚಿನ ಮನೆಯ ಕದವನ್ನು ಯಾವುದರಿಂದ ಮಾಡಲಾಗಿದೆ?

೪. ಹಡೆದವ್ವನ ಆಸೆ ಏನು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ತೋರಿಸು ಬಾರೆ ತವರೂರ ಎಂದು ಬಳೆಗಾರ ಕೇಳಿದುದು ಏಕೆ?

೨. ಯಾವ ದಾರಿಯಲ್ಲಿ ಹೋಗುವಂತೆ ಬಾಲೆ ಬಳೆಗಾರನಿಗೆ ತಿಳಿಸಿದಳು?

೩. ಬಳೆಗಾರನಿಗೆ ಹಡದವ್ವನ ಗುರುತನ್ನು ಬಾಲೆ ಹೇಳಿದುದು ಹೇಗೆ?

ಇ. ಕೆಳಗಿನ ಪ್ರಶ್ನೆಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರಿಸಿರಿ.

ಬಾಲೆ ತನ್ನ ತೌರೂರು ಎಲ್ಲಿಹುದೆಂದು ಬಳೆಗಾರನಿಗೆ ಹೇಳಿದಳು?

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.

೧. ನಿನ್ನ ತವರೂರ ನಾನೇನು ಬಲ್ಲೆನು

೨. ಅವ್ವೆ ಕಣೋ ನನ್ನ ಹಡೆದವ್ವ

೩. ಕೊಂಡ್ಹೋಗೊ ಎನ್ನ ತವರೀಗೆ

## ಭಾಷಾಭ್ಯಾಸ

ಅ. ಬಿಟ್ಟ ಸ್ಥಳ ತುಂಬಿರಿ.

೧. ಬಾಳೆ ಬಲಕ್ಕೆ ಬಿಡು ............ ಎಡಕ್ಕೆ ಬಿಡು.

೨. ................ ಕಾಣೋ ಕಂಚಿನ ಕದ ಕಾಣೊ.

೩. ಅಚ್ಚ ಕೆಂಪಿನ ಬಳೆ .............. ಗೀರಿನ ಬಳೆ.

ಆ. ಕೆಳಗಿನ ಪದಗಳನ್ನು ಬಳಸಿ ವಾಕ್ಯ ರಚಿಸಿರಿ.

ಗೊತ್ತುಗುರಿ, ಎಡಬಲ, ನಟ್ಟನಡುವೆ

ಇ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಇನ್ನೆಲ್ಲಿ, ಅಲ್ಲಿಹುದು, ಕೊಂಡ್ಹೋಗೊ, ಗೊತ್ತಾಯ್ತು

ಈ. ಕೆಳಗಿನ ಪದಗಳ ಗ್ರಾಂಥಿಕ ರೂಪ ಬರೆಯಿರಿ.

ನಿಂತಾವು, ಅವ್ಳೆ, ಕೊಂಡ್ಹೋಗೊ, ಹಡೆದವ್ಳೆ

ಉ. ಕೆಳಗಿನ ಪದಗಳ ಶುದ್ಧರೂಪಗಳನ್ನು ಬರೆಯಿರಿ.

ಬಾಗ್ಯ, ಥವರುಮನೆ, ಭಳೆಗಾರ, ಮೂತ್ಸೈದೆ

## ಚಟುವಟಿಕೆ

೧. ಈ ಗೀತೆಯನ್ನು ರಾಗವಾಗಿ ಹಾಡಿರಿ.

೨. ಜನಪದ ಗೀತೆಗಳನ್ನು ಸಂಗ್ರಹಿಸಿರಿ.

೩. ಈ ಗೀತೆಯನ್ನು ಶಾಲಾ ಕಾರ್ಯಕ್ರಮದಲ್ಲಿ ಹಾಡಿ, ಅಭಿನಯಿಸಿರಿ.

೪. ಪೂರಕ ಓದು :

ಆದಿ ಮನೆಯೋಳೆ ಪಾದದುಂಗುರದೋಳೆ
ಗೋದಿ ಸೀರೇಯ ನೆರಿಗ್ಯೋಳೆ | ಸರಸೋತಿ
ಬರೆದು ಕೊಡಮ್ಮ ಪದಗಾಳ ||

ಅಟ್ಟಿಮನೆಯೋಳೆ ಬೆಟ್ಟಿನುಂಗುರದೋಳೆ
ಪಟ್ಟೆಯ ಸೀರೆ ನೆರಿಗ್ಯೋಳೆ | ಸರಸೋತಿ
ಏಳಿ ಕೊಡಮ್ಮ ಪದಗಾಳ ||

ಎಲ್ಲಿಗೋದ್ಯಮ್ಮ ಮಲ್ಲಿಗೆ ಮುಡಿಯೋಳೆ
ನಲ್ಲಾರಿ ಕಡದ ನಡುವೀನ | ಸರಸೋತಿ
ಎಲ್ಲಿಗೋದ್ಯಮ್ಮ ಪದಬರವು ||

ಎತ್ತಲೋದ್ಯಮ್ಮ ಮುತ್ತಿನ ಮುಡಿಯೋಳೆ
ಚಿತ್ತಾರಿ ಕಡಗದ ನಡುವೀನ | ಸರಸೋತಿ
ಎತ್ತಲೋದ್ಯಮ್ಮ ಪದಬರವು ||

\- ಜನಪದ ಗೀತೆ

# ೧೫. ಯುಗಾದಿ ಬರುವುದು ನಮಗೆಂದೆ ?

ಹೊರೆಯಾಲ ದೊರೆಸ್ವಾಮಿ

**ಪ್ರವೇಶ** ಸಾಹಿತ್ಯದ ಧೋರಣೆಗಳು, ಅವುಗಳ ನಿರೂಪಣಾ ರೀತಿ ಕಾಲದಿಂದ ಕಾಲಕ್ಕೆ ಬದಲಾಗುತ್ತ ನಡೆದಿದೆ. ಹೊಸಗನ್ನಡ ಸಾಹಿತ್ಯವನ್ನೂ ಈ ಹಿನ್ನೆಲೆಯಲ್ಲಿ ನೋಡಬಹುದು. ಹೊಸಗನ್ನಡ ಸಾಹಿತ್ಯದಲ್ಲಿ ಅಧ್ಯಯನದ ದೃಷ್ಟಿಯಿಂದ ಕೆಲವು ಘಟ್ಟಗಳನ್ನು ವಿಮರ್ಶಕರು ಗುರುತಿಸಿದ್ದಾರೆ. ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ, ನವ್ಯೋತ್ತರ - ಹೀಗೆ ಪ್ರಾತಿನಿಧಿಕವಾಗಿ ಬಂಡಾಯ ಸಾಹಿತ್ಯದ ಈ ಕವನವನ್ನು ಪರಿಚಯಿಸಲಾಗಿದೆ.

ವರ್ಷ ವರ್ಷಕು ಯಾತಕೊ ಏನೊ
ಹರ್ಷವು ಉಡುಗಿತು ಎದೆಯಲೆ ಅಡಗಿತು
ನಗುವಿನ ಪರದೆಯ ಒಳಗೊಳಗೆಲ್ಲ
ತುಳುಕಾಡಿತು ತುಂಬಿದ ಬೇವಿನ ಹಳ್ಳ

ಒಂದೇ ಎರಡೆ ಜೀವದ ಕೊರಗು
ತೂಗಿ ನೋಡಿದರೆ ಕತ್ತಿಯ ಅಲಗು
ಎಂದು ಬೀಳುವುದು ಯಾರಿಗೆ ಗೊತ್ತು
ಬಡವರ ಜೀವನ ಸಾವಿನ ಸ್ವತ್ತು

ಯುಗಾದಿ ಬಂದರು ಯುಗಾದಿ ಹೋದರು
ತುಂಬಲಿಲ್ಲವೆ ಬಡವರ ಬಸಿರು
ಮೂಡಲಿಲ್ಲವೆ ಮೂಡಣದಲ್ಲಿ
ಚಿಮ್ಮಿ ಚಿಗಿಯುವ ಜೀವದ ಉಸಿರು

ಎಂದೇ ಗೆಳತಿ ಹೇಳೆ ಗೆಳತಿ
ಯುಗಾದಿ ಬರುವದು ನಮಗೆಂದು
ತುಳುಕಿಸುವಂಥ ಜೀವದ ಕನಸ
ನನಸಾಗಿಸಿ ಬೆಳಗುವ ದಿನವೆಂದೆ?

ಅನ್ನದ ಅಗುಳನು ಹುಡುಕುವ ನಮಗೆ
ಚಿನ್ನದ ಕಾಳನು ತಡಕುವ ನಮಗೆ
ಯುಗಾದಿ ಬರುವುದು ನಿಜವೆ ಗೆಳತಿ
ಬಂದರೆ ಬರುವುದು ಹೇಗೆ ಗೆಳತಿ?

ಕೆಂಪು ಹಳದಿ ನೀಲಿ ಬಣ್ಣಗಳ
ಹೂಗಳ ನೋಡುತ ನೆಗೆನೆಗೆದಾಡುತ
ಪುಳಕಗೊಳ್ಳುವುದು ನಾವೆಂದೆ?
ತುಂಬಿ ತುಳುಕುವುದು ಇನ್ನೆಂದೆ?

**ಕವಿ ಪರಿಚಯ**

ಹೊರೆಯಾಲ ದೊರೆಸ್ವಾಮಿಯವರು ೩೧-೧೨-೧೯೪೬ರಂದು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹೊರೆಯಾಲ ಗ್ರಾಮದಲ್ಲಿ ಜನಿಸಿದರು. ಕೆಲವು ಕಾಲ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರಾಗಿದ್ದರು. ಈಗ ಹವ್ಯಾಸಿ ಪತ್ರಕರ್ತರೂ ಪುಸ್ತಕ ಪ್ರಕಾಶಕರೂ ಆಗಿದ್ದಾರೆ.

ಆರ್ನೆಸ್ಟ್, ಚೀನಿ ಜನತೆಯ ಪದ್ಯಗಳು. ಬಾ ಚೇತನವೇ ಬಾ, ಏಕಾಂಗಿ ನಾಗವ್ವ, ಮಕ್ಕಳ ಪದಗಳು, ಇದಿಯಮ್ಮ(ಖಂಡ ಕಾವ್ಯ) - ಇತ್ಯಾದಿ ಕವನಸಂಕಲನಗಳನ್ನು ರಚಿಸಿದ್ದಾರೆ. ಕೂಳೆ ಇವರ ಪ್ರಸಿದ್ಧ ಕಾದಂಬರಿ. ಹುಡುಕಾಡಿ ಬಂದ ಹೊನ್ನಿನ ಬದುಕು, ಬಯಲು ಇವರ ಇನ್ನಿತರ ಕಾದಂಬರಿಗಳು. ನಾಗನ ಕಥೆ, ಒಂದೂರಿನಲ್ಲಿ ಒಬ್ಬ ರಾಜ - ಇವರು ಮಕ್ಕಳಿಗಾಗಿಯೇ ಬರೆದ ನಾಟಕಗಳು. ಇನ್ನೂರಕ್ಕೂ ಹೆಚ್ಚು ಸಣ್ಣಕಥೆಗಳನ್ನು ಬರೆದಿದ್ದಾರೆ. ಈ ಕವಿತೆಯನ್ನು ಬಾ ಚೇತನವೇ ಬಾ ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**ಆಶಯ**

*ಕಾಲದ ಅನಂತತೆಯನ್ನು ಪ್ರಾತಿನಿಧಿಕವಾಗಿ ಸೂಚಿಸುವ 'ಯುಗಾದಿ', ಪ್ರಕೃತಿ ಆಧಾರಿತವಾದ ಒಂದು ಹಬ್ಬ. ಹರ್ಷ, ಉಲ್ಲಾಸ, ಸಡಗರದಿಂದ ಕೂಡಿದ ಈ ಹಬ್ಬವು ಬಡವರ ಪಾಲಿಗೆ ದಕ್ಕದೆ ಇರುವ ನೋವಿನ ಸಂಗತಿಯನ್ನು ಈ ಕವಿತೆ ತಿಳಿಸುತ್ತದೆ. ಬಡವರ ನೋವು, ಕಷ್ಟಗಳ ಮಧ್ಯೆ ಯುಗಾದಿಯ ಸಂಭ್ರಮ ಸಡಗರಗಳು ನಾಪತ್ತೆಯಾಗಿರುವುದನ್ನು ಇಲ್ಲಿ ಕವಿತೆಯಾಗಿ ರಚಿಸಲಾಗಿದೆ. ಮನುಷ್ಯನಿಗೆ ನೆಮ್ಮದಿ, ತೃಪ್ತಿ ಇರುವ ದಿನವೇ ಯುಗಾದಿ ಬರುವುದು ಎಂಬುದು ಈ ಕವಿತೆಯ ಆಶಯ. ಆ ದಿನ ಎಂದು ಬರುವುದು ಎಂಬ ನಿರೀಕ್ಷೆಯೊಂದಿಗೆ ಕವಿತೆ ಮುಕ್ತಾಯಗೊಳ್ಳುತ್ತದೆ.*

**ಶಬ್ದಾರ್ಥ :**

ಉಡುಗು - ಕುಗ್ಗು, ನಿಂತುಹೋಗು; **ಕೊರಗು** - ವ್ಯಥೆ, ಸೊರಗು; **ಮೂಡಣ** - ಪೂರ್ವ ದಿಕ್ಕು; **ಪುಳಕ** - ರೋಮಾಂಚನ.

## ಅಭ್ಯಾಸ

**ಪ್ರಶ್ನೆಗಳು :**

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಹರ್ಷವು ಏನಾಯಿತು?

೨. ಹರ್ಷವು ಎಲ್ಲಿ ಅಡಗಿತು?

೩. ಬಡವರ ಜೀವನ ಯಾರ ಸ್ವತ್ತು?

೪. ಯುಗಾದಿ ಬಂದರು ಯುಗಾದಿ ಹೋದರು ಯಾರ ಬಸಿರು ತುಂಬಲಿಲ್ಲ?

೫. ಮೂಡಣದಲ್ಲಿ ಏನು ಮೂಡಲಿಲ್ಲ?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಎಂಥ ಯುಗಾದಿ ಬರಲೆಂದು ಕವಿ ಆಶಿಸುತ್ತಾನೆ?

೨. ಯುಗಾದಿಯ ನಿರೀಕ್ಷೆಯಲ್ಲಿರುವವರ ಸ್ಥಿತಿ ಹೇಗಿದೆ?

ಇ. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಬೇವಿನಹಳ್ಳ ತುಳುಕಾಡುತ್ತಿದೆ ಎಂದು ಕವಿ ಏಕೆ ಹೇಳುತ್ತಾನೆ?

೨. ಕವಿ ಎಂತಹ ಯುಗಾದಿಯ ನಿರೀಕ್ಷೆಯಲ್ಲಿದ್ದಾನೆ?

ಈ. ಈ ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.

೧. ಬಡವರ ಜೀವನ ಸಾವಿನ ಸ್ವತ್ತು.

೨. ತುಂಬಲಿಲ್ಲವೆ ಬಡವರ ಬಸಿರು

೩. ನನಸಾಗಿಸಿ ಬೆಳಗುವ ದಿನವೆಂದು?

## ಭಾಷಾಭ್ಯಾಸ

ಅ. ಇವುಗಳನ್ನು ಬಿಡಿಸಿ ಬರೆಯಿರಿ.

ಒಳಗೊಳಗೆಲ್ಲ, ತುಳುಕಾಡಿತು, ತುಂಬಲಿಲ್ಲವೆ, ಮೂಡಣದಲ್ಲಿ, ನೆಗೆದಾಡುವ

ಆ. ಇವುಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಅಡಗು, ಅಲ್ಲಗು, ಮೂಡಣ, ನಿಜ.

ಇ. ತತ್ಸಮ-ತದ್ಭವ ಬರೆಯಿರಿ.

ವರ್ಷ, ಹರ್ಷ, ಬಣ್ಣ

ಈ. ಇಲ್ಲಿ 'ನಗುವೆಂಬ ಪರದೆ' ಎಂದು ಹೇಳದೆ ನಗುವಿನ ಪರದೆ (ನಗುವೇ ಪರದೆ) ಎಂದು ಹೇಳಿದೆ. ಇಲ್ಲಿ ಉಪಮಾನ-ಉಪಮೇಯಗಳಲ್ಲಿ ಭೇದವೇ ಇಲ್ಲ. ಹೀಗೆ ಅಭೇದ ಕಲ್ಪಿಸುವ ಅಲಂಕಾರವು ರೂಪಕಾಲಂಕಾರ ಎನಿಸುವುದು.

## ಚಟುವಟಿಕೆ

೧. ದ. ರಾ. ಬೇಂದ್ರೆಯವರ 'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ' ಎಂಬ ಕವಿತೆಯನ್ನು ಓದಿರಿ.

೨. ಮಾಸ್ತಿ ವೆಂಕಟೇಶ ಅಯ್ಯಂಗಾರರ 'ಉಗ್ರಪ್ಪನ ಉಗಾದಿ' ಸಣ್ಣ ಕಥೆ ಓದಿರಿ.

# ೧೪. ಆಧುನಿಕ ವಚನಗಳು

**ಪ್ರವೇಶ**

ಕನ್ನಡ ಸಾಹಿತ್ಯ ಪರಂಪರೆಯ ವಿಶಿಷ್ಟ ಕೊಡುಗೆ ವಚನಸಾಹಿತ್ಯ. ವಿಶ್ವಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆಯಿದು. ಇಲ್ಲಿ ಜೀವನಾನುಭವಗಳನ್ನು ಭಟ್ಟಿಯಿಳಿಸಲಾಗಿದೆ. ಇದು ಜನಸಾಮಾನ್ಯರೂ ಅರಗಿಸಿಕೊಳ್ಳಬಹುದಾದ ಮಟ್ಟದಲ್ಲಿದೆ.

ಹನ್ನೆರಡನೆಯ ಶತಮಾನದಲ್ಲಿ ವಚನಸಾಹಿತ್ಯ ಸ್ವತಂತ್ರ ಪ್ರಕಾರವಾಗಿ ಮೂಡಿಬಂತು. ಇಪ್ಪತ್ತನೆಯ ಶತಮಾನದಲ್ಲಿ ಆಧುನಿಕ ಕವಿಗಳು ಅದನ್ನು ಇನ್ನಷ್ಟು ಬೆಳೆಸಿದರು. ಶಿವಶರಣರ ವಚನಗಳಲ್ಲಿ ದೈವಭಕ್ತಿ ಆತ್ಮಶೋಧನೆ ಪ್ರಮುಖ ವಸ್ತುವಾಗಿದ್ದರೆ, ಆಧುನಿಕ ವಚನಕಾರರ ವಚನಗಳಲ್ಲಿ ಸಾಮಾಜಿಕ ವಿಡಂಬನೆ, ರಾಜಕೀಯ ವಿಮರ್ಶೆ, ಮಾನವೀಯ ಅನುಕಂಪ ಮುಂತಾದವುಗಳು ಮಿಳಿತಗೊಂಡಿವೆ.

ಸೂರ್ಯನಿಂದ ಸಿಡಿದು ಬಂದ ಭೂಮಿ
ಸೂರ್ಯನ ಸುತ್ತಲೂ ಸುತ್ತುತ್ತಿರುವುದಯ್ಯ
ಭೂಮಿಯಿಂದ ಸಿಡಿದು ಹೋದ ಚಂದ್ರ
ಭೂಮಿಯ ಸುತ್ತಲೂ ಸುತ್ತುತ್ತಿರುವುದಯ್ಯ
ನಿನ್ನಿಂದ ಸಿಡಿದ ನಿನ್ನೀ ಅಂಶಗಳು
ನಿನ್ನ ಸುತ್ತಲೂ ತಿರುಗದೆ, ತಮ್ಮ ಸುತ್ತಲೂ ತಿರುಗದೆ
ನಿನ್ನನು ತಿಳಿಯದೆ, ತಮ್ಮನೂ ತಿಳಿಯದೆ
ಊರೂರು ತಿರುಗುತ್ತ, ಮಾರುದ್ದ ನುಡಿವುದ ಕಂಡು
ನಾ ಬೆರಗಾದೆನಯ್ಯ ಶಾರದಾ ಸಖ ಈಶಾ ||೧||

ಘನವಾದ ಕೋಡು, ಘನವಾದ ಆಕಾರ
ಘನವಾದ ಶಕ್ತಿಯಿದ್ದರೂ ದನಗಳನು ಕಂಡು
ಅಂಜುವವರಾರಿಹರಯ್ಯ?
ಇನಿತೇ ಕೊಂಡಿ, ಇನಿತೆ ಆಕಾರ
ಇನಿತೇ ವಿಷ ಇದ್ದರೂ ಚೇಳನು ಕಂಡು
ಅಂಜದವರಾರಿಹರಯ್ಯ?
ಅಧಿಕಾರಕ್ಕಂಜುವರು, ಸಾಮರ್ಥ್ಯಕ್ಕಂಜುವರು
ಆಕಾರಕ್ಕಂಜುವರೆ ಶಾರದಾ ಸಖ ಈಶಾ ||೨||

ಪ್ರೊ. ಈರಣ್ಣಾ ಇಟಗಿ

ಅಧ್ಯಾತ್ಮ ಪಥದಲಿ ಮುಂದೆ ಹೆಜ್ಜೆಯನಿಡಲು
ಧ್ಯಾನವೆಂಬ ಊರುಗೋಲು ಬೇಕಯ್ಯ
ಧ್ಯಾನವು ಸತ್‌ಚಿಂತನೆಯನ್ನು ಭದ್ರಗೊಳಿಸುವುದಯ್ಯ
ರಹಸ್ಯವಾದ ಅಂತರವಾಣಿಯನ್ನೂ ಆಲಿಸಲು
ಧ್ಯಾನವೆಂಬ ಕಿವಿಗಳಿರಬೇಕಯ್ಯ
ಧ್ಯಾನವೆಂಬ ಅಗ್ನಿಯು ಪರಮ ಶ್ರೀಗುರುವೇ
ದುರ್ಗುಣ, ದೋಷಗಳನ್ನು ದಹಿಸಿ ನಿವಾರಿಸುವುದಯ್ಯ ||೩||

ಲೋಕದ ಬಂಡಿಯ ನಡೆಸುವವ ನೀನೊಬ್ಬನೇ ಅಯ್ಯ
ಈ ದೇಹವೆಂಬ ಬಂಡಿಗೆ ಐವರು
ನಾ ಮೇಲು - ನೀ ಮೇಲು ಅನ್ನುವರಯ್ಯ
ಇದರ ಮೇಲಿರುವ ಒಡೆಯ ನೀನಾದ ಕಾರಣ
ಪರಮ ಶ್ರೀಗುರುವೆ ಇವರ ಇಚ್ಛೆಯನರಿದು
ತಕ್ಕವನಾಗಿ ನಡೆಸದಿದ್ದರೆ
ಅಚ್ಚು ಮುರಿದ ಹಾಳು ಬಂಡಿಯಂತಯ್ಯ ||೪||

**ಶಾಂತಾದೇವಿ ಕೆ. ಸಾಬಾದಿ**

**ಟಿಪ್ಪಣಿ**

೧. ಪ್ರೊ. ಈರಣ್ಣ ಇಟಗಿಯವರು ಬಳ್ಳಾರಿ ಜಿಲ್ಲೆಯ ಹಿರೇಹಡಗಲಿಯಲ್ಲಿ ೧೯೫೦ರಲ್ಲಿ ಜನಿಸಿದರು. ಹೊಸಪೇಟೆಯ ವಿಜಯನಗರ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಉರ್ದು ಹಾಗೂ ಹಿಂದಿಯಿಂದ ಶಾಯಿರಿಗಳನ್ನು ಹಾಗೂ ಕಬೀರದಾಸರ ದೋಹಾಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದರು. ಕನ್ನಡದಿಂದ ಹಿಂದಿಗೆ ಬಸವಣ್ಣನವರ ವಚನಗಳನ್ನೂ ಅನುವಾದ ಮಾಡಿದ್ದಾರೆ. ಶಾರದಾ ಸಖ ಈಶಾ ಅವರ ಆಧುನಿಕ ವಚನಗಳ ಕಾವ್ಯನಾಮ. ಕನ್ನಡ ಶಾಯರಿಗಳು, ಕಬೀರದಾಸರ ಕನ್ನಡ ದೋಹೆಗಳು, ಸಾಕ್ಷರತಾ ಆಂದೋಲನದ ತ್ರಿಪದಿಗಳು, ಶಬ್ದಮಣಿದರ್ಪಣ ಸಂಗ್ರಹ, ಭಕ್ತವಾಣಿ - ಇವರ ಕೆಲವು ಪ್ರಕಟಿತ ಕೃತಿಗಳು.

೨. ಶಾಂತಾದೇವಿ ಕೆ. ಸಾಬಾದಿಯವರು ೧೯೩೬ರಲ್ಲಿ ಜನಿಸಿದರು. ಕೇವಲ ಆನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರೂ ಸ್ವಸಾಧನೆಯಿಂದ ಸಾಹಿತ್ಯ ಅಧ್ಯಯನ ಮಾಡಿ ಭಕ್ತಿಗೊಂಚಲು ಎಂಬ ವಚನ ಸಂಕಲನ ಪ್ರಕಟಿಸಿದರು. ಮೌನ ಮಲ್ಲಿಗೆ, ಮೌನ ಪ್ರಣತೆ - ಇವು ಅವರ ಇತರ ಕವನ ಸಂಕಲನಗಳು. ಅಕ್ಕನ ಬಳಗದವರ ೬೩ ವಚನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಬಾಗಲಕೋಟೆಯಲ್ಲಿ ನೆಲಸಿರುವ ಶಾಂತಾದೇವಿಯವರ ಪ್ರಸ್ತುತ ವಚನಗಳನ್ನು ವಚನ ಓಂಕಾರ ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**ಆಶಯ**

*ಇಂದಿನ ಯಾಂತ್ರಿಕ, ಬಿಡುವಿಲ್ಲದ ಬದುಕಿನಲ್ಲಿ ಬಾಳಲು ಅಗತ್ಯವಿರುವ ಲೌಕಿಕ, ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಅರಿವಿಲ್ಲದೆ ಸಾಗುತ್ತಿದ್ದೇವೆ. ಶಾಂತಿ ನಮ್ಮಿಂದ ದೂರವಾಗಿ, ಸ್ಪೈರಣೆ ಇಲ್ಲದ ಬದುಕು ಸಾಗಿಸುತ್ತಿದ್ದೇವೆ. ಧ್ಯಾನದ ಆವಶ್ಯಕತೆ, ಮೇಲು ಕೀಳೆಂಬ ಅಹಂಕಾರ ತೊರೆಯುವಿಕೆ, ಸೃಷ್ಟಿಯ ಅಂಶರೂಪಿಗಳಾದ ನಾವು ಸೃಷ್ಟಿಯ ಅರಿವಿಲ್ಲದೇ ಬದುಕುವ ಪರಿಸ್ಥಿತಿಯಿಂದ ಪಾರಾಗುವ ಬಗೆ, ಅಧಿಕಾರಕ್ಕೆ ಅಂಜುವ ಮನುಷ್ಯನ ಸ್ಥಿತಿಗತಿಯ ಬಗೆ - ಇತ್ಯಾದಿಗಳು ಈ ವಚನಗಳಲ್ಲಿ ಮೂರ್ತರೂಪ ಪಡೆದಿವೆ.*

**ಶಬ್ದಾರ್ಥ :**

ಅಧ್ಯಾತ್ಮ - ಆತ್ಮನಿಗೆ ಸಂಬಂಧಿಸಿದ್ದು; ಪಥ - ದಾರಿ, ಮಾರ್ಗ; ಊರುಗೋಲು - ಆಸರೆಯಾಗಿ ಹಿಡಿಯುವ ಕೋಲು; ಸತ್ ಚಿಂತನೆ - ಒಳ್ಳೆಯ ಆಲೋಚನೆ; ಭದ್ರ - ಗಟ್ಟಿ; ರಹಸ್ಯ - ಗುಟ್ಟು; ಅಂತರವಾಣಿ - ಒಳಗಿನ ದನಿ; ಆಲಿಸು - ಗಮನವಿಟ್ಟು ಕೇಳು; ದುರ್ಗುಣ - ಕೆಟ್ಟಗುಣ; ದೋಷ - ತಪ್ಪು; ದಹಿಸಿ - ಉರಿಸಿ; ಅಚ್ಚು - ನಡುಗೂಟ; ಇನಿತು - ಸ್ವಲ್ಪ, ಇಷ್ಟು.

**ಟಿಪ್ಪಣಿ :**

ಮಾರುದ್ದ - ಹಿಂದಿನ ಕಾಲದ ಒಂದು ಅಳತೆ. ಸುಮಾರು ನಾಲ್ಕು ಮೊಳ ಉದ್ದ.

ದೇಹವೆಂಬ ಬಂಡಿಗೆ ಐವರು - ಪಂಚೇಂದ್ರಿಯಗಳು - ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ.

## ಅಭ್ಯಾಸ

**ಪ್ರಶ್ನೆಗಳು :**

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಭೂಮಿ ಯಾವುದರಿಂದ ಸಿಡಿದು ಬಂತು?

೨. ಭೂಮಿಯಿಂದ ಸಿಡಿದು ಬಂದ ಚಂದ್ರ ಯಾರ ಸುತ್ತ ಸುತ್ತುತ್ತಿರುವನು?

೩. ಚೇಳನ್ನು ಕಂಡು ಹೆದರುವುದೇಕೆ?

೪. ಧ್ಯಾನವೆಂಬ ಊರುಗೋಲು ಏಕೆ ಬೇಕು?

೫. ಅಂತರವಾಣಿಯನ್ನು ಆಲಿಸುವುದಕ್ಕೆ ಏನು ಬೇಕು?

೬. ಲೋಕದ ಬಂಡಿಯ ನಡೆಸುವವ ಯಾರೆಂದು ಕವಿ ಹೇಳಿದ್ದಾರೆ?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ವಚನಕಾರರ ಪ್ರಕಾರ ದನದ ಸ್ವರೂಪ ಹೇಗಿತ್ತು? ತಿಳಿಸಿರಿ.

೨. ಧ್ಯಾನವೆಂಬ ಅಗ್ನಿಯು ಏನನ್ನು ದಹಿಸಿ ನಿವಾರಿಸುವುದು?

೩. ಚೇಳಿನ ಆಕಾರಕ್ಕಂಜುವರು - ಈ ಮಾತಿನ ಹಿನ್ನೆಲೆಯನ್ನು ತಿಳಿಸಿರಿ.

**ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಧ್ಯಾನದ ಮಹತ್ವವನ್ನು ವಚನಕಾರರು ಹೇಗೆ ನಿರೂಪಿಸಿದ್ದಾರೆ?

೨. ದೇಹವನ್ನು 'ಅಚ್ಚು ಮುರಿದ ಹಾಳು ಬಂಡಿ' ಎಂದು ಕರೆಯಲು ಕಾರಣವೇನು?

**ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯಸಹಿತ ವಿವರಿಸಿರಿ.**

೧. ಮಾರುದ್ದ ನುಡಿವುದ ಕಂಡು ನಾ ಬೆರಗಾದೆನಯ್ಯ.

೨. ಸಾಮರ್ಥ್ಯಕ್ಕಂಜುವರು ಆಕಾರಕ್ಕಂಜುವರೆ

೩. ನಾ ಮೇಲು - ನೀ ಮೇಲು ಅನ್ನುವರಯ್ಯ.

**ಉ. ಖಾಲಿ ಬಿಟ್ಟ ಸಾಲುಗಳನ್ನು ಸೂಕ್ತಪದಗಳಿಂದ ಭರ್ತಿ ಮಾಡಿರಿ.**

೧. ಅಧ್ಯಾತ್ಮ ಪಥದಲಿ ಮುಂದೆ ಹೆಜ್ಜೆಯನಿಡಲು
......................................ಊರುಗೋಲು ಬೇಕಯ್ಯ

೨. ಲೋಕದ ಬಂಡಿಯ ನಡೆಸುವವ ನೀನೊಬ್ಬನೆ ಅಯ್ಯ
...................................................... ಐವರು

## ಭಾಷಾಭ್ಯಾಸ

**ಅ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಕಿವಿಗಳಿರಬೇಕು, ನೀನೊಬ್ಬನೇ, ನಿನ್ನಿಂದ, ಊರೂರು, ಅಧಿಕಾರಕ್ಕಂಜು

**ಆ. ಕೆಳಗಿನ ಪದಗಳನ್ನು ವಾಕ್ಯದಲ್ಲಿ ಬಳಸಿರಿ.**

ಪಥ, ಧ್ಯಾನ, ದೋಷ, ಘನ

**ಇ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.**

ಅಂತರವಾಣಿ, ದುರ್ಗುಣ, ದೋಷ, ಆಕಾರ

**ಈ. ವರ್ತಮಾನ, ಭೂತ, ಭವಿಷ್ಯತ್ ಕಾಲಗಳಲ್ಲಿ ಈ ಕೆಳಗಿನ ಪದಗಳನ್ನು ಬರೆಯಿರಿ.**

| ಮಾದರಿ: | ಭೂತಕಾಲ | ವರ್ತಮಾನ ಕಾಲ | ಭವಿಷ್ಯತ್ ಕಾಲ |
|---|---|---|---|
| ಓದು | ಓದಿದನು | ಓದುತ್ತಾನೆ | ಓದುವನು |

ಆಡು ............ ............ ............

| | | | |
|---|---|---|---|
| ಕುಣಿ | ............ | ............ | ............ |
| ತಿನ್ನು | ............ | ............ | ............ |

## ಚಟುವಟಿಕೆ

೧. ಸಾಮಾಜಿಕ ಚಿಂತನೆಯುಳ್ಳ ವಚನಗಳನ್ನು ಸಂಗ್ರಹಿಸಿರಿ.

೧. ದೇವರದಾಸಿಮಯ್ಯ ೨. ಬಸವಣ್ಣ ೩. ಅಕ್ಕಮಹಾದೇವಿ

೨. ಈ ಕೆಳಗಿನ ವಚನಕಾರರ / ಕೀರ್ತನಕಾರರ ಅಂಕಿತಗಳನ್ನು ತಿಳಿಸಿರಿ.

ಅಲ್ಲಮಪ್ರಭು :
ಪುರಂದರದಾಸ :
ಸಿದ್ಧರಾಮ :
ಕನಕದಾಸ :

೩. ಅಲಂಕಾರ

ಉಪಮಾಲಂಕಾರ: ಎರಡು ವಸ್ತುಗಳಿಗಿರುವ ಗುಣಸ್ವಭಾವಗಳ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ. ಹೋಲಿಕೆಗೆ ಒಳಗಾಗುವುದು ಉಪಮೇಯ. ಹೋಲಿಸಲು ಹೊರಗಿನಿಂದ ತರುವುದು ಉಪಮಾನ. ಅಂತೆ, ಹಾಗೆ, ಓಲ್ ಎಂಬವುಗಳು ಉಪಮಾವಾಚಕಗಳು. ಉದಾ: ಅಚ್ಚು ಮುರಿದ ಹಾಳು ಬಂಡಿಯಂತಯ್ಯ. (ಅಂತೆ)

೪. ಪೂರಕ ಓದು

ಅ. ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ ಅಯ್ಯಾ?
ಅಘೋರ ತಪವ ಮಾಡಿದಡೇನು?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ
ಕೂಡಲಸಂಗಮದೇವ? (ಬಸವಣ್ಣ)

ಆ. ಬರಿ ಸಟೆಗನ ಭಕ್ತಿ ದಿಟವೆಂದು ನಚ್ಚಲುಬೇಡ,
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ರಾಮನಾಥಾ (ಜೇಡರ ದಾಸಿಮಯ್ಯ)

# ೧೫. ಹಡಗದ ಚಂದ

ವಿ.ಕೃ. ಗೋಕಾಕ

**ಪ್ರವೇಶ** ಮೇಲ್ನೋಟಕ್ಕೆ ಗದ್ಯದಂತೆ ಕಂಡುಬಂದರೂ ಅದರೊಳಗಿನ ಲಯಗಾರಿಕೆ, ಅರ್ಥವಂತಿಕೆ, ಸ್ವಚ್ಛಂದ ಛಂದ ನಿಮಿತ್ತವಾಗಿ ನವ್ಯ ಕವನಗಳು ಓದುಗರಿಗೆ ಹತ್ತಿರದ್ದಾಗುತ್ತವೆ. ವಸ್ತುವನ್ನು ರಂಜಕವಾಗಿ ಕಾಣದೆ ವಸ್ತುನಿಷ್ಠವಾಗಿಯೇ ಕಾಣುವ ಕ್ರಮ ನವ್ಯದಲ್ಲಿ ಅಧಿಕ. ಅಗತ್ಯ ಬಿದ್ದರೆ ಸಾಂಕೇತಿಕವಾಗಿಯೂ ಪ್ರಯೋಗಾತ್ಮಕವಾಗಿಯೂ ನವ್ಯಕಾವ್ಯ ಕೆಲಸ ಮಾಡುತ್ತದೆ.

ಒಂದು ಮಾಟವಿದೆ ಮೋಟುಮರದಂಥ ಈ ಹಡಗದಲ್ಲಿ,
ಒಂದು ಕ್ರಮವಿದೆ, - ಯಂತ್ರಯುಗದ ಈ ಭ್ರಮೆಯಲ್ಲಿ!
ಅಂದವಿದೆ - ಚಂದವಿದೆ ಸಹ! ತಿಳಿದು ನೋಡಲಿದೀಗ!

ಇದು ದೋಣಿಯಲ್ಲ - ತೇಲುತಿರುವ ಹಿರಿಬಣದೋಣಿ!
ಕಬ್ಬಿಣದ ಕಟ್ಟಡವಲ್ಲ, - ಇಟ್ಟಣಿಸುವ ಪಟ್ಟಣವಿದು!
ಇದು ಬ್ರಹ್ಮಾಂಡ, - ನೂರು ಭಾಷೆಗಳ ನವಖಂಡ !

ಸಪ್ತಸಾಗರದ ಮೇಲೆ ಸೃಷ್ಟಿಯನ್ನು ತೇಲುಬಿಟ್ಟಂತೆ
ವಿಶ್ವಕರ್ಮನು ರಚಿಸಿ ತೇಲುಬಿಟ್ಟನಿದನ್ನು
ತಿಮಿಂಗಿಲದಂತೆ ತಿರುಗುತಿದೆ! ತಿರುಗಿಸಿದೆ!

ಇಂದು ಭಾರತ, ನಾಳೆ ಅರಬ್ಬೀದೇಶ
ಇಂದು ಇಜಿಪ್ತದಲ್ಲಿ, ನಾಳೆ ಯುರೋಪಿನಲ್ಲಿ,-
ಇದರಗತಿ, - ಕಾಲಗತಿ! ಇದರ ವೇಗ, - ವಾಯುವೇಗ !

ಇಲ್ಲಿಯ ಊಟ - ಉಪಚಾರ, - ಮನೆಗಿಂತ ಹೆಚ್ಚು.
ಇಲ್ಲಿಯ ಆಟ - ನೋಟ - ಊರಿಗಿಂತ ಮೆಚ್ಚು.
ಮನದ ಮಹಲನು ಕಟ್ಟಬಹುದು! ಮನಬಂದಂತೆ ಕುಣಿಯಬಹುದು!
ಇದು ಹಡಗವಲ್ಲ, - ಸಂಕ್ಷಿಪ್ತ ಬ್ರಹ್ಮಾಂಡವಿದು!
ಮಾನವನ ಕೌಶಲ್ಯಕ್ಕೆ ಕಳಸವಿಟ್ಟಿದೆಯಿಲ್ಲಿ.
ನೆರವೇ ಗೆಲುವು, ಔಚಿತ್ಯವೇ ಚೆಲುವು, -
ಎಂಬುದನ್ನು ಬರೆದು ಕೊರೆದು ಸಾರಿದೆಯಿಲ್ಲಿ!

### ಕವಿ ಪರಿಚಯ

ಧಾರವಾಡ ಜಿಲ್ಲೆಯ ಸವಣೂರು ಎಂಬಲ್ಲಿ ೧೯೦೯ರಲ್ಲಿ ಜನಿಸಿದ ಡಾ. ವಿನಾಯಕ ಕೃಷ್ಣ ಗೋಕಾಕರು 'ವಿನಾಯಕ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ. ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ಕೊಲ್ಹಾಪುರ, ಹೈದರಾಬಾದ್, ಪುಣೆ, ಧಾರವಾಡಗಳಲ್ಲಿ ಅಧ್ಯಾಪಕ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ಸತ್ಯಸಾಯಿ ಬಾಬಾರವರ ಪ್ರಶಾಂತಿ ನಿಲಯದ ಕುಲಪತಿಗಳಾಗಿ, ನಿವೃತ್ತರಾದರು. ಕನ್ನಡ ಭಾಷೆಯ ಬೆಳವಣಿಗೆಯ ಮತ್ತು ಆಡಳಿತ ಭಾಷೆಯಾಗಿ ಕನ್ನಡ ಅನುಷ್ಠಾನಗೊಳ್ಳುವ ದಿಸೆಯಲ್ಲಿ ಗೋಕಾಕ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ನಂತರ ಗೋಕಾಕ್ ಸಮಿತಿಯ ವರದಿ ಜಾರಿಗೆ ತರಲು ರಾಜ್ಯವ್ಯಾಪಿಯಾಗಿ ಚಳುವಳಿಯೂ ನಡೆಯಿತು.

ನವ್ಯಕವಿತೆಗಳು, ಕಲೋಪಾಸಕ, ಪಯಣ, ಬಾಳದೇಗುಲದಲ್ಲಿ, ಊರ್ಣನಾಭ, ಚೆಲುವಿನ ನಿಲುವು, ಇಜ್ಜೋಡು, ಸಮರಸವೇ ಜೀವನ, ನವ್ಯತೆ, ಕಾವ್ಯಜೀವನ, ದ್ಯಾವಾ ಪೃಥಿವೀ - ಮುಂತಾದವು ಇವರ ಕೆಲವು ಕೃತಿಗಳು. ಹಲವು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್, ಕೇಂದ್ರ ಸರ್ಕಾರದ ಪದ್ಮಶ್ರೀ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದವರಾಗಿದ್ದಾರೆ. ೧೯೫೮ರಲ್ಲಿ ಬಳ್ಳಾರಿಯಲ್ಲಿ ನಡೆದ ಅಖಿಲ ಭಾರತ ೪೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಗೋಕಾಕರ ಸಮಗ್ರ ಸಾಹಿತ್ಯಕ್ಕೆ ೧೯೯೧ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ೧೯೯೨ರಲ್ಲಿ ಗೋಕಾಕರು ನಿಧನ ಹೊಂದಿದರು.

ಪ್ರಸ್ತುತ ಕವನವನ್ನು ಗೋಕಾಕರ ನವ್ಯಕಾವ್ಯ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

### ಆಶಯ

*ಸಾಗರಗಳಲ್ಲಿ ಸಾಗುವ ವಾಹನವೇ ಹಡಗು. ಸಾರಿಗೆ ವ್ಯವಸ್ಥೆಯಲ್ಲಿ ಜಲಮಾರ್ಗ ಪ್ರಮುಖ ಸ್ಥಾನ ಪಡೆದಿದೆ. ಯುದ್ಧ ಕಾಲದಲ್ಲಿ ಸಾಗರ ತೀರದ ಗಡಿಯನ್ನು ರಕ್ಷಿಸುವ ಯುದ್ಧ ಹಡಗುಗಳು ರಾಷ್ಟ್ರದ ರಕ್ಷಣೆಗೆ ಅನಿವಾರ್ಯ. ಬೃಹತ್ ಗಾತ್ರದ ಈ ಹಡಗುಗಳು ತಿಮಿಂಗಿಲದಂತಿರುತ್ತವೆ. ಸಪ್ತಸಾಗರದ ಮೇಲೆ, ವಿಶ್ವಕರ್ಮನೇ ರಚಿಸಿ ಬಿಟ್ಟಂತಿರುವ ಈ ಹಡಗುಗಳು ಮಾನವ ಕೌಶಲ್ಯಕ್ಕೆ ಕಳಸವಿಟ್ಟಂತಿದೆ. ಇದು ಹಡಗವಲ್ಲ. ಸಂಕ್ಷಿಪ್ತ ಬ್ರಹ್ಮಾಂಡವೆಂದು ಕವಿ ವರ್ಣಿಸಿದ್ದಾರೆ. ಹಡಗದ ಪ್ರವಾಸ ಕಡಿಮೆಯಾಗುತ್ತ ಬರುತ್ತಿರುವ ಇಂದಿನ ಸಂದರ್ಭದಲ್ಲಿ ಅದರ ಮಹತ್ವವನ್ನು ಯುವತಲೆಮಾರಿಗೆ ತಿಳಿಯಹೇಳುವ ಉದ್ದೇಶ ಇಲ್ಲಿದೆ.*

**ಶಬ್ದಾರ್ಥ :**

ಮಾಟ - ಚೆಲುವು, ಬೆಡಗು; ಮೋಟು - ಮೊಂಡಾದುದು; ಭ್ರಮೆ - ಭ್ರಾಂತಿ, ಒಂದನ್ನು ಇನ್ನೊಂದಾಗಿ ತಿಳಿಯುವುದು; ಹಿರಿಬಣ - ದೊಡ್ಡ ನಿರ್ಜನತೆ; ಇಟ್ಟಣಿಸು - ಗುರಿಸಾಗು; ಬ್ರಹ್ಮಾಂಡ - ವಿಶ್ವ; ವಿಶ್ವಕರ್ಮ - ದೇವಶಿಲ್ಪಿ; ನೆರವು - ಸಹಕಾರ; ಔಚಿತ್ಯ - ಉಚಿತವೆನಿಸುವ, ಯೋಗ್ಯವಾದ.

ಟಿಪ್ಪಣಿ :

ಸಪ್ತಸಾಗರ - ಕ್ಷಾರ, ಕ್ಷೀರ, ದಧಿ, ಘೃತ, ಇಕ್ಷುರಸ, ಮದ್ಯ ಮತ್ತು ಸಿಹಿನೀರು.

## ಅಭ್ಯಾಸ

### ಪ್ರಶ್ನೆಗಳು

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಹಡಗವು ಎಷ್ಟು ಭಾಷೆಗಳ ನವಖಂಡ?

೨. ಈ ಹಡಗವನ್ನು ಯಾವುದರ ಮೇಲೆ ತೇಲಿಬಿಟ್ಟರು?

೩. ಹಡಗು ಹೇಗೆ ತಿರುಗುತ್ತಿದೆ?

೪. ಹಡಗದ ಗತಿ ಯಾವುದು?

೫. ಹಡಗವು ಯಾವ ವೇಗದಲ್ಲಿ ಚಲಿಸುತ್ತದೆ?

೬. ಹಡಗು ಯಾರ ಕೌಶಲ್ಯಕ್ಕೆ ಕಳಸವಿಟ್ಟಿದೆ?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಕವಿ ಹಡಗನ್ನು ನವಖಂಡ ಎಂದು ಕರೆಯಲು ಕಾರಣವೇನು?

೨. ಹಡಗು ಯಾವ ಯಾವ ದೇಶಗಳಲ್ಲಿ ಸಂಚರಿಸುತ್ತದೆ?

೩. ಹಡಗನ್ನು ಸಂಕ್ಷಿಪ್ತ ಬ್ರಹ್ಮಾಂಡವೆಂದು ಏಕೆ ಕರೆಯಲಾಗಿದೆ?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಹಡಗಿನ ಅಂದ-ಚಂದದ ಬಗೆಗೆ ಕವಿ ನೀಡಿದ ವಿವರಣೆಯನ್ನು ಸಂಗ್ರಹಿಸಿರಿ.

೨. ಕವಿಗೆ ಹಡಗಿನ ಪ್ರಯಾಣ ನೀಡಿದ ಅನುಭವವೇನು? ವಿವರಿಸಿರಿ.

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ಬರೆಯಿರಿ.

೧. ಯಂತ್ರಯುಗದ ಈ ಭ್ರಮೆಯಲ್ಲಿ! ಅಂದವಿದೆ, - ಚಂದವಿದೆ ಸಹ!

೨. ಇದು ಬ್ರಹ್ಮಾಂಡ - ನೂರು ಭಾಷೆಗಳ ನವಖಂಡ!

೩. ನೆರವೇ ಗೆಲುವು, ಔಚಿತ್ಯವೇ ಚೆಲುವು

## ಭಾಷಾಭ್ಯಾಸ

ಅ. ಇವುಗಳಿಗೆ ತದ್ಭವಗಳನ್ನು ಬರೆಯಿರಿ.

ಬ್ರಹ್ಮ, ಭ್ರಮೆ, ಕಲಶ, ಯಂತ್ರ, ಪಟ್ಟಣ

ಆ. ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಕ್ರಮ, ತೃಪ್ತಿ, ಖಂಡ, ಔಚಿತ್ಯ, ಗತಿ

ಇ. ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಹಡಗು, ಮಹಲು, ಕಾಲ, ಅಂದ

ಈ. ಕೆಳಗಿನ ನುಡಿಗಟ್ಟನ್ನು ಗಮನಿಸಿರಿ. ಈ ಕವನದಲ್ಲಿರುವ ಇತರ ನುಡಿಗಟ್ಟುಗಳನ್ನು ಸಂಗ್ರಹಿಸಿರಿ.

ತೇಲಿಬಿಡು, .........., .........., .........., ............

ಉ. ಕೆಳಗೆ ನೀಡಲಾದ ಪದಗಳನ್ನು ಹಡಗಿಗೆ ಸಂಬಂಧಪಡುವಂತೆ ಸ್ವಂತ ವಾಕ್ಯಗಳಲ್ಲಿ ಅಳವಡಿಸಿರಿ.

ಮಹಲು, ಕಬ್ಬಿಣ, ಬ್ರಹ್ಮಾಂಡ, ಕಳಸ, ಕೌಶಲ್ಯ, ಸಪ್ತಸಾಗರ, ಚಲಿಸು.

## ಚಟುವಟಿಕೆ

೧. ಯಾವುದಾದರೂ ಬಂದರಿಗೆ ಭೇಟಿ ನೀಡಿ, ಹಡಗನ್ನು ವೀಕ್ಷಿಸಿ ಅದರ ಬಗ್ಗೆ ಪ್ರಬಂಧ ಬರೆಯಿರಿ.

೨. ಸಾಗರ ಸಂಪತ್ತಿನ ಬಗೆಗೆ ಮಾಹಿತಿಯನ್ನು ಸಂಗ್ರಹಿಸಿರಿ.

೩. ಇನ್ನಿತರ ನವ್ಯಕವನಗಳನ್ನು ಓದಿರಿ.

೪. ಪೂರಕ ಓದು:

### ಕರೆ

ಮರದ ಮೇಲೆ ಕುಣಿವ ಕಪಿಗಳು
ಚೆಲ್ಲಾಟವಾಡಿದವು
ದೂರ ಚರ್ಚಿನ ಗಂಟೆ
ದಿನವಿಡೀ ನುಡಿಯುತ್ತಲೇ ಇದೆ
ಪೇಟೆಯ ತುಂಬ ದರಗಳ ಬೇಟೆ
ಕೊಂಕು ಕೆದಕು ಹೊಂಚು ವಂಚನೆಯ
ನಗಾರಿ ಸಪ್ಪಳಗಳ ಮಧ್ಯೆ
ನಾವು ಕೇವಲ ಧ್ವನಿಯಾಗಬೇಕಿದೆ.
ಅದು ಹೊಸ ಕಾಲದ ಕರೆಯಾಗಿ
ಎಲ್ಲರ ಕಿವಿ ತಾಗಬೇಕಿದೆ.

- ಹೇಮಾ ಪಟ್ಟಣಶೆಟ್ಟಿ

# ೧೬. ದರ್ಶನ

ನಾ. ಮೊಗಸಾಲೆ

**ಆಶಯ**

ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ 'ಕಥನ ಕವನ'ವೂ ಒಂದು. ಕವನದ ಮೂಲಕ ಕಥೆಯನ್ನು ಹೇಳುವ ಕ್ರಿಯೆ ಇಲ್ಲಿ ನಡೆಯುತ್ತದೆ. ರಸಪ್ರಧಾನವಾಗಿದ್ದು ನಮಗರಿವಿಲ್ಲದೆಯೇ ಓದಿಸಿಕೊಂಡು ಹೋಗಿ, ಗಹನವಾದ ಅರ್ಥವನ್ನು ಕುರಿತು ಚಿಂತಿಸುವಂತೆ ಮಾಡುತ್ತದೆ. ಮುಂದೇನು ಎನ್ನುವ ಕುತೂಹಲ ಪದ್ಯದ ಕೊನೆಯ ಸಾಲುಗಳಿಗೇನೇ ಸೀಮಿತವಾಗದೇ ನಡುನಡುವೆ ಹೊಸಹೊಸ ಹೊಳಹುಗಳು ಬರುತ್ತಲೇ ಇರುತ್ತವೆ. ಓದುಗನ ಹೃದಯಾಂತರಾಳದಲ್ಲಿ ಯೋಚನಾ - ಯೋಜನಾ ಲಹರಿಗಳು ಪುಟಿದೇಳುವಂತೆ ಮಾಡುತ್ತವೆ.

ತಿರುಪತಿಗೆ ಹೋದೆ ಅಮೇರಿಕೆಯಿಂದ ಬಂದ ಮಗ
ನೊತ್ತಾಯಕ್ಕೆ ಒಳಗಾಗಿ ಹೆಂಡತಿಯ ಜೊತೆಗೂಡಿ
ದೇವದರ್ಶನ ಭಾಗ್ಯ ಸರತಿಯಲಿ ಅರ್ಧ ದಿನ
ಕಾದು ಸಿಕ್ಕಿದ ಹಾಗೆ ಇಹಪರವ ಮೀರಿ.

ನನ್ನ ಜೊತೆ ಸರತಿಯಲ್ಲಿದ್ದ ಹಿರಿಯರೊಬ್ಬರು ನನ್ನ
ನೋಡುತ್ತಿದ್ದರು ಮತ್ತೆ ಮತ್ತೆ ತಾವೇ ಕಣ್ಣಾಗಿ
ಅವರ ತುಟಿಗಳ ಮೋಡ ಕರಗಿ ತುಡಿಯುತ್ತಿತ್ತು
ಹೇಳಲೇಬೇಕೆಂಬ ಬಯಕೆ ಮಾತಾಗಿ.

ನನಗೆ ಅಚ್ಚರಿ! ನನ್ನ ಮೊದಲ ಓದಿನ ಮೇಸ್ಟ್ರು
ಸತ್ತವರು ಮೇಲೆದ್ದು ಬಂದಂತೆ ಇಲ್ಲಿ
ಅದೇ ಮುಖವು ಅದೇ ನಿಲುವು ಅವರದೇ ಮಾತಿರಬಹುದು
ಎನುವಂತೆ ನೋಡುತ್ತಾರೆ ತುಂಬಿ ತನ್ನಲ್ಲಿ.

ದರುಶನ ಮುಗಿಸಿ ಇಬ್ಬರೂ ಬಂದೆವು ಹೊರಗೆ
ಇಬ್ಬರಿಗು ಮಾತಾಗಬೇಕೆಂಬ ತವಕ.
ನಾನು ಇಂಥವ! ನೀವು? ಎನುವ ಮೊದಲೆ ಆ-
ಹಿರಿಯರೇ ತೊಡಗಿದರು ತಮ್ಮ ಪ್ರವರ.

ನನ್ನ ಪರಿಚಯಕ್ಕಿಂತ ನಾನವರ ಜೊತೆಯಲ್ಲಿ
ಬರಬೇಕು ಎನ್ನುವುದೇ ಮುಖ್ಯವಾಗಿ
ಆಹ್ವಾನಿಸಿದರು ಅವರು ತಾವುಳಿದ ಬಾಡಿಗೆಯ
ಕೋಣೆಯನು ಮನೆಯೆಂದು ತಿಳಿದು ಬನ್ನಿ.

ಸರಿ ಎಂದು ನಡೆದೆವು. ಅವರು ಸಂಭ್ರಮದಿಂದ
ಸ್ವಾಗತಿಸಿ ಹಣ್ಣು ಹಂಪಲುಗಳಿಂದ ಸತ್ಕರಿಸಿ,
ನನ್ನ ಬಳಿ ಸಾರಿ ಕುಳಿತು ಕೈ ಮುಗಿದು ಹೇಳಿದರು;
ನಿಮ್ಮಂತಹ ಮಗನಿದ್ದ ಅವನೂ ಕವಿ!

ತೀರಿಹೋದನು ಅವನು ಹದಿನೈದು ವರುಷದ ಹಿಂದೆ
ಅಪಘಾತದಲ್ಲಿ ಇಲ್ಲಿಂದ ಮರಳುವಾಗ
ಬರುವೆ ತಪ್ಪದೆ ಪ್ರತಿವರುಷವೂ ಈ ದಿನಕ್ಕೆ
ನೆನೆಸಿಕೊಳ್ಳಲು ಇದುವೆ ತಕ್ಕ ಜಾಗ.

ಇಷ್ಟು ವರುಷದ ಮೇಲೆ ಅವನನ್ನೇ ಕಂಡೆ ನಿಮ್ಮಲ್ಲಿ
ನಿಮ್ಮ ಹಾಗೇ ಎಲ್ಲ! ಇಲ್ಲ ರವಷ್ಟು ವ್ಯತ್ಯಾಸ.
ನೀವು ಯಾರೇ ಆಗಿರಿ ಅಪ್ಪಿಕೊಳ್ಳಬೇಕೆನಿಸುತ್ತದೆ, ಈ ಕ್ಷಣ
ಒಪ್ಪಿಗೆಯ ಕೊಡಿ ದಯವಿಟ್ಟು ಅನಬೇಡಿ 'ಇಲ್ಲ!'

ಕೊಟ್ಟೆ ಒಪ್ಪಿಗೆ ಅವರು ಬಿಗಿದಪ್ಪಿ ಮುದ್ದಿಸಿದಾಗ
ಇಷ್ಟು ದಿನ ಯಾರೂ ಹೀಗೆ ಅಪ್ಪಿಕೊಳ್ಳದಂಥ
ರೋಮಾಂಚನದ ಜೊತೆಗೆ, ನನ್ನ ಮೇಷ್ಟ್ರೇ ಮತ್ತೆ
ಬಂದಪ್ಪಿಕೊಂಡಂತಹ ಸಾರ್ಥಕ್ಯಭಾವ.

ಬೀಳ್ಕೊಡುವಾಗ ಇಬ್ಬರೂ ಬೆಟ್ಟವಾದೆವು ಪ್ರತ್ಯೇಕ
ನಮ್ಮಿಬ್ಬರ ನಡುವೆ ಮಗನೇ ಗಾಳಿಯಾದ
ಅಮೇರಿಕಕೆ ಹೊರಟಾಗ ಈ ನೆನಪಿನ ಮೋಡ ಹೊತ್ತು
ಆಮೇಲೆ ಮಳೆಯಂಥ ಪತ್ರ ಬರೆದ.

'ಅಪ್ಪ! ದೇವರಿದ್ದಾನೋ ಇಲ್ಲವೋ ನನಗೆ ಗೊತ್ತಿಲ್ಲ!
ಅಮ್ಮನ ಸಂತೋಷಕೆಂದೇ ತಿರುಪತಿಗೆ ಹೋದೆ
ನಿಮಗೆ ಇಷ್ಟವಿರಲಿಲ್ಲ ನಾನು ಅಮೇರಿಕಕ್ಕೆ ಹೋಗುವುದು!
'ನನಗೆ ತಿಳಿಯಲಿಲ್ಲ ಆಗ, ಈಗ ತಿಳಿದಿದೆ!

ನಿನ್ನೆ ನನಗಿಲ್ಲಿ ಹಸಿರು ಕಾರ್ಡು ಸಿಕ್ಕಿದೆ ಆದರೆ ತಿರಸ್ಕರಿಸಿದೆ
ಇಲ್ಲಿಗೆ ವಿದಾಯ ಹೇಳಿ ಬರಬೇಕೆಂದಿರುವೆ ಭಾರತಕ್ಕೆ
ಆಗ ನಿಮಗೆ ನಿಮ್ಮ ಮಗ, ನನಗೆ ನನ್ನ ಮಗ ಸಿಗುತ್ತಾನೆ;
ಆ ಹಿರಿಯರನ್ನು ನೋಡಬೇಕು ತಿರುಪತಿಯಲ್ಲಿ ಮತ್ತೆ!'

**ಕವಿ ಪರಿಚಯ**

ಡಾ. ನಾರಾಯಣ ಭಟ್ಟ ಮೊಗಸಾಲೆ (ಡಾ. ನಾ. ಮೊಗಸಾಲೆ) ಇವರು ಕಾಸರಗೋಡಿನ ಕೋಳ್ಯೂರಿನಲ್ಲಿ ೧೯೪೪ ರಲ್ಲಿ ಜನಿಸಿದರು. ಕಲಿತದ್ದು ಉಡುಪಿಯ ಆಯುರ್ವೇದ ಕಾಲೇಜಿನಲ್ಲಿ. ಅನಂತರ ವೈದ್ಯಕೀಯ ವೃತ್ತಿಜೀವನ ಆರಂಭಿಸಿದ್ದು ಕಾರ್ಕಳ ತಾಲೂಕಿನ ಕುಗ್ರಾಮ ಕಾಂತಾವರದಲ್ಲಿ. ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಾಳಿನ ಹುಡುಕಾಟಕ್ಕೆ ಸಾಹಿತ್ಯ ಕ್ಷೇತ್ರ ಸರಿ ಎಂದು ನಂಬಿದವರು. ಇವರ ಕವನ ಸಂಕಲನಗಳು - ವರ್ತಮಾನದ ಮುಖಗಳು, ಪಲ್ಲವಿ, ಮೊಗಸಾಲೆಯ ನೆನಪುಗಳು, ಪ್ರಭವ, ಸ್ವಂತಕ್ಕೆ ಸ್ವಂತಾವತಾರ, ನೆಲದ ನೆರಳು, ಮಣ್ಣಿನ ಮಕ್ಕಳು, ಅನಂತ, ಕನಸಿನ ಬಳ್ಳಿ, ನನ್ನದಲ್ಲದ್ದು, ಪಲ್ಲಟ, ಹದ್ದು, ಪ್ರಕೃತಿ, ನೆಲಮುಗಿಲುಗಳ ಮಧ್ಯೆ, ದಿಗಂತ, ದೃಷ್ಟಿ, ಉಪ್ಪು, ತೊಟ್ಟಿ, ಪಂಥ ಮುಂತಾದವು ಕಾದಂಬರಿಗಳು. ವೈದ್ಯಕೀಯ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಕೈಯಲ್ಲಿ ನಿಮ್ಮ ಆರೋಗ್ಯ ಪುಸ್ತಕ ಬರೆದಿದ್ದಾರೆ. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಮೂಡಬಿದಿರೆಯ ವರ್ಧಮಾನ ಪ್ರಶಸ್ತಿ ಪೀಠದ ನಿರ್ದೇಶಕರು ಹಾಗೂ ಕಾಂತಾವರ ಕನ್ನಡ ಸಂಘದ ಅಧ್ಯಕ್ಷರು. ಇವರ 'ದರ್ಶನ' ಕಥನ ಕವನವನ್ನು 'ದಕ್ಷಿಣ ಕನ್ನಡದ ಶತಮಾನದ ಕಾವ್ಯ'ದಿಂದ (ಸಂ: ಬಿ. ಜನಾರ್ದನ ಭಟ್) ಆಯ್ದುಕೊಂಡಿದೆ.

**ಆಶಯ**

*ಇಂದಿನ ವಿದ್ಯಾವಂತ ಯುವಜನತೆ ಧನಾರ್ಜನೆಯ ನೆಪವೊಡ್ಡಿ ವಿದೇಶೀ ಸಂಸ್ಕೃತಿಗೆ ಬಲಿಪಶುವಾಗುತ್ತಿದ್ದಾರೆ. ಪ್ರತಿಭಾ ಪಲಾಯನದ ಕೂಗು ಎಲ್ಲೆಡೆ ಕೇಳಿಬರುತ್ತಿದೆ. ಅಂತಹ ಪರಿಸ್ಥಿತಿಯಲ್ಲಿ ವಿದೇಶೀ ಸಂಸ್ಕೃತಿಯನ್ನು ಧಿಕ್ಕರಿಸಿ ಮರಳಿ ಮಣ್ಣಿಗೆ ಬರಲು ನಿರ್ಧರಿಸಿದ ಯುವಕನೊಬ್ಬನ ದೃಢನಿಲುವನ್ನು 'ದರ್ಶನ' ಕವನ ಪ್ರತಿಪಾದಿಸುತ್ತದೆ. ತಲೆಮಾರುಗಳನ್ನು ಭಾರತೀಯ ದರ್ಶನದ ಮೂಲಸೂತ್ರದಲ್ಲಿ ಬೆಸೆಯುವ ಪ್ರಯತ್ನ ಇಲ್ಲಿದೆ.*

**ಶಬ್ದಾರ್ಥ :**

ಸರತಿ - ಪಾಳಿ; ಇಹಪರ - ಈಲೋಕ ಪರಲೋಕ; ತುಡಿ - ತವಕಿಸು; ತವಕ - ಆತುರ; ಪ್ರವರ - ವಂಶಾವಳಿ; ಆಹ್ವಾನಿಸು - ಕರೆ; ಸತ್ಕಾರ - ಉಪಚಾರ; ತೀರಿಹೋಗು - ಗತಿಸು; ಮರಳು - ಹಿಂದಿರುಗು; ರವಷ್ಟು - ಕಿಂಚಿತ್ತು; ಅಪ್ಪಿಕೊಳ್ಳು - ಆಲಂಗಿಸು; ರೋಮಾಂಚನ - ಪುಳಕ.

**ಟಿಪ್ಪಣಿ :**

**ಸಾರ್ಥಕ್ಯ ಭಾವ** - ಧನ್ಯತಾ ಭಾವ.

**ಹಸಿರು ಕಾರ್ಡು** - ಅಮೇರಿಕದಲ್ಲಿ ಉಳಿದುಕೊಳ್ಳಬಯಸುವ ಅನಿವಾಸಿಗಳು ಅಲ್ಲಿನ ಸರಕಾರದಿಂದ ಪಡೆಯಬೇಕಾದ ಪರವಾನಗಿ ಪತ್ರ.

**ನಮ್ಮಿಬ್ಬರ ನಡುವೆ ಮಗನೇ ಗಾಳಿಯಾದ** - ಕವಿಗಳ ಹಾಗೂ ಆ ಹಿರಿಯರ ನಡುವೆ ಅಮೇರಿಕಾದಿಂದ ಬಂದ ಮಗ ಸಂಬಂಧದ ಸೇತುವೆಯಾದ.

## ಅಭ್ಯಾಸ

**ಪ್ರಶ್ನೆಗಳು :**

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಗಂಡ ಹೆಂಡತಿ ಮಕ್ಕಳು ಹೋದುದೆಲ್ಲಿಗೆ?

೨. ಸರತಿಯಲ್ಲಿ ನಿಂತಿದ್ದಾಗ ಕವಿಗಳನ್ನೇ ನೋಡುತ್ತಿದ್ದವರು ಯಾರು?

೩. ಆ ಹಿರಿಯರು ಕವಿಗಳನ್ನು ಎಲ್ಲಿಗೆ ಆಹ್ವಾನಿಸಿದರು?

೪. ಆ ಹಿರಿಯರು ಯಾವುದಕ್ಕೆ ಕವಿಗಳ ಒಪ್ಪಿಗೆ ಕೇಳಿದರು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಕವಿಯನ್ನು ನೋಡಿದ ಹಿರಿಯರಲ್ಲಾದ ಬದಲಾವಣೆ ಏನು?

೨. ಆ ಹಿರಿಯರು 'ಅನಬೇಡಿ ಇಲ್ಲ!' ಅನ್ನಲು ಕಾರಣವೇನು?

೩. ಕವಿಪುತ್ರನು ಭಾರತಕ್ಕೆ ಹಿಂದಿರುಗಲು ತೀರ್ಮಾನಿಸಿದ್ದು ಏಕೆ?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಹಿರಿಯರು ಕವಿಗಳನ್ನು ಸಂಭ್ರಮದಿಂದ ಸ್ವಾಗತಿಸಿದ್ದು ಹೇಗೆ?

೨. ಇಬ್ಬರೂ ಬೀಳ್ಕೊಡುವಾಗ ಆದ ಅನುಭವವನ್ನು ಕವಿ ಹೇಗೆ ವ್ಯಕ್ತಪಡಿಸಿದ್ದಾರೆ?

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.

೧. ಕೋಣೆಯನು ಮನೆಯೆಂದೆ ತಿಳಿದು ಬನ್ನಿ

೨. ನಿಮ್ಮಂತಹ ಮಗನಿದ್ದ ಅವನೂ ಕವಿ!

೩. ನಿನ್ನೆ ನನಗಿಲ್ಲಿ ಹಸಿರು ಕಾರ್ಡು ಸಿಕ್ಕಿದೆ.

## ಭಾಷಾಭ್ಯಾಸ

ಅ. ಕೆಳಗಿನ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ.

ಮೈಯೆಲ್ಲ ಕಣ್ಣಾಗಿ, ಬೆಟ್ಟವಾಗು, ಇಹಪರವ ಮೀರಿ.

ಆ. ಕೆಳಗಿನ ಪದಗಳ ನಾನಾರ್ಥವನ್ನು ಬರೆಯಿರಿ.

ಕಾದು, ಸರಿ, ತೀರಿಹೋಗು, ಮರಳು, ಸಾರು

ಇ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಮಗನೊತ್ತಾಯ, ಮಾತಾಗಿ, ನಾನವರ, ಮಗನಿದ್ದ, ಬರಬೇಕೆಂದಿರುವೆ.

ಈ. ಈ ಕೆಳಗಿನ ಪದಗಳನ್ನು ಸರಿಪಡಿಸಿ ಬರೆಯಿರಿ.

ದರುಷನ, ಅದಿನ್ನೈದು, ವ್ಯತಾಸ, ಮೇಶ್ಟ್ರು, ವಿಧಾಯ, ತಿರುಪಥಿ

ಉ. ಈ ಕೆಳಗಿನ ಕ್ರಿಯಾಪದಗಳ ನಿಷೇಧ ರೂಪ ಬರೆಯಿರಿ.

| ಮಾದರಿ: ಹೋಗು - ಹೋಗನು |
|---|

ಕರೆ, ನೋಡು, ಕರಗು.

ಊ. ಈ ಕೆಳಗಿನ ಸಾಮಾನ್ಯ ವಾಕ್ಯಗಳನ್ನು ಪ್ರಶ್ನಾರ್ಥಕ ವಾಕ್ಯಗಳನ್ನಾಗಿ ಬರೆಯಿರಿ.

೧. ಹಿರಿಯರೊಬ್ಬರು ನನ್ನ ನೋಡುತ್ತಿದ್ದರು.

೨. ಇಬ್ಬರಿಗೂ ಮಾತಾಗಬೇಕೆಂಬ ತವಕ.

## ಚಟುವಟಿಕೆ

೧. ಮಾಸ್ತಿ, ಸು.ರಂ. ಎಕ್ಕುಂಡಿ ಮೊದಲಾದ ಕವಿಗಳ ಕಥನಕವನಗಳನ್ನು ಸಂಗ್ರಹಿಸಿ ಓದಿರಿ.

೨. ವಿದೇಶದಲ್ಲಿರುವ ಭಾರತೀಯರು ತಾಯ್ನಾಡಿಗೆ ಬಂದಾಗ ಅವರನ್ನು ಭೇಟಿ ಮಾಡಿರಿ.

೩. ಪೂರಕ ಓದು:

ನನ್ನ ಮೇಜಿನ ಮೇಲೆ ಗಾಜಿನ ಬಾತುಕೋಳಿ :
ತೆರೆದ ಬಾಯಿ, ಬಿಚ್ಚಿದ ರೆಕ್ಕೆ, ಕಪ್ಪುಗುಲಗಂಜಿ ಕಣ್ಣು.
ಅಗಲ ಚುಂಚದ ಅಂಚು ಹಳದಿ,
ರೆಕ್ಕೆಗಳ ಬಣ್ಣ ಕಂಚು ಕಬ್ಬಿಣ ತಾಮ್ರ ಕಲಸಿಟ್ಟ ಹಾಗೆ.
ಮೈಯೆಲ್ಲ ಥರ್ಮಾಸಿನೊಳಗಿರುವ ಪಾದರಸ ಮೆರುಗು.

ಎಷ್ಟೋ ದಿವಸ ಹಾಗೆ ಕುಳಿತಿತ್ತು ಈ ಬಾತು,
ಬರುಬರುತ್ತ ಪಾದರಸ ಅಲ್ಲಲ್ಲಿ ಅಳಿಸಿತ್ತು.
ಬೋರಲಾಗುತ್ತಿದ್ದ ಮಗಳ ಕೈಸಿಕ್ಕಿ ರೆಕ್ಕೆ ಮುರಿದಿತ್ತು.

ಈಗ ನೆನಪಿನ ಮೇಜಿನ ಮೇಲೆ ಗಾಜಿನ ಬಾತುಕೋಳಿ
ಬಾಯಗಲ ಬಿಟ್ಟು ಕುಳಿತಿದೆ, ಮನೆಯಲ್ಲಿ ಅದರ ಸುಳಿವಿಲ್ಲ.
ಲಂಗ ಹಾಕುತ್ತಿರುವ ನನ್ನ ಮಗಳಿಗೆ ಈಗ ಅದರ ನೆನಪಿಲ್ಲ.

- ಸುಮತೀಂದ್ರ ನಾಡಿಗ

# ೧೭. ಮಾನವ ಜನ್ಮ ದೊಡ್ಡದು

ಪುರಂದರದಾಸರು

**ಆಶಯ**

ದಾಸಸಾಹಿತ್ಯ ಕನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ಒಂದು. ಕನ್ನಡ ಸಾಹಿತ್ಯಕ್ಕೆ ಶ್ರೀಮಂತಿಕೆಯನ್ನೊದಗಿಸುವುದರ ಜೊತೆಗೆ ಸಾಹಿತ್ಯಕ, ಸಾಂಸ್ಕೃತಿಕ ಮೌಲ್ಯಗಳನ್ನು ಸೃಷ್ಟಿಸಿದೆ. ಈ ಸಾಹಿತ್ಯ ಕೇವಲ ವ್ಯಕ್ತಿ ಚಿಂತನದ ಅಭಿಪ್ರಾಯವಾಗಿರದೆ ಸಾಮೂಹಿಕ ಚಿಂತನದ ಅಭಿವ್ಯಕ್ತಿಯಾಗಿದೆ. ಇವರು ಬದುಕಿನ ತಿರುಳನ್ನೇ ಸಂಗೀತದಲ್ಲಿ ಪೋಣಿಸಿ ಮನೆಮನೆಗೆ ಮುಟ್ಟಿಸಿದ್ದಾರೆ. ಜನಸಾಮಾನ್ಯರ ಸರಳ-ಸುಂದರ ಭಾಷೆಯಲ್ಲಿ ಸಾಹಿತ್ಯ ಮತ್ತು ಸಂಗೀತದ ಮಾಧುರ್ಯವನ್ನು ತುಂಬಿಕೊಟ್ಟಿದ್ದಾರೆ. ಆದ್ದರಿಂದಲೇ ಇವರು ಕೇವಲ ಚರಿತ್ರೆಯ ವ್ಯಕ್ತಿಗಳಾಗಿ ಉಳಿಯದೆ ಇಂದಿಗೂ ಜನಮನದಲ್ಲಿ ಅಚ್ಚಳಿಯದೆ ನಿಂತಿದ್ದಾರೆ.

ಮಾನವ ಜನ್ಮ ದೊಡ್ಡದು - ಇದ
ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ ||ಪ||

ಕಣ್ಣು ಕೈಕಾಲ್‌ಕಿವಿ ನಾಲಿಗೆ ಇರಲಿಕ್ಕೆ
ಮಣ್ಣು ಮುಕ್ಕಿ ಮರುಳರಾಗುವರೆ
ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ ||

ಕಾಲನ ದೂತರು ಕಾಲ್ಪಿಡಿದೆಳೆದಾಗ
ತಾಳು ತಾಳೆಂದರೆ ತಾಳುವರೆ
ದಾಳಿ ಬಾರದ ಮುನ್ನ ಧರ್ಮವ ಗಳಿಸಿರೋ
ಸುಳ್ಳು ಸಂಸಾರ ಸುಳಿಗೆ ಸಿಕ್ಕಲು ಬೇಡಿ ||

ಏನು ಕಾರಣ ಯದುಪತಿಯನು ಮರೆತಿರಿ
ಧನಧಾನ್ಯ ಸತಿಸುತರು ಕಾಯುವರೆ
ಇನ್ನಾದರೂ ಏಕೋಭಾವದಿ ಭಜಿಸಿರೋ
ಚನ್ನ ಶ್ರೀಪುರಂದರ ವಿಠಲರಾಯನ್ನ ||

**ಕವಿ ಪರಿಚಯ**

ಪುರಂದರದಾಸರು ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಬಾಳಿದವರು. ಶ್ರೀಮಂತರಾಗಿದ್ದ ಪುರಂದರದಾಸರು ಕಾರಣಾಂತರದಿಂದ ವೈರಾಗ್ಯವನ್ನು ತಾಳಿ ಹರಿದಾಸರಾದರೆಂಬ ಪ್ರತೀತಿಯಿದೆ. ಇವರ ಮೊದಲಿನ ಹೆಸರು ಶ್ರೀನಿವಾಸ ನಾಯಕ. ಇವರ ತಂದೆ ವರದಪ್ಪನಾಯಕ. ತಾಯಿ ಲಕ್ಷ್ಮೀದೇವಿ. ಹೆಂಡತಿ ಸರಸ್ವತಿ ಬಾಯಿಯೆಂದು ತಿಳಿದುಬರುತ್ತದೆ.

ಪುರಂದರದಾಸರು ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ. ಇವರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆಯುತ್ತಾರೆ. 'ದಾಸರೆಂದರೆ ಪುರಂದರದಾಸರಯ್ಯ' ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದಲೇ ಹೊಗಳಿಸಿಕೊಂಡ ಶ್ರೇಷ್ಠ ಕೀರ್ತನಕಾರರು.

ಪ್ರಸ್ತುತ ಕೀರ್ತನೆಯನ್ನು ಹರಿದಾಸರ ಜನಪ್ರಿಯ ಹಾಡುಗಳು ಕೃತಿಯಿಂದ ಆರಿಸಲಾಗಿದೆ.

**ಆಶಯ**

*ಪುರಂದರದಾಸರು ಸಮಾಜದ ನಡೆ-ನುಡಿಗಳನ್ನು ತಮ್ಮ ಕೀರ್ತನೆಗಳ ಮೂಲಕ ತಿದ್ದಲು ಪ್ರಯತ್ನಿಸಿದ್ದಾರೆ. ಮಾನವರಾಗಿ ಹುಟ್ಟಿ ಬಂದವರು ಮಾನವನಂತೆ ಬಾಳಿ ಜೀವನದ ಆದರ್ಶವನ್ನು ಸಾಧಿಸಬೇಕೆಂಬುದು ಪುರಂದರದಾಸರ ಅಪೇಕ್ಷೆ. ಹೆಣ್ಣು ಮಣ್ಣಿನ ನಿಮಿತ್ತವಾಗಿ ಹರಿಯನ್ನೇ ಮರೆಯುವ ಮೂರ್ಖನಾಗಬೇಡ, ಬದುಕು ಬರಡಾಗುವ ಮುನ್ನ ಪುಣ್ಯ ಸಂಪಾದಿಸು, ಸಂಸಾರದಲ್ಲಿ ಬಿದ್ದು ಒದ್ದಾಡಬೇಡ, ಮೌಢ್ಯಾಚರಣೆಗಳಿಂದ ಜೀವನವನ್ನು ವ್ಯರ್ಥವಾಗಿ ಹಾಳು ಮಾಡಿಕೊಳ್ಳಬೇಡ, ಎಂಬಿತ್ಯಾದಿಯಾಗಿ ಪುರಂದರದಾಸರು ಮಾನವ ಸಮುದಾಯಕ್ಕೆ ಸಂದೇಶ ನೀಡಿದ್ದಾರೆ.*

**ಶಬ್ದಾರ್ಥ :**

ಹಾನಿ - ನಾಶ; ಮಣ್ಣುಮುಕ್ಕು - ಸೋತು ಸುಣ್ಣವಾಗು; ಖೋಡಿ - ದುರುಳತನ, ಮೋಸ; ಕಾಲ - ಯಮ; ದೂತರು - ಕಿಂಕರರು; ಸುಳಿ - ಚಕ್ರಾಕಾರವಾಗಿ ಸುತ್ತು; ಭಜಿಸು - ಪೂಜಿಸು.

## ಅಭ್ಯಾಸ

**ಪ್ರಶ್ನೆಗಳು :**

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ದಾಸರು ಯಾವ ಜನ್ಮ ದೊಡ್ಡದೆಂದು ಹೇಳಿದ್ದಾರೆ?

೨. ಹರಿಯ ನಾಮಾಮೃತ ಏಕೆ ಉಣ್ಣುವುದಿಲ್ಲ?

೩. ಹೆಣ್ಣು ಮಣ್ಣಿಗಾಗಿ ಜನರು ಏನನ್ನು ಬಿಡುತ್ತಾರೆ?

೪. ಸತಿಸುತರು ಯಾಕೆ ನಮ್ಮನ್ನು ಕಾಯುವುದಿಲ್ಲ?

೫. ಏಕೋಭಾವದಿಂದ ಯಾರನ್ನು ಭಜಿಸಬೇಕು?

ಆ. ಕೆಳಗಿನ ಪ್ರಶ್ನೆಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

ದಾಸರು ಮನುಷ್ಯರಿಗೆ ಏನೆಂದು ಎಚ್ಚರಿಕೆ ನೀಡುತ್ತಾರೆ?

ಇ. ಕೆಳಗಿನ ಪ್ರಶ್ನೆಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

'ಮಾನವ ಜನ್ಮ ದೊಡ್ಡದು' ಈ ಕೀರ್ತನೆಯ ಭಾವವನ್ನು ಸಂಗ್ರಹವಾಗಿ ಬರೆಯಿರಿ.

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ತಿಳಿಸಿರಿ.

೧. ದಾಳಿ ಬಾರದ ಮುನ್ನ ಧರ್ಮವ ಗಳಿಸಿರೊ

೨. ಮಣ್ಣು ಮುಕ್ಕಿ ಮರುಳಾಗುವರೆ

೩. ಏನು ಕಾರಣ ಯದುಪತಿಯನು ಮರೆತಿರಿ

## ಭಾಷಾಭ್ಯಾಸ

ಅ. ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಕಾಲ, ಧರ್ಮ, ಕಾರಣ, ದೊಡ್ಡದು

ಆ. ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಹರಿ, ಸತಿ, ಸುತ, ದೂತ

ಇ. ಇವುಗಳಿಗೆ ತದ್ಭವ ಪದಗಳನ್ನು ಬರೆಯಿರಿ.

ಜನ್ಮ, ಧರ್ಮ, ಶ್ರೀ, ರಾಯ

ಈ. 'ಹರಿ', 'ಮರೆ' - ಈ ಪದಗಳನ್ನು ನಾಮಪದ-ಕ್ರಿಯಾಪದಗಳ ಅರ್ಥ ಬರುವಂತೆ ವಾಕ್ಯದಲ್ಲಿ ಪ್ರಯೋಗಿಸಿರಿ.

ಉ. ಈ ಪದಗಳನ್ನು ಬಿಡಿಸಿ ಬರೆಯಿರಿ.

ನಾಮಾಮೃತ, ಇನ್ನಾದರೂ, ಮರುಳಾಗು, ಕಾಲ್ಪಿಡಿದೆಳೆ

## ಚಟುವಟಿಕೆ

೧. ಈ ಕೀರ್ತನೆಯನ್ನು ಕಂಠಪಾಠ ಮಾಡಿರಿ.

೨. ಪುರಂದರದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಓದಿರಿ.

೩. ಶಾಲಾ ಸಮಾರಂಭಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಸಾಮೂಹಿಕವಾಗಿ ಹಾಡಿರಿ.

## ೧೮. ಕಲಿಗಳ ದೇವನೊಪ್ಪಿದನು

ರತ್ನಾಕರವರ್ಣಿ

**ಪ್ರವೇಶ**

ಕನ್ನಡ ಸಾಹಿತ್ಯವನ್ನು ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಘಟ್ಟಗಳೆಂದು ಪ್ರಮುಖವಾಗಿ ವಿಂಗಡಿಸಲಾಗಿದೆ. ಹಳೆಗನ್ನಡವು ಕ್ರಿ.ಶ. ೯ರಿಂದ ೧೨ನೆಯ ಶತಮಾನದವರೆಗೆ ಚಂಪೂ ಶೈಲಿಯಲ್ಲಿ ವಿಜೃಂಭಿಸಿತು. ೧೨ನೆಯ ಶತಮಾನದಲ್ಲಿ ವಚನಸಾಹಿತ್ಯ ಹುಟ್ಟಿಕೊಂಡಿತು. ಕನ್ನಡ ಸಾಹಿತ್ಯ ಹೊಸ ಹೊಸ ಛಂದೋರೂಪಗಳನ್ನು ಒಳಗೊಂಡು ನಾವೀನ್ಯವನ್ನು ಪಡೆಯಿತು. ಏಳೆ ತ್ರಿಪದಿ, ಷಟ್ಪದಿ, ಸಾಂಗತ್ಯ ಮುಂತಾದ ದೇಸಿ ಮಟ್ಟುಗಳು ಹೆಚ್ಚು ಪ್ರಚಾರಕ್ಕೆ ಬಂದವು. ಸಾಂಗತ್ಯದಲ್ಲಿ ಅನೇಕ ಕೃತಿಗಳು ಹೊರಬಂದರೂ ರತ್ನಾಕರವರ್ಣಿಯ 'ಭರತೇಶ ವೈಭವ' ಸಾಂಗತ್ಯ ಕೃತಿಗಳಲ್ಲೇ ಉತ್ತುಂಗ ಮಟ್ಟವನ್ನು ಮುಟ್ಟಿ ಜನಪ್ರಿಯವಾದ ಕಾವ್ಯವಾಯಿತು.

ಭರತ ಭೂತಳಕೆ ಸಿಂಗಾರವಾದಯೋಧ್ಯಾ
ಪುರದೊಳು ಮೂಲೋಕ ಪೊಗಳೆ
ಭರತ ಚಕ್ರೇಶ್ವರ ಸುಖ ಬಾಳುತಿರ್ದನಾ
ಸಿರಿಯನಿನ್ನೇನ ಬಣ್ಣಿಪೆನು ||

ಪುರು ಪರಮೇಶನ ಹಿರಿಯ ಕುಮಾರನು
ನರಲೋಕಕೊಬ್ಬನೆ ರಾಯ
ಸ್ಮರಿಸಿ ಕಣ್ಣಿಟ್ಟರೆ ಕ್ಷಣಕೆ ಮುಕ್ತಿಯ ಕಾಂಬ
ಭರತ ಚಕ್ರಿಯ ಹೇಳಲಳವೇ ||

ಧರೆಯೊಳಗೆಲ್ಲವ ಸುಟ್ಟಲ್ಲಿ ಭಸ್ಮಕ
ರ್ಪುರವ ಸುಟ್ಟರೆ ಭಸ್ಮವುಂಟೆ
ನರತತಿಗಾಹಾರ ನೀಹಾರವುಂಟೆಮ್ಮ
ಭರತೇಶಗಿಲ್ಲ ನೀಹಾರಾ ||

ನವರತ್ನ ಹೇಮನಿರ್ಮಿತವೆನಿಪಾಸ್ಥಾನ
ಭವನದೊಳಾರಾಜರತ್ನ
ಛವಿವಡೆದೆಸೆದನು ರತ್ನಪುಷ್ಪಕದೊಳು
ದಿವಿಜೇಂದ್ರನೊಪ್ಪುವಂದದೊಳು ||

ಉದಯಗಿರಿಯ ಮೇಲೆ ಮೆರೆವ ಭಾನುವಿಗೆ ಮ
ತ್ತಿದಿರಾದ ಪ್ರತಿಸೂರ್ಯನಂತೆ
ಪದುಳದುತ್ತುಂಗ ಸಿಂಹಾಸನವೇರಿ ದೇ
ಹದ ಕಾಂತಿ ಮೆರೆಯೆ ಪ್ರಜ್ವಲಿಸಿ ||

ಆವ ಬಿಂಕವೊ ಎಡಗಾಲ ಗದ್ದುಗೆಯ ಮೇ
ಲೋವಿ ನುಡಿದು ಮತ್ತೆ ಕೆಳಗೆ
ಹಾವುಗೆಯೊಳು ಪೆಂಡೆಯದ ಬಲಗಾಲೂರಿ
ಠೀವಿಯೊಳೆಸೆದನಾ ರಾಯ ||

ಬಲಗೈಯೊಳಾಂತ ಹೊನ್ನೊರೆಯ ಕಠಾರಿಯ
ನೆಲಕೂರಿ ಮತ್ತೆಡಗೈಯಾ
ಮಲಗಿನ ಮೇಲೂರಿ ವೀರಸಿರಿಯನಾಳ್ವ
ಕಲಿಗಳ ದೇವನೊಪ್ಪಿದನು ||

**ಕವಿ ಪರಿಚಯ**

ರತ್ನಾಕರವರ್ಣಿಯು ಕ್ರಿ.ಶ. ಸುಮಾರು ೧೫೩೨ರಲ್ಲಿ ಜನಿಸಿದನು. ಶೃಂಗಾರ ಕವಿಯೆಂದು ಹೆಸರು ಗಳಿಸಿದ್ದಾನೆ. ಈತನ ಸ್ಥಳ ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ. ಇದನ್ನು ಹಿಂದೆ ವೇಣುಪುರವೆಂದು ಕರೆಯುತ್ತಿದ್ದರು. ಮೂಡುಬಿದಿರೆಯ ಸೂರ್ಯವಂಶದ ಅರಸು ಮನೆತನಕ್ಕೆ ಸೇರಿದ ದೇವರಾಜನ ಮಗನೆ ರತ್ನಾಕರ.

ತ್ರಿಲೋಕಶತಕ, ರತ್ನಾಕರಶತಕ, ಅಪರಾಜಿತ ಶತಕ - ಎಂಬ ಮೂರು ಶತಕಗಳನ್ನು ಹಾಗೂ ಭರತೇಶ ವೈಭವ ಎಂಬ ಸಾಂಗತ್ಯ ಗ್ರಂಥವನ್ನು ರಚಿಸಿದ್ದಾನೆ.

ಈ ಕಾವ್ಯಭಾಗವನ್ನು ಭರತೇಶ ವೈಭವದಿಂದ (ಸಂ.: ಜಿ. ಬ್ರಹ್ಮಪ್ಪ) ಆರಿಸಲಾಗಿದೆ.

**ಆಶಯ**

*ಭರತೇಶ ವೈಭವ ಒಂದು ಶೃಂಗಾರ ಕಾವ್ಯ. ಕನ್ನಡದ ಕಾವ್ಯಗಳಲ್ಲಿಯೇ ಇಂತಹ ಕಾವ್ಯ ಅಪೂರ್ವ. ರತ್ನಾಕರವರ್ಣಿ ತನ್ನ ಕಾವ್ಯ ನಾಯಕನಾದ ಭರತನನ್ನು ಅದ್ಭುತವಾಗಿ ಚಿತ್ರಿಸಿದ್ದಾನೆ. ತ್ಯಾಗ ಭೋಗಗಳ ಸಮನ್ವಯವೇ ಇವನ ಕಾವ್ಯದ ಹೂರಣವಾಗಿದೆ. ಭರತಚಕ್ರವರ್ತಿಯ ವ್ಯಕ್ತಿತ್ವದ ಸುಂದರ ಚಿತ್ರಣವನ್ನು ಈ ಭಾಗ ಒಳಗೊಂಡಿದೆ.*

**ಶಬ್ದಾರ್ಥ :**

ಸಿಂಗಾರ - ಶೃಂಗಾರ; ಪುರ - ಪಟ್ಟಣ; ಪೊಗಳು - ಹೊಗಳು; ಬಣ್ಣಿಸು - ವರ್ಣಿಸು; ಸಿರಿ - ಸಂಪತ್ತು; ಅಳವೆ - ಸಾಧ್ಯವೆ? ನೀಹಾರ - ಮಲ-ಮೂತ್ರ ವಿಸರ್ಜನೆ. ಹೇಮ - ಚಿನ್ನ; ಛವಿ - ಕಾಂತಿ; ಭಾನು - ಸೂರ್ಯ; ಪದುಳ - ಕ್ಷೇಮ;

ಉತ್ತುಂಗ - ಎತ್ತರವಾದ; ಬಿಂಕ - ಬೆಡಗು; ಹಾವುಗೆ - ಚಪ್ಪಲಿ, ಪಾದುಕೆ; ಪೆಂಡೆಯ - ಕಾಲಿಗೆ ಹಾಕಿಕೊಳ್ಳುವ ಕಡಗ; ಹೊನ್ನೊರೆ - ಚಿನ್ನದ ಒರೆ; ಮಲಗು (ನಾ.) - ದಿಂಬು.

## ಅಭ್ಯಾಸ

ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಭರತ ಭೂತಳಕ್ಕೆ ಸಿಂಗಾರವಾದದ್ದು ಯಾವುದು?

೨. ಭರತ ಕುಮಾರನು ಯಾರ ಮಗ?

೩. ಯಾರಿಗೆ ಆಹಾರ-ನೀಹಾರಗಳುಂಟು?

೪. ಭರತನ ಆಸ್ಥಾನವು ಯಾವುದರಿಂದ ನಿರ್ಮಿತವಾಗಿದೆ?

೫. ಸಿಂಹಾಸನವೇರಿದ ಭರತ ಹೇಗೆ ಕಾಣುತ್ತಿದ್ದನು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು / ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಭರತ ಚಕ್ರೇಶ್ವರನು ಹೇಗೆ ಸುಖವಾಗಿ ಬಾಳುತ್ತಿದ್ದನು?

೨. ಭರತೇಶನು ಇತರರಿಗಿಂತ ಭಿನ್ನವಾಗಿದ್ದ ಎಂಬುದನ್ನು ಕವಿ ವರ್ಣಿಸಿರುವ ಬಗೆ ಹೇಗೆ?

೩. ಕಲಿಗಳ ದೇವ ಭರತನು ಶೋಭಿಸಿದ ಪರಿಯನ್ನು ಕವಿ ಹೇಗೆ ವರ್ಣಿಸಿದ್ದಾನೆ?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಭರತ ಚಕ್ರಿಯು ರತ್ನ ಸಿಂಹಾಸನದಲ್ಲಿ ಶೋಭಿಸಿದ ಬಗೆಯನ್ನು ವಿವರಿಸಿರಿ.

೨. ಭರತೇಶನು ಸಭೆಯಲ್ಲಿ ಠೀವಿಯಿಂದ ಮೆರೆದ ಪರಿಯನ್ನು ವರ್ಣಿಸಿರಿ.

ಈ. ಕೆಳಗಿನ ವಾಕ್ಯಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.

೧. ನರಲೋಕಕೊಬ್ಬನೆ ರಾಯ.

೨. ಕರ್ಪೂರವ ಸುಟ್ಟರೆ ಭಸ್ಮವುಂಟೆ?

## ಭಾಷಾಭ್ಯಾಸ

ಅ. ಅಲಂಕಾರ ತಿಳಿಸಿ, ಅನ್ವಯಿಸಿರಿ.

ಉದಯಗಿರಿಯ ಮೇಲೆ ಮೆರೆವ ಭಾನುವಿಗೆ ಮತ್ತಿದಿರಾದ ಪ್ರತಿಸೂರ್ಯನಂತೆ

ಆ. ಈ ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.

ಕ್ಷಣ, ಒಪ್ಪು, ಉತ್ತುಂಗ, ಠೀವಿ

ಇ. ಇವುಗಳ ತತ್ಸಮ - ತದ್ಭವಗಳನ್ನು ಬರೆಯಿರಿ.

ಸಿಂಗಾರ, ಸಿರಿ, ಮುಕ್ತಿ, ಲೋಕ, ರತ್ನ, ಹಾವುಗೆ

ಈ. ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ.

ಸಿಂಗಾರವಾದ, ನರಲೋಕಕೊಬ್ಬನೆ, ಕಣ್ಣಿಟ್ಟರೆ, ಬಲಗಾಲೂರಿ

## ಛಂದಸ್ಸು

ಪದ್ಯರಚನಾ ಕ್ರಮವನ್ನು ತಿಳಿಸುವ ಶಾಸ್ತ್ರವೇ ಛಂದಶ್ಶಾಸ್ತ್ರ. ಇದರಲ್ಲಿ ಪ್ರಾಸ, ಯತಿ ಮತ್ತು ಗಣ ಎಂಬುದಾಗಿ ಮೂರು ವಿಭಾಗಗಳಿವೆ. ಗಣಗಳನ್ನು ಮಾತ್ರಾಗಣ, ಅಕ್ಷರಗಣ ಮತ್ತು ಅಂಶಗಣಗಳೆಂದು ವಿಂಗಡಿಸಲಾಗಿದೆ. ಇದರ ಬಗ್ಗೆ ಹಿಂದಿನ ತರಗತಿಯಲ್ಲಿ ತಿಳಿಸಲಾಗಿದೆ.

**ಮಾತ್ರಾಗಣ :** ಮಾತ್ರೆಗಳ ಆಧಾರದಿಂದ ವಿಂಗಡಿಸಲ್ಪಡುವ ಗಣಗಳನ್ನು ಮಾತ್ರಾಗಣವೆನ್ನುತ್ತಾರೆ.

**ಮಾತ್ರೆ :** ಅಕ್ಷರಗಳನ್ನು ಉಚ್ಚರಿಸಲು ತೆಗೆದುಕೊಳ್ಳುವ ಕಾಲವನ್ನು ಅಳೆಯುವ ಮಾನಕ್ಕೆ 'ಮಾತ್ರೆ' ಎಂದು ಹೆಸರು.

ಇದರಲ್ಲಿ ಒಂದು ಮಾತ್ರಾ ಕಾಲಕ್ಕೆ ಲಘು (U) ಎಂತಲೂ ಎರಡು ಮಾತ್ರಾ ಕಾಲಕ್ಕೆ ಗುರು (–) ಎಂತಲೂ ಕರೆಯುತ್ತಾರೆ.

### ಅಕ್ಷರವು ಗುರು ಎನಿಸುವ ಲಕ್ಷಣಗಳು

| | | |
|---|---|---|
| ೧. | ದೀರ್ಘಾಕ್ಷರ | – U<br>ಶಾಲೆ |
| ೨. | ಒತ್ತಕ್ಷರದ ಹಿಂದಿನ ಅಕ್ಷರ | – U U U<br>ಬಲ್ಲವರು |
| ೩. | ಅನುಸ್ವಾರ ವಿಸರ್ಗಗಳಿಂದ ಕೂಡಿದ ಅಕ್ಷರ | – U U – U<br>ಬಂದನು ದುಃಖ |
| ೪. | ವ್ಯಂಜನಾಕ್ಷರದಿಂದ ಕೂಡಿರುವ ಅಕ್ಷರ | U U —<br>ಮನದೊಳ್ |
| ೫. | ಐ ಮತ್ತು ಔ ಸಹಿತವಾದ ಅಕ್ಷರ | – U – U U<br>ಕೈಕೆ ಕೌತುಕ |

೬. ಷಟ್ಪದಿಯ ಮೂರು ಮತ್ತು ಆರನೆಯ ಪಾದದ ಕೊನೆಯ ಅಕ್ಷರ. (ಈ ಅಕ್ಷರವು 'ಗುರು' ಎನಿಸುವ ಯಾವ ಲಕ್ಷಣಗಳನ್ನು ಹೊಂದಿಲ್ಲದಿದ್ದರೂ 'ಗುರು' ಎಂದೇ ಪರಿಗಣಿಸಲ್ಪಡುತ್ತದೆ.)

ಮೇಲಿನ ಯಾವುದೇ ಲಕ್ಷಣಗಳನ್ನು ಹೊಂದಿಲ್ಲದ ಅಕ್ಷರಗಳನ್ನು 'ಲಘು' ಎಂದು ಪರಿಗಣಿಸಲಾಗುತ್ತದೆ.

ಮಾತ್ರಾಗಣದಲ್ಲಿ ಷಟ್ಪದಿ, ರಗಳೆ, ಕಂದಗಳೆಂಬ ಛಂದಸ್ಸುಗಳಿವೆ. ಇವುಗಳಿಗೆ ತಮ್ಮದೇ ಆದ ಪ್ರತ್ಯೇಕ ನಿಯಮಗಳಿವೆ.

### ಚಟುವಟಿಕೆ

೧. 'ಭರತೇಶ ವೈಭವ'ದ ಗದ್ಯಾನುವಾದವನ್ನು ಓದಿರಿ.

೨. ನಂಜುಂಡ ಕವಿಯ ಕುಮಾರರಾಮ ಸಾಂಗತ್ಯವನ್ನು ಓದಿರಿ.

## ಅನುಬಂಧ –೧

### ಗಾದೆಗಳು

೧. ಆಳಾಗಬಲ್ಲವನು ಅರಸಾಗಬಲ್ಲ

೨. ಬೆಳೆಯುವ ಪೈರು ಮೊಳಕೆಯಲ್ಲಿ

೩. ಹಾಸಿಗೆ ಇದ್ದಷ್ಟು ಕಾಲು ಚಾಚು

೪. ತುಂಬಿದ ಕೊಡ ತುಳುಕುವುದಿಲ್ಲ

೫. ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗದು

೬. ಕೈ ಕೆಸರಾದರೆ ಬಾಯಿ ಮೊಸರು

೭. ಕಾಸಿದ್ದರೆ ಕೈಲಾಸ

೮. ಬೆಳ್ಳಗಿರುವುದೆಲ್ಲ ಹಾಲಲ್ಲ

೯. ಮನಸ್ಸಿದ್ದರೆ ಮಾರ್ಗ

೧೦. ದೂರದ ಬೆಟ್ಟ ನುಣ್ಣಗೆ

೧೧. ಹಿತ್ತಲಗಿಡ ಮದ್ದಲ್ಲ

೧೨. ಅರ್ಥವಿಲ್ಲದ ಓದು ವ್ಯರ್ಥ

೧೩. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

೧೪. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?

೧೫. ಗಾಳಿ ಬಂದಾಗ ತೂರಿಕೋ

## ರಜೆಯ ಪತ್ರ

ದಿನಾಂಕ .....................

ವಿನಾಯಕ ಬಿ.
ಹತ್ತನೆ ತರಗತಿ,
ಶಾರದಾ ಪ್ರೌಢಶಾಲೆ
ಹೊನ್ನೂರು, ಉ.ಕ. ಜಿಲ್ಲೆ.

ಇವರಿಗೆ

ಮುಖ್ಯೋಪಾಧ್ಯಾಯರು
ಶಾರದಾ ಪ್ರೌಢಶಾಲೆ
ಹೊನ್ನೂರು.

ಮಾನ್ಯರೇ,

ವಿಷಯ : "ಮೂರು ದಿನಗಳ ರಜೆ ಕೋರಿ ಪತ್ರ"

..............................................................................

..............................................................................

..............................................................................

..............................................................................

..............................................................................

......................................................................

ವಂದನೆಗಳೊಂದಿಗೆ,

ತಮ್ಮ ವಿಧೇಯ ವಿದ್ಯಾರ್ಥಿ

(ವಿನಾಯಕ ಬಿ.)

## ಅನುಬಂಧ - ೩

### ತಂದೆಗೆ ಪತ್ರ

ದಿನಾಂಕ : .................

ಸುಭಾಷಿಣಿ
ಹತ್ತನೆಯ ತರಗತಿ
ನೃಪತುಂಗ ಪ್ರೌಢಶಾಲೆ
ಬೆಳಗೊಳ, ಹಾಸನ ಜಿಲ್ಲೆ.

ತೀರ್ಥರೂಪರವರಿಂದ ಬೇಡಿಕೊಳ್ಳುವ ಆಶೀರ್ವಾದಗಳು.

..................................................................................
..........................................................................................
..........................................................................................
..........................................................................................
..........................................................................................
........................................................................

ನಮಸ್ಕಾರಗಳೊಂದಿಗೆ,

ತಮ್ಮ ಪ್ರೀತಿಯ ಮಗಳು

(ಸುಭಾಷಿಣಿ)

ಅನುಬಂಧ – ೪

## ವ್ಯಾವಹಾರಿಕ ಪತ್ರ

ದಿನಾಂಕ :
ಸ್ಥಳ :

ಇವರಿಂದ

**ಕೀರ್ತಿಕುಮಾರ್,**
ನಂ. ೫೩, ಸಕ್ಕರೆಪುರ
ಧಾರವಾಡ.

ಇವರಿಗೆ

**ಜಿಲ್ಲಾಧಿಕಾರಿಗಳು,**
ಜಿಲ್ಲಾ ಕಛೇರಿ,
ಧಾರವಾಡ ನಗರ,
ಧಾರವಾಡ.

ಮಾನ್ಯರೇ,

ವಿಷಯ : **ಆರೋಗ್ಯಕೇಂದ್ರ ಆರಂಭಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಕೋರಿ ಪತ್ರ.**

...........................................................................................
...........................................................................................
...........................................................................................
...........................................................................................
...........................................................................................
...........................................................................

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

**(ಕೀರ್ತಿ ಕುಮಾರ್)**

## ಅನುಬಂಧ ೫

### ಪತ್ರದಲ್ಲಿ ಆರಂಭದ ಸಂಬೋಧನೆ

| | | |
|---|---|---|
| (೧) | ತಂದೆ | ತೀರ್ಥರೂಪ |
| (೨) | ತಾಯಿ | ಮಾತೃಶ್ರೀ |
| (೩) | ತಮ್ಮ / ತಂಗಿ | ಚಿರಂಜೀವಿ / ಚಿರಂಜೀವಿ ಸೌಭಾಗ್ಯವತಿ |
| (೪) | ಅಕ್ಕ / ಅಣ್ಣ | ಮಾತೃಶ್ರೀ ಸಮಾನರಾದ / ತೀರ್ಥರೂಪ ಸಮಾನರಾದ |
| (೫) | ಅಧಿಕಾರಿಗಳಿಗೆ | ಮಾನ್ಯರೇ |
| (೬) | ಗೆಳೆಯನಿಗೆ | ಪ್ರೀತಿಯ ಗೆಳೆಯ/ತಿ |

### ಗೌರವ ಸಂಬೋಧನೆ

| | | | |
|---|---|---|---|
| (೧) | ತಂದೆ-ತಾಯಿ - ಹಿರಿಯರಿಂದ | - | ಬೇಡುವ ಆಶೀರ್ವಾದಗಳು |
| (೨) | ಕಿರಿಯರಿಗೆ | - | ಆಶೀರ್ವಾದಗಳು |
| (೩) | ಗೆಳೆಯನಿಗೆ / ಗೆಳತಿಗೆ | - | ವಂದನೆಗಳು |
| (೪) | ಅಧಿಕಾರಿಗಳು | - | ವಂದನೆಗಳು |

## ಅನುಬಂಧ ೬

ಕೆಳಗಿನ ಪ್ರಬಂಧದ ವಿಷಯಗಳನ್ನು ಪರೀಕ್ಷಾ ದೃಷ್ಟಿಯಿಂದ ಅಭ್ಯಾಸ ಮಾಡುವುದು.

೧) ಪರಿಸರ ಮಾಲಿನ್ಯ : ಕಾರಣಗಳು - ಪರಿಣಾಮಗಳು - ಪರಿಹಾರಗಳು

೨) ದೂರದರ್ಶನ : ಉಪಯೋಗ - ದುಷ್ಪರಿಣಾಮ

೩) ವರದಕ್ಷಿಣೆ : ಒಂದು ಸಾಮಾಜಿಕ ಸಮಸ್ಯೆ - ಪರಿಹಾರ

೪) ಗ್ರಂಥಾಲಯ

೫) ಕ್ರೀಡೆಗಳು

೬) ಸುದ್ದಿ ಮಾಧ್ಯಮಗಳು : ವೃತ್ತಪತ್ರಿಕೆ, ರೇಡಿಯೋ

೭) ಅರಣ್ಯ ಸಂರಕ್ಷಣೆ

೮) ಜಲ ಸಂರಕ್ಷಣೆ

೯) ರಾಷ್ಟ್ರೀಯ ಹಬ್ಬಗಳು : ಶಿಕ್ಷಕರ ದಿನಾಚರಣೆ, ಗಾಂಧಿ ಜಯಂತಿ

೧೦) ಉದ್ಯಾನವನ

## ಅನುಬಂಧ-೭ ವಾರ್ಷಿಕ ಕಾರ್ಯಸೂಚಿ

| ತಿಂಗಳು | ಗದ್ಯ | ಪದ್ಯ | ವ್ಯಾಕರಣಾಂಶ ರಚನೆ ಇತ್ಯಾದಿ |
|---|---|---|---|
| ಜೂನ್ | ಆ ದೇಶವೇ ಅವರ ತಾಯಿ | ಕನ್ನಡ ಎನ್ನುವುದು ಜೀವನದಿ | ಹಿಂದಿನ ತರಗತಿಯಲ್ಲಿನ ವ್ಯಾಕರಣಾಂಶಗಳನ್ನು ಪುನರ್ ಮನನ ಮಾಡುವುದು |
| ಜುಲೈ | ಮತ್ತೆ ಬದುಕಿರಿ - ಲಕ್ಷ್ಮಣಿಗೆ ಪುರಾಣ | ಗಾಂಧಿ - ಭಾಗ್ಯದ ಬಳೆಗಾರ | ಲೇಖನ ಚಿಹ್ನೆಗಳು * ದ್ವಿರುಕ್ತಿ * ಲೋಪ, ಸವರ್ಣ, ಗುಣ ಸಂಧಿಗಳು |
| ಆಗಸ್ಟ್ | ಏರುವ ಬಾರ ಕೇದಾರ | ಯುಗಾದಿ ಬರುವುದು ನಮಗೆಂದೆ | ವಿಭಕ್ತಿ ಪ್ರತ್ಯಯಗಳು * ನಿಷೇಧ ರೂಪ ಪತ್ರಲೇಖನ * ಪ್ರಬಂಧ ಬರವಣಿಗೆ ರೂಪಕಾಲಂಕಾರ |
| ಸೆಪ್ಟೆಂಬರ್ | ಬಹುಮುಖ ರಂಗಪ್ರತಿಭೆಯ ಬಿ.ವಿ. ಕಾರಂತ | ಆಧುನಿಕ ವಚನಗಳು | ಹಿಂದಿನ ತರಗತಿಯಲ್ಲಿನ ವ್ಯಾಕರಣಾಂಶಗಳನ್ನು ಪುನರ್ ಮನನ ಮಾಡುವುದು |
| ಅಕ್ಟೋಬರ್ | | ಪುನರಾವರ್ತನೆ | ರಜಾ ದಿನಗಳನ್ನು ಹೊರತುಪಡಿಸಿ |
| ನವೆಂಬರ್ | ಕರ್ಮಯೋಗಿ | ಹಡಗದ ಚಂದ | ಧಾತುವನ್ನು ಗುರುತಿಸುವುದು.* ಕಾಲಗಳ ಪರಿಚಯ ಯಣ್ ಸಂಧಿ ನುಡಿಗಟ್ಟು* ಪತ್ರ, ಪ್ರಬಂಧ, ಗಾದೆ |
| ಡಿಸೆಂಬರ್ | ಉದ್ಯಾನರಾಣಿ-ಲಾಲ್‌ಬಾಗ್ | ದರ್ಶನ | ಲಿಂಗಗಳ ಪರಿಚಯ * ಅರ್ಥಗ್ರಹಣ ಪ್ರಶ್ನಾರ್ಥಕ |
| ಜನವರಿ | ಮಳೆಕೊಯ್ಲು | ಮಾನವ ಜನ್ಮ ದೊಡ್ಡದು | ವಾಕ್ಯರಚನೆ |
| ಫೆಬ್ರವರಿ | ಮಗುವಿನ ಕರೆ | ಕಲಿಗಳ ದೇವನೊಪ್ಪಿದನು | ತತ್ಸಮ ತದ್ಭವ * ಪ್ರಬಂಧ ಮುಂದುವರಿದ ಭಾಗ ವಾಕ್ಯ ಪ್ರಭೇದ * ಪತ್ರಲೇಖನ, ಗಾದೆ |
| ಮಾರ್ಚ್ | | ಪುನರಾವರ್ತನೆ | ವಾರ್ಷಿಕ ಪರೀಕ್ಷೆಗಳು |

# ಅರ್ಥಸಹಿತ ಪದಕೋಶ

## ಅ

ಅಂಕಿತ - ಗುರುತು
ಅಂಜು - ಹೆದರು
ಅಂತಃಸಾಕ್ಷಿ - ಮನಸ್ಸಾಕ್ಷಿ
ಅಗಳು - ಕಂದಕ, ಅನ್ನದ ಕಾಳು
ಅಡಗು - ಅವಿತುಕೊಳ್ಳು
ಅಧ್ಯಯನ - ಓದುವುದು
ಅಧ್ಯಾಪನ - ಓದಿಸುವುದು
ಅಧೋಲೋಕ - ಕೆಳಗಿನ ಲೋಕ
ಅನಿವಾಸಿ - ತಾಯಿನಾಡಿನಿಂದ ಹೊರಗೆ (ವಿದೇಶ) ವಾಸಿಸುವವರು
ಅನುಭೂತಿ - ಅನುಭವಕ್ಕೆ ಬಂದ ತಿಳುವಳಿಕೆ
ಅಪಸ್ವರ - ಕೆಟ್ಟಸ್ವರ
ಅಪೂರ್ವ - ಹಿಂದೆಂದೂ ಇಲ್ಲದ
ಅಪ್ಪಿಕೊಳ್ಳು - ಆಲಂಗಿಸು
ಅಭಿಮತ - ಅಭಿಪ್ರಾಯ
ಅಮಾತ್ಯ - ಮಂತ್ರಿ
ಅವಜ್ಞೆ - ಕಡೆಗಣಿಸು
ಅಪೂರ್ವ - ಹಿಂದೆಂದೂ ಇಲ್ಲದ
ಅಕ್ಷಯ - ನಾಶವಾಗದ

## ಆ

ಆಂತ - ಹೊಂದಿದ
ಆವೇಶ - ರೋಷ
ಆರ್ಭಟಿಸು - ಗಟ್ಟಿಯಾಗಿ ಕೂಗು
ಆಲಿಸು - ಗಮನವಿಟ್ಟು ಕೇಳು
ಆತ್ಮಪ್ರತ್ಯಯ - ಆತ್ಮವಿಶ್ವಾಸ

## ಇ

ಇಂಗಿಸು - ಹೀರುವಂತೆ ಮಾಡು
ಇಚ್ಛೆ - ಇಷ್ಟ
ಇಟ್ಟಣಿಸು - ಗುಂಪಾಗು
ಇಣಚಿ - ಅಳಿಲು
ಇನಿತು - ಸ್ವಲ್ಪ, ಇಷ್ಟು
ಇರುಳು - ರಾತ್ರಿ

## ಉ

ಉಕ್ಕಡ - ಕಾವಲ ಮನೆ, ಸುಂಕದ ಮನೆ
ಉಚ್ಚು - ಬಿಚ್ಚು, ಸಡಿಲಾಗು
ಉತ್ತುಂಗ - ಉನ್ನತ, ಎತ್ತರ
ಉದಯಾಸ್ತ - ಹುಟ್ಟು, ಮುಳುಗು
ಉಪ್ಪುಕಾಗದ - ಉಸುಕು ಕಾಗದ, ಸ್ಯಾಂಡ್ ಪೇಪರ್
ಉಲಿವು - ಶಬ್ದ, ಕೂಗು

## ಋ

ಋತ - ಸತ್ಯ

## ಏ

ಏಕಾಗ್ರಹ - ಒಂದೇ ಕಡೆಗೆ ಗುರಿಯಿರಿಸಿದ
ಏಕೋಭಾವ - ಒಂದೇ ಮನಸ್ಸು

## ಒ

ಒಡಲು - ದೇಹ
ಒಡ್ಡು - ಇದಿರಿಗೆ ಹಿಡಿ, ಇದಿರಿಸು
ಒರೆ - ಖಡ್ಗಹಾಕುವ ಚೀಲ, ಹೇಳು

## ಔ

ಔಚಿತ್ಯ - ಉಚಿತವೆನಿಸುವ, ಯೋಗ್ಯವಾದ
ಔನ್ನತ್ಯ - ಉನ್ನತವಾಗಿರುವ, ಎತ್ತರ

## ಕ

ಕಂಗೊಳಿಸು - ಶೋಭಿಸು
ಕವಳ - ತುತ್ತು, ತಾಂಬೂಲ
ಕಡಲತಡಿ - ಸಮುದ್ರದ ತೀರ
ಕದ - ಬಾಗಿಲು
ಕಲಿ - ವೀರ
ಕಾಂಬ - ಕಾಣುವ
ಕಾಡುಮಿಕ - ಕಾಡುಪ್ರಾಣಿ
ಕೀರಲುಧ್ವನಿ - ಕರ್ಕಶ ಕಂಠ
ಕುಣಿಕೆ - ಹಗ್ಗದ ಜೋಡಣೆ, ಗಂಟು
ಕುನ್ನಿ - ಮರಿ
ಕುರುಹು - ಸೂಕ್ಷ್ಮವಾದ ಗುರುತು
ಕೂಜಿಸು - ಕುಹು ಶಬ್ದ ಮಾಡು
ಕೊರಡು - ಮರದ ತುಂಡು
ಕೋಡು - ಕೊಂಬು
ಕೌಶಲ್ಯ - ಜಾಣತನ

## ಖ

ಖರೆ - ನಿಶ್ಚಯ, ಸಹಜ
ಖೋಡಿ - ನೀಚ, ಹೀನ

## ಗ

ಗುಂಡಿ - ತಗ್ಗು, ಗುಳಿ

## ಘ

ಘನ - ಗಟ್ಟಿಯಾದುದು

## ಚ

ಚಂದಾ - ವಂತಿಗೆ
ಚಿಕ್ಕೆ - ನಕ್ಷತ್ರ
ಚಿಗಿ - ನೆಗೆ
ಚೊಚ್ಚಲ - ಮೊದಲು, ಪ್ರಥಮ

## ಛ

ಛವಿ - ಕಾಂತಿ
ಛಾಯೆ - ನೆರಳು

## ಜ

ಜನ್ಮರಹಸ್ಯ - ಹುಟ್ಟಿನ ಗುಟ್ಟು
ಜಾಗೃತಿ - ಎಚ್ಚರ

## ಟ

ಟಿಪ್ಪಣಿ - ನೆನಪಿಗಾಗಿ ಬರೆದಿಡುವ ಪುಟ್ಟ ಬರಹ
ಟೂರ್(ಆಂಗ್ಲಪದ) - ಪ್ರವಾಸ

## ಠ

ಠೀವಿ - ಗತ್ತು, ಬಿನ್ನಾಣ

## ತ

ತಕ್ಕೆ - ಸ್ನೇಹ, ರಾಶಿ
ತುಡಿ - ತವಕಿಸು
ತಡೆ - ಒಡ್ಡು
ತಾರಸಿ - ಕಬ್ಬಿಣ, ಸಿಮೆಂಟಿನಿಂದ ನಿರ್ಮಿಸಿದ ಮೇಲ್ಛಾವಣಿ
ತೊಲೆ - ತಕ್ಕಡಿ, ಮರದ ಜಂತೆ
ತಳಿ - ಚಿಮುಕಿಸು
ತುಳುಕಿಸು - ಹೊರಚೆಲ್ಲು, ಹೊರ ಉಕ್ಕು

## ದ

ದಲ್ - ಅಲ್ಲದೆ
ದಹಿಸು - ಉರಿಸು
ದಿಗ್ಗಜ - ದಿಕ್ಕಿನ ಆನೆ
ದುರಸ್ಥಿ - ರಿಪೇರಿ
ದೀನ - ಬಡವ
ದುಂದುವೆಚ್ಚ - ಮಿತಿ ಮೀರಿ ಖರ್ಚು ಮಾಡು
ದೋಷ - ತಪ್ಪು

## ಧ

ಧಾರೆ - ಪ್ರವಾಹ, ಮೇಲಿನಿಂದ ಹರಿದು ಬರುವ ನೀರು
ಧುಮುಕು - ಹಾರು
ಧೃತಿಗೆಡು - ಧೈರ್ಯಗುಂದು

## ನ

ನಗದು - ಕೈಯಲ್ಲಿರುವ ಹಣ
ನಭ - ಆಕಾಶ
ನಾಕ - ಸ್ವರ್ಗ
ನಿರ್ದಿಷ್ಟ - ಗೊತ್ತಾದ
ನಿರಂಕುಶ - ಯಾವ ತಡೆಯೂ ಇಲ್ಲದ
ನಿವಾರಿಸು - ಹೋಗಲಾಡಿಸು
ನಿವೇದಿಸು - ವಿಜ್ಞಾಪಿಸು, ವಿನಂತಿಸು
ನುಸುಳು - ಜಾರಿಕೊಳ್ಳು
ನೇತೃತ್ವ - ನಾಯಕತ್ವ
ನೈಸರ್ಗಿಕ - ಸ್ವಾಭಾವಿಕ

## ಪ

ಪಗಡೆ - ಜೂಜಿನ ದಾಳ, ಜೂಜಾಡುವ ಕಾಯಿ
ಪರಮ - ಶ್ರೇಷ್ಠ
ಪಾಣಿಗ್ರಹಣ - ಕೈಹಿಡಿಯುವಿಕೆ, ಮದುವೆ
ಪಾತ್ರಿ - ಪಾತ್ರ ವಹಿಸುವವ
ಪಾರಾಯಣ - ಧರ್ಮಗ್ರಂಥಗಳನ್ನು ಮೊದಲಿನಿಂದ ಕೊನೆಯವರೆಗೆ ಓದುವುದು
ಪುಂಜ - ರಾಶಿ, ಸಮೂಹ
ಪುನೀತ - ಧನ್ಯ
ಪುರಾತನ - ಹಳೆಯ
ಪೊಗಳು - ಹೊಗಳು
ಪೋಲು - ಖರ್ಚು, ದುಂದುವೆಚ್ಚ
ಪ್ರಜ್ಞಾಪೂರ್ವಕ - ತಿಳಿವಳಿಕೆಯಿಂದ
ಪ್ರತ್ಯೇಕ - ಬೇರೆ
ಪ್ರವರ - ಸಂತಾನ, ಗೋತ್ರ

## ಬ

ಬಂಧು - ನಂಟ
ಬಿಂಕ - ಗರ್ವ, ಹೆಮ್ಮೆ
ಬದು - ಹೊಲಗಳ ಅಂಚಿನ ಮಣ್ಣಿನ ದಂಡೆ
ಬಯಕೆ - ಆಸೆ
ಬಿಟ್ಟಿ - ಪ್ರತಿಫಲ ದೊರೆಯದ ಕೆಲಸ
ಬಿಡಾರ - ತಂಗುವ ಸ್ಥಳ
ಬುನಾದಿ - ತಳಪಾಯ
ಬೊಕ್ಕಸ - ಹಣದ ಭಂಡಾರ, ಕೋಶ
ಬೃಹದಾಕಾರ - ದೊಡ್ಡ ಆಕಾರ
ಬೈರಾಗಿ - ವಿರಕ್ತ, ವಿರಾಗಿ

## ಭ

ಭಜಿಸು - ಪೂಜಿಸು
ಭದ್ರ - ಗಟ್ಟಿ
ಭ್ರಮೆ - ಭ್ರಾಂತಿ

## ಮ

ಮನಸ್ತಾಪ - ದ್ವೇಷ
ಮರಳು - ಹಿಂದಿರುಗು
ಮರುಳ - ಹುಚ್ಚ
ಮಸಣ - ಸ್ಮಶಾನ
ಮುಸುಕು - ಆವರಿಸು
ಮುಜುಗರ - ಸಂಕೋಚ
ಮೂಲ - ಹುಟ್ಟು
ಮೊಕ್ಕಾಂ - ತಂಗುವ ಸ್ಥಳ

## ರ

ರಂಬಾಟ - ರಂಪ ಮಾಡುವುದು, ಗಲಾಟೆ
ರಾಯ - ರಾಜ

ರಾರಾಜಿಸು - ಶೋಭಿಸು
ರೋಸು - ಅಸಹ್ಯಪಡು
ರೈನ್‌ಸೆಂಟರ್ (ಆಂಗ್ಲಪದ) - ಮಳೆಸಂಗ್ರಹಣ ಕೇಂದ್ರ

## ಲ

ಲಾಲ್‌ಬಾಗ್ - ಕೆಂಪು ತೋಟ

## ವ

ವಗೈರೆ - ಇತ್ಯಾದಿ
ವಾತ್ಸಲ್ಯ - ಅಕ್ಕರೆ, ಮಮತೆ
ವಾರಾಶಿ - ಸಮುದ್ರ
ವಿಚ್ಛೇದನ - ಮುರಿಯುವಿಕೆ, ತೊರೆಯುವಿಕೆ
ವಿಧಿವಶ - ಅದೃಷ್ಟವಶ, ಸಾವಿಗೀಡಾಗು
ವಿಮುಖ - ಮುಖವನ್ನು ತಿರುಗಿಸಿದ
ವಿಯೋಗ - ಅಗಲಿಕೆ
ವೃತ್ತಾಂತ - ಘಟನೆ, ಸುದ್ದಿ, ಸಂಗತಿ
ವ್ಯಾಧಿ - ಕಾಯಿಲೆ
ವಿಸ್ಮಯ - ಅಚ್ಚರಿ, ಆಶ್ಚರ್ಯ

## ಶ

ಶಠತೆ - ಮೂರ್ಖತನ
ಶಯನ - ಹಾಸಿಗೆ
ಶಿಖರ - ಬೆಟ್ಟದ ತುದಿ
ಶೇಖರಣೆ - ಸಂಗ್ರಹ
ಶೈಶವ - ಬಾಲ್ಯ
ಶ್ಲಾಘನೆ - ಹೊಗಳಿಕೆ

## ಸ

ಸಂಜ್ಞೆ - ಸಂಕೇತ
ಸಂಗ್ರಾಮ - ಯುದ್ಧ
ಸಂಪದ - ಐಶ್ವರ್ಯ
ಸಂಭ್ರಮ - ಉತ್ಸಾಹ, ಸಡಗರ
ಸಂವೇದ್ಯ - ಅನುಭವಕ್ಕೆ ಸಿಗುವಂತಹುದು
ಸಂಕ್ಷಿಪ್ತ - ಚಿಕ್ಕದು, ಸಣ್ಣದು
ಸಖಿ - ಗೆಳತಿ
ಸತತ - ಯಾವಾಗಲು
ಸರತಿ - ಸರದಿ, ಪಾಳಿ
ಸಹಸ್ರ - ಸಾವಿರ
ಸತ್ಕರಿಸು - ಆದರಿಸು
ಸರ್ವೋದಯ - ಎಲ್ಲರ ಏಳಿಗೆ
ಸ್ವತ್ತು - ಆಸ್ತಿ
ಸಾಕ್ಷಿ - ರುಜುವಾತು
ಸಾಗುವಳಿ - ಬೇಸಾಯ
ಸಾಷ್ಟಾಂಗನಮಸ್ಕಾರ - ಎಂಟು ಅಂಗಗಳನ್ನು ನೆಲಕ್ಕೆ ತಾಗಿಸಿ ಮಾಡುವ ನಮಸ್ಕಾರ
ಸೆರೆ - ಬಂಧನ
ಸೆಳೆ - ಆಕರ್ಷಣೆ
ಸೂತ್ರಧಾರ - ಸೂತ್ರವನ್ನು (ದಾರ) ಹಿಡಿದು ಆಡಿಸುವವನು
ಸೊಗಡು - ವಾಸನೆ
ಸೋಸು - ಶೋಧಿಸು

## ಹ

ಹಬೆ - ಕಾಂತಿ, ಆವಿ
ಹಣತೆ - ದೀಪ
ಹಟ್ಟಿ - ಮನೆ, ಮನೆ ಮುಂದಿನ ಅಂಗಳ
ಹರಿಕಾರ - ಓಡುತ್ತ ಹೋಗಿ ಸುದ್ದಿ ಮುಟ್ಟಿಸುವವ, ಗೂಢಚಾರ
ಹಾವುಗೆ - ಚಪ್ಪಲಿ, ಪಾದುಕೆ
ಹಾಸುಹೊಕ್ಕು - ಸಮಗ್ರವಾದುದು, ಬಿಗಿಯಾದ ಹೊಂದಿಕೆ
ಹುಡಿ - ಧೂಳು
ಹೇರಾಸೆ - ದೊಡ್ಡ ಆಸೆ, ಹಿರಿಯ ಆಸೆ
ಹೊನ್ನೊರೆ - ಚಿನ್ನದ ಒರೆ
ಹೊಸೆ - ತಿಕ್ಕು, ಹಗ್ಗವನ್ನು ತಿರಿಚು

# ನಾಡಗೀತೆ

## ಜಯ ಹೇ ಕರ್ನಾಟಕ ಮಾತೆ

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನಚ್ಚಿನ ಬೀಡೆ ;
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು



# ನೋಡು ನಮ್ಮ ಚೆಲುವ ಕನ್ನಡ ನಾಡು




ಮುದ್ರಕರು ಮತ್ತು ಪ್ರಕಾಶಕರು

ಲಾವಣ್ಯ ಮುದ್ರಣ

ನಂ. ೧೯, ೧೫ನೇ ಕ್ರಾಸ್, ಬನಶಂಕರಿ ೧ನೇ ಹಂತ,

ಬೆಂಗಳೂರು - ೫೬೦ ೦೫೦ ☎ : ೨೬೬೦೦೫೬೩


ಬೆಲೆ : ರೂ. ೬-೫೦